ಸೋಮವಾರ, ಮಾರ್ಚ್ 9, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭರತನಾಟ್ಯ...
ಹುಬ್ಬಳ್ಳಿಯಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಭರತನಾಟ್ಯ ಪ್ರದರ್ಶಿಸಿದ ಯುವತಿ

ರೋಡ್ ಶೋ
ಮೈಸೂರು ಅರಮನೆ ಆವರಣದಲ್ಲಿ ಮಹಾನಗರ ಪಾಲಿಕೆ ಆಯೋಜಿಸಿದ್ದ 'ಸ್ವಚ್ಛತಾ ರೋಡ್ ಶೋ'ದಲ್ಲಿ ಕಲಾವಿದ

SHOWROOMS: KARNATAKA: BENGALURU: RENAULT **BANNERGHATTA ROAD** Ph: 9289220872, RENAULT **MYSORE ROAD** Ph: 8527240549, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, RENAULT **YESWANTHPUR** Ph: 9311832962. RENAULT **TUMKUR** Ph: 8527234251.

ಸೋಮವಾರ • ಮಾರ್ಚ್ 9, 2026
ಪ್ರಜಾವಾಣಿ
ಪ್ರಜಾಪ್ಲಸ್
ಮನರಂಜನೆ
ಜಾಹೀರಾತು
ಪ್ರೋತ್ಸಾಹ
ಉದ್ಯಮ ಅಭಿವೃದ್ಧಿ

ಮಿಲನಾ ನಾಗರಾಜ್, ಡಾರ್ಲಿಂಗ್ ಕೃಷ್ಣ

‘ಲವ್‌ಮಾಕ್ಟೇಲ್–3’ ಚಿತ್ರದ ಟ್ರೇಲರ್ ಬಿಡುಗಡೆ

ಡಾರ್ಲಿಂಗ್ ಕೃಷ್ಣ ನಿರ್ದೇಶಿಸಿ, ನಟಿಸಿರುವ ‘ಲವ್‌ಮಾಕ್ಟೇಲ್–3’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ‘ಲವ್‌ಮಾಕ್ಟೇಲ್’ ಸರಣಿಯ ಮುಂದುವರಿದ ಕಥೆಯನ್ನು ಹೊಂದಿರುವ ಚಿತ್ರ ಮಾ.19ರಂದು ತೆರೆಗೆ ಬರಲಿದೆ.

‘ಯಾವುದೋ ಕ್ಷಣದಲ್ಲಿ ಈ ಸಿನಿಮಾದ ಒಂದೆಳೆ ಕಥೆ ಹೊಳೆಯಿತು. ಅದರ ಗುಂಗಿನಲ್ಲಿ ಬರೆಯಲು ಕುಳಿತೆ. ಮನೆಯಲ್ಲಿ ಕಥೆ ಬರೆಯಲು ಸಾಧ್ಯವಿಲ್ಲವೆಂದು ಮೂರು ದಿನಗಳ ಕಾಲ ಗೋವಾಕ್ಕೆ ಹೋಗಿದ್ದೆ. ಅಲ್ಲಿಯೇ ಕಥೆಗೊಂದು ಸ್ವರೂಪ ಸಿಕ್ಕಿದ್ದು. ಚಿತ್ರ ಚೆನ್ನಾಗಿ ಮೂಡಿಬಂದಿದೆ. ಹಾಗಾಗಿ ಬಿಡುಗಡೆಯ ವಾರ ಬೇರೆ ದೊಡ್ಡ ಚಿತ್ರಗಳಿದ್ದರೂ ನಮಗೆ ಭಯವಿಲ್ಲ. ಎಲ್ಲರೂ ಚಿತ್ರ ನೋಡಿ, ಈ ಹಿಂದಿನ ಎರಡು ಭಾಗಗಳಿಗೆ ಕೊಟ್ಟಷ್ಟೇ ಪ್ರೀತಿ, ಪ್ರೋತ್ಸಾಹ ಕೊಡುತ್ತಾರೆಂಬ ನಂಬಿಕೆ ಇದೆ’ ಎಂದರು ಡಾರ್ಲಿಂಗ್ ಕೃಷ್ಣ.

ಮಿಲನಾ ನಾಗರಾಜ್, ಸಂವೃತ, ಅಮೃತಾ ಅಯ್ಯಂಗಾರ್, ದಿಲೀಪ್ ರಾಜ್, ಶ್ವೇತಾ ಪ್ರಸಾದ್, ರಚೆಲ್ ಡೇವಿಡ್, ನಯೇರಾ, ಜಗದೀಶ್, ಅಭಿಲಾಶ್, ಗಿರಿರಾಜ್, ದಳಪತಿ ಮುಂತಾದವರು ಚಿತ್ರದಲ್ಲಿದ್ದಾರೆ. ಶ್ರೀ ಕ್ರೇಜಿ ಮೈಂಡ್ಸ್ ಛಾಯಾಚಿತ್ರಗ್ರಹಣ ಮತ್ತು ಸಂಕಲನ, ನಕುಲ್ ಅಭ್ಯಂಕರ್ ಸಂಗೀತ ಈ ಚಿತ್ರಕ್ಕಿದೆ.

ರವಿಶಂಕರ್, ವಸಿಷ್ಠ ಸಿಂಹ

ಕಡಲ್ ಕೋಟೆಯಲ್ಲಿ ವಸಿಷ್ಠ ಸಿಂಹ

ವಸಿಷ್ಠ ಸಿಂಹ ನಾಯಕನಾಗಿ ಅಭಿನಯಿಸುತ್ತಿರುವ ‘ಕಡಲ್ ಕೋಟೆ’ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ರಂಜಿತ್ ಕುಮಾರ್ ಗೌಡ ಕಥೆ-ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ ಚಿತ್ರಕ್ಕೆ ಧರ್ಮೇಂದ್ರ ಬಂಡವಾಳ ಹೂಡುತ್ತಿದ್ದಾರೆ.

‘ಇದೊಂದು ಕರಾವಳಿ ಪ್ರದೇಶದಲ್ಲಿ ನಡೆಯುವ ಗ್ಯಾಂಗ್‌ಸ್ಟರ್ ಕಥೆ. ಚಿತ್ರದಲ್ಲಿ ಕೌಟುಂಬಿಕ ಸಂಬಂಧ, ಸ್ನೇಹ, ಪ್ರೀತಿ ಎಲ್ಲವೂ ಇರಲಿದೆ. ದುಡ್ಡಿನ ಹಿಂದೆ ಮನುಷ್ಯ ಬಿದ್ದರೆ, ಅವನ ಜೀವನದಲ್ಲಿ ಏನೆಲ್ಲಾ ಘಟಿಸುತ್ತದೆ ಎಂಬುದನ್ನು ಚಿತ್ರದಲ್ಲಿ ತೋರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಕರಾವಳಿಯ ಹಡಗಿನಲ್ಲಿ ನಡೆಯುವ ಶೋಷಣೆ ಮತ್ತು ಸಂಘರ್ಷಗಳೇ ಚಿತ್ರಕಥೆ. ಉಡುಪಿ, ಸುರತ್ಕಲ್, ಮಂಗಳೂರು ಹಾರ್ಬರ್, ಬೇಂಗ್ರೆ ಮುಂತಾದ ಕಡೆ ಚಿತ್ರೀಕರಣ ಮಾಡುವ ಯೋಚನೆ ಇದೆ. ಚಿತ್ರದಲ್ಲಿ ಐದು ಹಾಡುಗಳಿವೆ’ ಎಂದರು ನಿರ್ದೇಶಕ.

ನಾಯಕಿಯಗಿ ಸುಷ್ಮಿತಾ ಭಟ್ ನಟಿಸುತ್ತಿದ್ದು, ರವಿಶಂಕರ್, ಅಚ್ಯುತ್ ಕುಮಾರ್, ಸ್ವರಾಜ್ ಶೆಟ್ಟಿ, ಶರತ್ ಲೋಹಿತಾಶ್ವ, ತಾರಾ, ಬಲ ರಾಜವಾಡಿ, ಯಶ್ ಶೆಟ್ಟಿ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ. ಚಿತ್ರಕ್ಕೆ ಶಶಾಂಕ್ ಶೇಷಗಿರಿ ಸಂಗೀತ, ವೀನಸ್ ನಾಗರಾಜ ಮೂರ್ತಿ ಛಾಯಾಚಿತ್ರಗ್ರಹಣ ಮತ್ತು ಪವನ್ ಗೌಡ ಅವರ ಸಂಕಲನವಿದೆ.

ಸೂರ್ಯ

‘ವಿಶ್ವನಾಥ್ ಆ್ಯಂಡ್ ಸನ್ಸ್’ನಲ್ಲಿ ಸೂರ್ಯ

ತಮಿಳು ನಟ ಸೂರ್ಯ ನಾಯಕನಾಗಿ ನಟಿಸುತ್ತಿರುವ ‘ವಿಶ್ವನಾಥ್ ಆ್ಯಂಡ್ ಸನ್ಸ್’ ತೆಲುಗು ಚಿತ್ರ ಕೆಲ ತಿಂಗಳ ಹಿಂದೆ ಘೋಷಣೆಯಾಗಿತ್ತು. ಇದು ಯಾವುದೇ ಚಿತ್ರದ ರಿಮೇಕ್ ಅಲ್ಲ ಎಂದು ಚಿತ್ರತಂಡ ಸ್ಪಷ್ಟಪಡಿಸಿದೆ. ವೆಂಕಿ ಅಟ್ಲೂರಿ ನಿರ್ದೇಶನದ ಈ ಚಿತ್ರ ಮಲಯಾಳದ ‘ಕಾಂಗರೂ’ ರಿಮೇಕ್ ಎಂಬ ವದಂತಿ ಹರಡಿತ್ತು.

ಪೃಥ್ವಿರಾಜ್ ಸುಕುಮಾರನ್ ನಟನೆಯ ‘ಕಾಂಗರೂ’ 2007ರಲ್ಲಿ ತೆರೆ ಕಂಡಿತ್ತು. ‘ವಿಶ್ವನಾಥ್ ಆ್ಯಂಡ್ ಸನ್ಸ್’ ಕಥೆಯ ಎಳೆಯೂ ಅದೇ ರೀತಿ ಇರುವುದರಿಂದ, ಇದೊಂದು ರಿಮೇಕ್ ಚಿತ್ರ ಎಂದು ಸುದ್ದಿಯಾಗಿತ್ತು. ಈ ಕಥೆಯನ್ನು ವೆಂಕಿ ಅಟ್ಲೂರಿ ಅವರೇ ರಚಿಸಿದ್ದು ಬೇರೆ ಯಾವುದೇ ಕಥೆಯ ಸ್ಫೂರ್ತಿ ಕೂಡ ಅಲ್ಲ ಎಂದು ಚಿತ್ರತಂಡ ಹೇಳಿದೆ. ವೆಂಕಿ ಅಟ್ಲೂರಿ ಅವರ ಹಿಂದಿನ ಚಿತ್ರ ‘ಲಕ್ಕಿ ಭಾಸ್ಕರ್’ ಸೂಪರ್ ಹಿಟ್ ಆಗಿತ್ತು.

ಸತತ ಸೋಲುಗಳಿಂದ ಕಂಗೆಟ್ಟಿರುವ ಸೂರ್ಯ ದೊಡ್ಡ ಯಶಸ್ಸಿಗೆ ಎದುರು ನೋಡುತ್ತಿದ್ದಾರೆ. ಅವರ ಹಿಂದಿನ ಚಿತ್ರ ‘ರೆಟ್ರೊ’ ಬಾಕ್ಸಾಫೀಸ್‌ನಲ್ಲಿ ಅಂಥ ಯಶಸ್ಸು ಗಳಿಸಿರಲಿಲ್ಲ. ಹೀಗಾಗಿ ಕಥೆ ಆಯ್ಕೆಯಲ್ಲಿ ಸೂರ್ಯ ಎಚ್ಚರಿಕೆ ವಹಿಸುತ್ತಿದ್ದಾರೆ. ‘ವಿಶ್ವನಾಥ್ ಆ್ಯಂಡ್ ಸನ್ಸ್’ಗೆ ಮಮಿತಾ ಬೈಜು ನಾಯಕಿ. ರವೀನಾ ಟಂಡನ್ ಕೂಡ ಪ್ರಮುಖ ಪಾತ್ರದಲ್ಲಿದ್ದಾರೆ.

ಸೂರ್ಯ ಅವರ ‘ಕರುಪ್ಪು’ ಈ ವರ್ಷ ಏ.10ರಂದು ತೆರೆಗೆ ಬರುವ ನಿರೀಕ್ಷೆಯಿದೆ. ಆರ್.ಜೆ. ಬಾಲಾಜಿ ನಿರ್ದೇಶನದ ಈ ಚಿತ್ರದ ಮೇಲೆ ಸೂರ್ಯ ಹೆಚ್ಚು ಭರವಸೆ ಇಟ್ಟುಕೊಂಡಿದ್ದಾರೆ ಎಂದು ತಮಿಳು ಮಾಧ್ಯಮಗಳು ವರದಿ ಮಾಡಿವೆ.

ಚಿಟಿಕೆ ಸುದ್ದಿ

ವಿಬಿ ಜಿ ರಾಮ್ ಜಿ ಲಾಂಛನ ವಿನ್ಯಾಸ ಸ್ಪರ್ಧೆಗೆ ಆಹ್ವಾನ

ನವದೆಹಲಿ(ಪಿಟಿಐ): ವಿಬಿ ಜಿ ರಾಮ್ ಜಿ ಕಾಯ್ದೆ ಲಾಂಛನ ವಿನ್ಯಾಸಗೊಳಿಸುವ ಸ್ಪರ್ಧೆಯನ್ನು ‘ಸರ್ಕಾರದ ನಾಗರಿಕ ಸಂಪರ್ಕ ವೇದಿಕೆ MyGov ನಲ್ಲಿ ಆರಂಭಿಸಲಾಗಿದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ತಿಳಿಸಿದೆ.

ಗ್ರಾಮೀಣ ಸಬಲೀಕರಣ, ಉದ್ಯೋಗ ಸೃಷ್ಟಿ ಮತ್ತು ಸಮಗ್ರ ಅಭಿವೃದ್ಧಿಯ ದೃಷ್ಟಿಕೋನವನ್ನು ಪ್ರತಿಬಿಂಬಿಸುವ ನವೀನ ವಿನ್ಯಾಸಗಳನ್ನು ಸಲ್ಲಿಸುವಂತೆ ಸಚಿವಾಲಯ ಕೋರಿದೆ.

ಲಾಂಛನ ವಿನ್ಯಾಸಗಳನ್ನು ಸಲ್ಲಿಸಲು ಕೊನೆಯ ದಿನ ಮಾರ್ಚ್ 20. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ₹50,000 ನಗದು ಬಹುಮಾನವನ್ನು ಘೋಷಿಸಲಾಗಿದೆ.

‘ಭಾರತ ಎಲ್ಲೋ ಕಳೆದು ಹೋಗಿದೆ’



ಮುಂಬೈ (ಪಿಟಿಐ): ‘ಪಶ್ಚಿಮ ಏಷ್ಯಾದಲ್ಲಿನ ಯುದ್ಧ, ಅದಕ್ಕೆ ಸಂಬಂಧಿಸಿದ ಬೆಳವಣಿಗೆಗಳನ್ನು ಗಮನಿಸಿದರೆ, ಭಾರತವು ಎಲ್ಲೋ ಕಳೆದು ಹೋಗಿದೆ. ಅಮೆರಿಕ ಮತ್ತು ಇಸ್ರೇಲ್ ದೇಶಗಳು ದಾದಾಗಿರಿ ನಡೆಸುತ್ತಿದ್ದರೆ, ಭಾರತದಂಥ ದೊಡ್ಡ ದೇಶವೊಂದು ಇವರ ಏಜೆಂಟನಂತೆ ವರ್ತಿಸುತ್ತಿದೆ’ ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಿವಸೇನಾ (ಯಬಿಟಿ) ಮುಖವಾಣಿ ‘ಸಾಮ್ನಾ’ದ ತಮ್ಮ ಅಂಕಣ ‘ರೋಕ್‌ಟೋಕ್’ನಲ್ಲಿ ರಾವುತ್ ಅವರು ಯುದ್ಧ, ಅದಕ್ಕೆ ಭಾರತದ ಪ್ರತಿಕ್ರಿಯೆ ಸೇರಿ ಹಲವು ವಿಚಾರಗಳ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

‘ಯುದ್ಧ ನಿಲ್ಲಿಸಲು ಭಾರತವು ನೇತೃತ್ವ ವಹಿಸಿಕೊಳ್ಳಬೇಕಿತ್ತು. ಇದಾಗದೆ ಇದ್ದಿದ್ದರಿಂದ ಭಾರತದ ನಾಯಕತ್ವವು ಎಷ್ಟು ಟೊಳ್ಳಾಗಿದೆ ಎಂಬುದು ಜಗತ್ತಿನೆದುರು ಬಹಿರಂಗವಾದಂತಾಗಿದೆ. ಯುದ್ಧದಂಥ ಈ ಬಿಕ್ಕಟ್ಟಿನ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಒಂದು ಮಾತನ್ನೂ ಆಡಲಿಲ್ಲ’ ಎಂದಿದ್ದಾರೆ.

‘ವೀರ ಚಕ್ರ’ ಪುರಸ್ಕೃತ ಕೆ.ಜಿ ಜಾರ್ಜ್ ನಿಧನ

ನವದೆಹಲಿ (ಪಿಟಿಐ): 1965ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಹೋರಾಡಿ, ವೀರ ಚಕ್ರಪ್ರಶಸ್ತಿ ಪಡೆದಿದ್ದ, ಲ್ಯಾನ್ಸ್ ಹವಾಲ್ದಾರ್ ಕೆ.ಜಿ ಜಾರ್ಜ್ (95) ಶನಿವಾರ ನಿಧನರಾದರು.

‘ಕೇರಳದ ಕೊಟ್ಟಾಯಂನ ತಮ್ಮ ನಿವಾಸದಲ್ಲಿ, ವಯೋಸಹಜ ಅನಾರೋಗ್ಯದಿಂದ ಅವರು ಮೃತಪಟ್ಟಿದ್ದಾರೆ. ನನ್ನ ತಂದೆ ಮತ್ತು ಸಹೋದರ ಸದ್ಯ ದುಬೈನಲ್ಲಿದ್ದು, ಅವರು ಬಂದ ಬಳಿಕ ಅಂತ್ಯಕ್ರಿಯೆ ನೆರವೇರಿಸಲಾಗುವುದು’ ಎಂದು ಅವರ ಮೊಮ್ಮಗ ರೆಮೊ ಜಾನ್ ತಿಳಿಸಿದರು.

ಸೇನೆಯ ‘ಕಾರ್ಪ್ಸ್ ಆಫ್ ಸಿಗ್ನಲ್ಸ್’ ಘಟಕದಲ್ಲಿ ಜಾರ್ಜ್ ಕಾರ್ಯನಿರ್ವಹಿಸಿದ್ದಾರೆ. 1965ರಲ್ಲಿ ನಡೆದ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಜೀವದ ಹಂಗು ತೊರೆದು ಹೋರಾಡಿದ್ದರು.

ಸ್ಪೀಕರ್ ವಿರುದ್ಧ ಅವಿಶ್ವಾಸ: ಇಂದು ಚರ್ಚೆಗೆ

ಇಂದಿನಿಂದ ಬಜೆಟ್ ಅಧಿವೇಶನ ದ್ವಿತೀಯಾರ್ಧ ಪುನರಾರಂಭ

ನವದೆಹಲಿ (ಪಿಟಿಐ): ಸಂಸತ್ತಿನ ಬಜೆಟ್ ಅಧಿವೇಶನದ ದ್ವಿತೀಯಾರ್ಧ ಸೋಮವಾರದಿಂದ ಪುನರಾರಂಭವಾಗಲಿದ್ದು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿರುದ್ಧ ವಿರೋಧ ಪಕ್ಷಗಳು ಸಲ್ಲಿಸಿರುವ ಅವಿಶ್ವಾಸ ನಿರ್ಣಯ ಮಂಡನೆಯ ಪ್ರಸ್ತಾವ ಮೊದಲ ದಿನವೇ ಚರ್ಚೆಗೆ ಬರಲಿದೆ.

ಅವಿಶ್ವಾಸ ನಿರ್ಣಯಕ್ಕೆ ಸಂಬಂಧಿಸಿದಂತೆ 118 ಸಂಸದರು ನೀಡಿರುವ ನೋಟಿಸ್ ಬಗ್ಗೆ ಚರ್ಚೆಗೆ ಕಾಂಗ್ರೆಸ್ ಆಗ್ರಹಿಸಿದೆ. ನಿರ್ಣಯವನ್ನು ಬೆಂಬಲಿಸುವುದಾಗಿ ಈಗಾಗಲೇ ತೃಣಮೂಲ ಕಾಂಗ್ರೆಸ್ ಹೇಳಿದೆ. ಕಲಾಪ ಆರಂಭವಾಗುತ್ತಿದ್ದಂತೆ ಅವಿಶ್ವಾಸ ನಿರ್ಣಯದ ಚರ್ಚೆಗೆ ವಿರೋಧ ಪಕ್ಷಗಳು ಮುಗಿಬೀಳಲಿವೆ.

ಸೋಮವಾರ ನಿಗದಿಯಾಗಿರುವ ಕಲಾಪ ಪಟ್ಟಿಯಲ್ಲಿ ‘ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯ’ದ ವಿಷಯ ಮಾತ್ರ ಇದೆ. ಆದರೆ, ಅಧಿವೇಶನದ ದ್ವಿತೀಯಾರ್ಧ ಏಪ್ರಿಲ್ 2ರವರೆಗೆ ನಡೆಯಲಿದ್ದು, ಪಶ್ಚಿಮ ಏಷ್ಯಾ ಸಂಘರ್ಷ, ಭಾರತ-ಅಮೆರಿಕ ವ್ಯಾಪಾರ ಒಪ್ಪಂದ, ಎಪ್‌ಸ್ಟೀನ್ ಫೈಲ್ಸ್, ರಷ್ಯಾದಿಂದ ತೈಲ ಖರೀದಿ ವಿಚಾರ ಪ್ರಮುಖವಾಗಿ ಚರ್ಚೆಗೆ ಬರುವ ಸಾಧ್ಯತೆ ಇದೆ. ಬಜೆಟ್ ಅಧಿವೇಶನದ ಮೊದಲ ಭಾಗ ಜನವರಿ 28ರಿಂದ ಫೆಬ್ರುವರಿ 13ರವರೆಗೆ ನಡೆದಿತ್ತು.

ಸ್ಪೀಕರ್ ಓಂ ಬಿರ್ಲಾ ಅವರು ಕಾಂಗ್ರೆಸ್ ಸದಸ್ಯರ ವಿರುದ್ಧ ಕೆಲವು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ, ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ನೀಡಲು ಪ್ರಧಾನಿ ಅವರು ಸದನಕ್ಕೆ ಬರಲು ಹಿಂದೇಟು ಹಾಕುತ್ತಿದ್ದಾರೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ಸ್ಪೀಕರ್ ಅವರನ್ನು ಬೆಂಬಲಿಸಿ ಶನಿವಾರ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ, ‘ಸ್ಪೀಕರ್ ಸಂಸತ್ತಿನ ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ. ಸಂವಿಧಾನ ಮತ್ತು ಸಂಸದೀಯ ಪ್ರಜಾಪ್ರಭುತ್ವದ ತತ್ವಗಳಿಗೆ ಅವರು ಬದ್ಧರಾಗಿದ್ದಾರೆ’ ಎಂದು ಹೇಳಿದ್ದರು.

ಫೆಬ್ರುವರಿ 10ರಂದು ನೋಟಿಸ್ ಸಲ್ಲಿಸಿದ ದಿನಾಂಕದಿಂದ ಬಿರ್ಲಾ ಅವರು ಸದನದ ಕಲಾಪಗಳಿಂದ ಹಿಂದೆ ಸರಿದಿದ್ದರು. ಕಾರ್ಯಸೂಚಿ ಇತ್ಯರ್ಥವಾದ ನಂತರವೇ ಅವರು ಹಿಂತಿರುಗುತ್ತಾರೆ ಎಂದು ಲೋಕಸಭಾ ಸಚಿವಾಲಯ ತಿಳಿಸಿದೆ.

ಎಸ್‌ಐಆರ್ ಕುರಿತು ಚರ್ಚೆ: ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಂತರ ಸುಮಾರು 60 ಲಕ್ಷದಷ್ಟು ಮತದಾರರನ್ನು ಪಟ್ಟಿಯಿಂದ ಕೈಬಿಟ್ಟಿರುವ ವಿಷಯವೂ ಅಧಿವೇಶನದಲ್ಲಿ ಗದ್ದಲಕ್ಕೆ ಕಾರಣವಾಗಬಹುದು.

ತಮಿಳುನಾಡು, ಕೇರಳ, ಪುದುಚೇರಿ, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯ ಕಾರಣದಿಂದ ಈ ಚರ್ಚೆ ಮಹತ್ವ ಪಡೆದುಕೊಂಡಿದೆ. ಟಿಎಂಸಿ ಸಂಸದರು ಎಸ್‌ಐಆರ್ ವಿಷಯ ಪ್ರಸ್ತಾಪಿಸಲು ಸಿದ್ಧತೆ ಮಾಡಿಕೊಂಡಿದ್ದರೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಇತ್ತೀಚಿನ ಪಶ್ಚಿಮ ಬಂಗಾಳ ಭೇಟಿಯ ಸಂದರ್ಭದಲ್ಲಿ ಆಗಿರುವ ಶಿಷ್ಟಾಚಾರ ಉಲ್ಲಂಘನೆಗೆ ಸಂಬಂಧಿಸಿದ ವಿಷಯವನ್ನು ಬಿಜೆಪಿ ಪ್ರಸ್ತಾಪಿಸುವ ಸಾಧ್ಯತೆ ಇದೆ.

ಸರ್ಕಾರವು ಬಜೆಟ್ ಅಧಿವೇಶನದ ದ್ವಿತೀಯಾರ್ಧದಲ್ಲಿ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಮಂಡಿಸುವ ಸಾಧ್ಯತೆ ಇದೆ.

ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ	
ಜಿ.ವಿ. ಮಾವ್ಳಂಕರ್	1954
ಹುಕುಮ್ ಸಿಂಗ್	1966
ಬಲರಾಂ ಜಾಖಡ್	1987

‘ಸದಸ್ಯರ ಸಾಲಿನಲ್ಲಿ ಕೂರಲಿರುವ ಸ್ಪೀಕರ್’

ಸ್ಪೀಕರ್ ಓಂ ಬಿರ್ಲಾ ಅವರು ಸೋಮವಾರ ಕಲಾಪದ ಅಧ್ಯಕ್ಷತೆ ವಹಿಸುವುದಿಲ್ಲ. ಅವರ ವಿರುದ್ಧ ಅವಿಶ್ವಾಸ ನಿರ್ಣಯ ಕೋರಿ ಸಲ್ಲಿಸಲಾದ ನೋಟಿಸ್ ಅನ್ನು ಸದನವು ಚರ್ಚೆಗೆ ಕೈಗೆತ್ತಿಕೊಳ್ಳಲಿರುವುದರಿಂದ ಅವರು ಸದಸ್ಯರ ಸಾಲಿನಲ್ಲಿ ಕುಳಿತುಕೊಳ್ಳಲಿದ್ದಾರೆ.

ಪ್ರಶ್ನೋತ್ತರ ಅವಧಿ ಮುಂದೂಡಿಕೆ: ಲೋಕಸಭೆಯಲ್ಲಿ ಸೋಮವಾರ 11ರಿಂದ 12 ಗಂಟೆವರೆಗೆ ಪ್ರಶ್ನೋತ್ತರ ಅವಧಿ ಇರುವುದಿಲ್ಲ. ಫೆಬ್ರುವರಿ 19ರಂದು ನಿಧನರಾದ ಶಿಲ್ಲಾಂಗ್ ಸಂಸದ ರಿಕಿ ಸಿಂಗ್ಕಾನ್ ಅವರ ಗೌರವಾರ್ಥವಾಗಿ ಪ್ರಶ್ನೋತ್ತರ ಅವಧಿಯನ್ನು ಮುಂದೂಡಲಾಗಿದೆ.

ನಿತೀಶ್ ಪುತ್ರ, ಎಂಜಿನಿಯರಿಂಗ್ ಪದವೀಧರ

‘ನನ್ನ ತಂದೆಯವರು ರಾಜ್ಯಸಭೆಗೆ ಸ್ಪರ್ಧಿಸಲು ನಿರ್ಧರಿಸಿದ್ದಾರೆ. ಅದು ಅವರ ವೈಯಕ್ತಿಕ ನಿರ್ಧಾರ. ಅದನ್ನು ಗೌರವಿಸುತ್ತೇನೆ’

ನಿಶಾಂತ್ ಜೆಡಿಯುಗೆ ಸೇರ್ಪಡೆ

ಪಟ್ನಾ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಅವರು ಭಾನುವಾರ ಜೆಡಿ(ಯು) ಪಕ್ಷಕ್ಕೆ ಸೇರ್ಪಡೆಯಾದರು.

ಎಂಜಿನಿಯರಿಂಗ್ ಪದವೀಧರರಾಗಿರುವ ನಿಶಾಂತ್(40) ಅವರ ಪಕ್ಷದ ಸೇರ್ಪಡೆ ಕಾರ್ಯಕ್ರಮವು ಪಕ್ಷದ ಪ್ರಧಾನ ಕಚೇರಿಯಲ್ಲಿ, ಕೇಂದ್ರ ಸಚಿವ ರಾಜೀವ್ ರಂಜನ್ ಸಿಂಗ್ ಮತ್ತು ಜೆಡಿ(ಯು) ರಾಷ್ಟ್ರೀಯ ಕಾರ್ಯಾಧ್ಯಕ್ಷ ಸಂಜಯ್ ಝಾ ಅವರ ಸಮ್ಮುಖದಲ್ಲಿ ನಡೆಯಿತು.

‘ನನ್ನ ತಂದೆಯವರು ರಾಜ್ಯಸಭೆಗೆ ಸ್ಪರ್ಧಿಸಲು ನಿರ್ಧರಿಸಿದ್ದಾರೆ. ಅದು ಅವರ ವೈಯಕ್ತಿಕ ನಿರ್ಧಾರ. ನಾವು ಅದನ್ನು ಗೌರವಿಸುತ್ತೇವೆ. ಅವರ ಮಾರ್ಗದರ್ಶನದಲ್ಲಿ ನಾವು ಕೆಲಸ ಮಾಡುತ್ತೇವೆ. ಪಕ್ಷವನ್ನು ಬಲಪಡಿಸಲು ನಾನು ಪ್ರಯತ್ನಿಸುತ್ತೇನೆ’ ಎಂದು ನಿಶಾಂತ್ ಹೇಳಿದರು.

‘ಅತಿ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ ನಿತೀಶ್ ಅವರನ್ನು ರಾಜ್ಯದ ಜನತೆ ಎಂದಿಗೂ ಮರೆಯುವುದಿಲ್ಲ’ ಎಂದರು.

ನಿಶಾಂತ್ ಅವರಿಗೆ ಪಕ್ಷದ ಕಚೇರಿಯಲ್ಲಿ ಅದ್ದೂರಿ ಸ್ವಾಗತ ದೊರೆಯಿತು, ಕಚೇರಿಯ ಹೊರಗೆ ಪಕ್ಷದ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

‘ನಿಶಾಂತ್ ಅವರನ್ನು ಉಪ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲು ಸರ್ವಾನುಮತದಿಂದ ನಿರ್ಧರಿಸಲಾಗಿದೆ. ಮುಂದಿನ ತಿಂಗಳು ಅವರು ವಿಧಾನ ಪರಿಷತ್‌ಗೆ ಆಯ್ಕೆಯಾಗಲಿದ್ದಾರೆ’ ಎಂದು ನಿತೀಶ್ ಅವರ ಆಪ್ತ ಶಾಸಕ ಹರಿ ನಾರಾಯಣ ಸಿಂಗ್ ಶನಿವಾರ ತಿಳಿಸಿದ್ದರು.

ಬಣ್ಣದೋಕುಳಿ..

ಪಿಟಿಐ ಚಿತ್ರ

ಮಧ್ಯಪ್ರದೇಶದ ಇಂದೋರ್‌ನಲ್ಲಿ ರಂಗಪಂಚಮಿ ಅಂಗವಾಗಿ ಭಾನುವಾರ ನಡೆದ ಮೆರವಣಿಗೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು

ರಾಜೀನಾಮೆ ಪ್ರಜ್ಞಾಪೂರ್ವಕ ನಿರ್ಧಾರ: ಬೋಸ್

ಆನಂದಬೋಸ್

ಕೋಲ್ಕತ್ತ (ಪಿಟಿಐ): ‘ಪಶ್ಚಿಮ ಬಂಗಾಳದ ರಾಜ್ಯಪಾಲರ ಹುದ್ದೆಗೆ ರಾಜೀನಾಮೆ ನೀಡಿದ್ದು ನನ್ನ ಪ್ರಜ್ಞಾಪೂರ್ವಕ ನಿರ್ಧಾರ’ ಎಂದು ಸಿ.ವಿ. ಆನಂದ ಬೋಸ್ ಅವರು ಭಾನುವಾರ ಇಲ್ಲಿ ಹೇಳಿದ್ದಾರೆ.

‘ಸೂಕ್ತ ಸಮಯ ಬರುವ ತನಕ ಹುದ್ದೆಯಿಂದ ನಿರ್ಗಮನವಾದ ಕಾರಣಗಳು ಗೋಪ್ಯವಾಗಿರುತ್ತವೆ’ ಎಂದಿದ್ದಾರೆ. ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬೋಸ್ ಅವರು, ‘ವಿಧಾನಸಭಾ ಚುನಾವಣೆಯಲ್ಲಿ ಮತ ಚಲಾಯಿಸಲು ಮತ್ತೆ ಬಂಗಾಳಕ್ಕೆ ಬರುತ್ತೇನೆ’ ಎಂದು ಹೇಳಿದರು.

ರಾಜ್ಯಪಾಲರ ಹುದ್ದೆಗೆ ರಾಜೀನಾಮೆ ನೀಡುವ ಒಂದು ವಾರಕ್ಕೂ ಮುನ್ನ ಕೇರಳ ಮೂಲದ ಬೋಸ್ ಅವರು ತಮ್ಮ ಮತದಾನದ ಸ್ಥಳವನ್ನು ಪಶ್ಚಿಮ ಬಂಗಾಳಕ್ಕೆ ಬದಲಾಯಿಸಿಕೊಂಡಿದ್ದಾರೆ.

ರಾಜ್ಯದಲ್ಲಿ ಶಿಷ್ಟಾಚಾರ ಉಲ್ಲಂಘನೆಗೆ ಸಂಬಂಧಿಸಿದಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೀಡಿರುವ ಹೇಳಿಕೆಗೆ ಬೋಸ್ ಪ್ರತಿಕ್ರಿಯಿಸಲು ನಿರಾಕರಿಸಿದರು.

ಸಿಇಸಿ ನೇತೃತ್ವದ ತಂಡದಿಂದ ಇಂದು, ನಾಳೆ ಸಭೆ

ಜ್ಞಾನೇಶ್ ಕುಮಾರ್

ನವದೆಹಲಿ(ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗೆ ಮಾಡಲಾಗಿರುವ ಸಿದ್ಧತೆಗಳನ್ನು ಪರಿಶೀಲಿಸಲು ಕೇಂದ್ರ ಚುನಾವಣಾ ಆಯೋಗ ಮುಂದಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ನೇತೃತ್ವದ ಉನ್ನತಾಧಿಕಾರಿಗಳಿರುವ ತಂಡವು ಇದೇ 9 ಹಾಗೂ 10ರಂದು ಪಶ್ಚಿಮ ಬಂಗಾಳ ಪ್ರವಾಸ ಕೈಗೊಂಡಿದ್ದು, ಅಲ್ಲಿನ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದೆ ಎಂದು ತಿಳಿಸಿದ್ದಾರೆ.

ಸಿಇಸಿ ನೇತೃತ್ವದ ತಂಡವು ಭಾನುವಾರ ರಾತ್ರಿ ಕೋಲ್ಕತ್ತ ತಲುಪಿದೆ. ವಿವಿಧ ರಾಜಕೀಯ ಪಕ್ಷಗಳು, ರಾಜ್ಯದ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳ ಜೊತೆ ಸೋಮವಾರ ಹಾಗೂ ಮಂಗಳವಾರ ಈ ತಂಡ ಸಭೆ ನಡೆಸಲಿದೆ. ತಮಿಳುನಾಡು, ಕೇರಳ, ಅಸ್ಸಾಂ ಹಾಗೂ ಪುದುಚೇರಿ ವಿಧಾನಸಭೆಗಳ ಅವಧಿ ಕೂಡ ಮೇ ಮತ್ತು ಜೂನ್‌ನಲ್ಲಿ ಅಂತ್ಯಗೊಳ್ಳಲಿದೆ. ಹೀಗಾಗಿ, ಪಶ್ಚಿಮ ಬಂಗಾಳ ಪ್ರವಾಸ ಬಳಿಕ ಈ ತಂಡವು ಇತರ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಲಿದೆ.

ಉಸ್ಮಾನ್ ಹಾದಿ ಕೊಲೆ: ಇಬ್ಬರ ಸೆರೆ

ಅಪರಾಧ ಸುದ್ದಿ

ನವದೆಹಲಿ(ಎಎಫ್‌ಪಿ): ಬಾಂಗ್ಲಾ ದೇಶದ ಯುವ ನಾಯಕ ಶರೀಫ್ ಉಸ್ಮಾನ್ ಹಾದಿ ಅವರ ಕೊಲೆ ಪ್ರಕರಣದ ಆರೋಪಿಗಳಿಬ್ಬರನ್ನು ಬಂಧಿಸಿದ್ದಾಗಿ ಪಶ್ಚಿಮ ಬಂಗಾಳ ಪೊಲೀಸರು ಭಾನುವಾರ ಹೇಳಿದ್ದಾರೆ.

‘ಈ ಇಬ್ಬರು ಆರೋಪಿಗಳು ಅಕ್ರಮವಾಗಿ ಭಾರತ ಪ್ರವೇಶಿಸಿದ ಕಾರಣಕ್ಕೆ ಬಂಧಿಸಲಾಗಿದೆ. ಅವರನ್ನು ವಿಚಾರಣೆಗೆ ಒಳಪಡಿಸಲಾಗಿದ್ದು, ಹಾದಿ ಕೊಲೆ ಪ್ರಕರಣದಲ್ಲಿ ಅವರ ಪಾತ್ರ ಇರುವುದು ಮೇಲ್ನೋಟಕ್ಕೆ ಕಂಡುಬಂದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಅಕ್ರಮವಾಗಿ ಭಾರತ ಪ್ರವೇಶಿಸಿದ್ದ ಈ ಇಬ್ಬರು, ಗಡಿ ಭಾಗದಲ್ಲಿ ಆಶ್ರಯ ಪಡೆದು ಕೆಲ ದಿನಗಳ ಬಳಿಕ ಬಾಂಗ್ಲಾದೇಶಕ್ಕೆ ವಾಸಪಾಗುವ ಉದ್ದೇಶ ಹೊಂದಿದ್ದರು ಎಂಬ ಬಗ್ಗೆ ನಂಬಲರ್ಹ ಮೂಲಗಳಿಂದ ಮಾಹಿತಿ ಲಭಿಸಿತ್ತು. ಇದನ್ನು ಆಧರಿಸಿ, ಕಾರ್ಯಾಚರಣೆ ಕೈಗೊಂಡು ಇಬ್ಬರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೀಸಲಾತಿ ವಿರೋಧಿ ಹೋರಾಟದ ಮುಂಚೂಣಿಯಲ್ಲಿದ್ದ 32 ವರ್ಷದ ಯುವ ನಾಯಕ ಶರೀಫ್ ಉಸ್ಮಾನ್ ಹಾದಿ ಅವರ ಮೇಲೆ ಕಳೆದ ವರ್ಷ ಢಾಕಾದಲ್ಲಿ ಗುಂಡು ಹಾರಿಸಲಾಗಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಸಿಂಗಪುರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಆಸ್ಪತ್ರೆಯಲ್ಲೇ ಮೃತಪಟ್ಟಿದ್ದರು.

ಕೊಲೆ ಆರೋಪಿಗೆ ಮೆರವಣಿಗೆ ಸ್ವಾಗತ

ಗುರುಗ್ರಾಮ (ಪಿಟಿಐ): ಇಬ್ಬರು ಮುಸ್ಲಿಂ ವ್ಯಕ್ತಿಗಳನ್ನು ಕೊಲೆ ಮಾಡಿದ ಆರೋಪದಲ್ಲಿ ಬಂಧನಕ್ಕೀಡಾಗಿ, ಇದೀಗ ಜಾಮೀನಿನ ಮೇರೆಗೆ ಜೈಲಿನಿಂದ ಹೊರಬಂದಿರುವ ಬಜರಂಗ ದಳ ಕಾರ್ಯಕರ್ತ ಮೋನು ಮಾನೇಸರ್‌ನನ್ನು ಅದ್ದೂರಿಯಾಗಿ ಮೆರವಣಿಗೆ ಮೂಲಕ ಸ್ವಗ್ರಾಮಕ್ಕೆ ಜನರು ಸ್ವಾಗತಿಸಿರುವ ಘಟನೆ ರಾಜಸ್ಥಾನದಲ್ಲಿ ನಡೆದಿದೆ.

2023ರಲ್ಲಿ ಜಾನುವಾರು ಕಳ್ಳಸಾಗಣೆ ಶಂಕೆಯ ಮೇರೆಗೆ ಜುನೈದ್ ಹಾಗೂ ನಾಸಿರ್ ಎಂಬವರನ್ನು ಕೊಲೆ ಮಾಡಲಾಗಿತ್ತು. ಕೊಲೆ ಆರೋಪದಡಿ ಮೋನುವನ್ನು ಬಂಧಿಸಲಾಗಿತ್ತು. ರಾಜಸ್ಥಾನದ ಭರತಪುರ ಕೇಂದ್ರ ಕಾರಾಗೃಹದಲ್ಲಿ ಎರಡೂವರೆ ವರ್ಷಗಳಿಂದ ನ್ಯಾಯಾಂಗ ಬಂಧನದಲ್ಲಿದ್ದ ಮೋನುಗೆ ಮಾ.5ರಂದು ರಾಜಸ್ಥಾನ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ಆರೋಪಿಯಾಗಿರುವ ಮೋನು ಬಿಡುಗಡೆಯಾಗುತ್ತಿದ್ದಂತೆಯೇ ಆರೋಪಿಯ ಬೆಂಬಲಿಗರು ಖುದ್ದು ರಾಜಸ್ಥಾನಕ್ಕೆ ತೆರಳಿ, ಆತನನ್ನು ಗ್ರಾಮಕ್ಕೆ ಕರೆತಂದಿದ್ದಾರೆ. ಈ ವೇಳೆ ಗ್ರಾಮಸ್ಥರು ಮೋನುಗೆ ಹಾರ ಹಾಕಿ, ವಾದನಗಳ ಮೂಲಕ ಸ್ವಾಗತಿಸಿದರು.

ಅಮೆರಿಕ ಉತ್ಪನ್ನ ತಿರಸ್ಕರಿಸಿ: ಲೇಖಕಿ ಸಾರಾ

ತಿರುವನಂತಪುರ(ಪಿಟಿಐ): ಅಮೆರಿಕದ ಕೆಲವು ಕಾರ್ಪೊರೇಟ್ ಕಂಪನಿಗಳು, ಇತರ ದೇಶಗಳ ಮೇಲೆ ಅಮೆರಿಕ ನಡೆಸುತ್ತಿರುವ ಯುದ್ಧವನ್ನು ಬೆಂಬಲಿಸುತ್ತಿದ್ದು, ಅಂಥ ಕಂಪನಿಗಳ ಉತ್ಪನ್ನಗಳನ್ನು ಬಹಿಷ್ಕರಿಸಬೇಕು ಎಂದು ಮಲಯಾಳದ ಪ್ರಸಿದ್ಧ ಲೇಖಕಿ ಸಾರಾ ಜೋಸೆಫ್ ಕರೆ ನೀಡಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ, ಅಮೆರಿಕ ಮತ್ತು ಇಸ್ರೇಲ್‌ನ ನೀತಿಗಳ ವಿರುದ್ಧ ಮಹಿಳೆಯರು ತಮ್ಮ ಪ್ರತಿಭಟನೆಯನ್ನು ದಾಖಲಿಸಬೇಕು’ ಎಂದು ಸಾರಾ ಒತ್ತಾಯಿಸಿದರು.

ಈ ಕುರಿತು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿರುವ ಸಾರಾ ಅವರು ಟೂತ್‌ಪೇಸ್ಟ್, ಶಾಂಪೂಗಳು ಮತ್ತು ಇತರ ಬ್ರಾಂಡ್‌ಗಳ ಬಗ್ಗೆ ನಿರ್ದಿಷ್ಟವಾಗಿ ಉಲ್ಲೇಖಿಸಿದ್ದಾರೆ.

ಹೈಕೋರ್ಟ್‌ಗಳ ಕೊಲಿಜಿಯಂಗೆ ಸಿಜೆಐ ಸೂರ್ಯ ಕಾಂತ್ ಸಲಹೆ

‘ನ್ಯಾಯಮೂರ್ತಿ ಹುದ್ದೆಗೆ ವಕೀಲೆಯರ ಪರಿಗಣಿಸಿ’



ಸೂರ್ಯ ಕಾಂತ್

ನವದೆಹಲಿ (ಪಿಟಿಐ): ‘ಕಾನೂನು ಕ್ಷೇತ್ರದಲ್ಲಿ ಹೆಚ್ಚಿನ ಮಹಿಳೆಯರು ಭಾಗವಹಿಸುವಂತೆ ಮಾಡಲು ನ್ಯಾಯಾಂಗ ವ್ಯವಸ್ಥೆಯಲ್ಲಿ ಸಾಂಸ್ಥಿಕ ಸುಧಾರಣೆ ತರುವ ಅಗತ್ಯವಿದೆ’ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಭಾನುವಾರ ಅಭಿಪ್ರಾಯಪಟ್ಟರು.

‘ಇಂಡಿಯನ್ ವಿಮೆನ್ ಇನ್ ಲಾ’ ಸಂಘಟನೆಯ ಮೊದಲ ರಾಷ್ಟ್ರೀಯ ಸಮ್ಮೇಳನದಲ್ಲಿ ‘ಅರ್ಧ ರಾಷ್ಟ್ರ – ಅರ್ಧ ಪೀಠ ಅಂತರವನ್ನು ನಿವಾರಿಸಿ–ಪೀಠವನ್ನು ಸಮತೋಲನಗೊಳಿಸಿ’ ಎಂಬ ವಿಷಯದ ಕುರಿತು ಅವರು ಮಾತನಾಡಿದರು.

‘ಹೈಕೋರ್ಟ್ ಕೊಲಿಜಿಯಂಗಳು ವಕೀಲರ ಸಂಘಗಳ ಅರ್ಹ ವಕೀಲೆಯರನ್ನು ನ್ಯಾಯಮೂರ್ತಿಗಳನ್ನಾಗಿ ನೇಮಿಸುವ ಬಗ್ಗೆ ಪರಿಗಣಿಸಬೇಕು ಹಾಗೂ ಅದು ಸಾಮಾನ್ಯ ನಿಯಮವಾಗಿರಬೇಕು’ ಎಂದು ಹೇಳಿದರು.

ಮುಖ್ಯಾಂಶಗಳು

- ಇಂಡಿಯನ್ ವಿಮೆನ್ ಇನ್ ಲಾ’ ಸಂಘಟನೆ-ರಾಷ್ಟ್ರೀಯ ಸಮ್ಮೇಳನ
- ನ್ಯಾಯಾಂಗ ವ್ಯವಸ್ಥೆಯಲ್ಲಿ ಸಾಂಸ್ಥಿಕ ಸುಧಾರಣೆ ಅಗತ್ಯ

‘ಅವರು ನ್ಯಾಯಸಮ್ಮತ ಮತ್ತು ಸೂಕ್ತವಾದ ಪ್ರಾತಿನಿಧ್ಯವನ್ನು ಬಯಸುತ್ತಿದ್ದಾರೆ. ಅದು ಬಹಳ ಹಿಂದೆಯೇ ಸಿಗಬೇಕಿತ್ತು. ವಕೀಲರ ಕ್ಷೇತ್ರವು ಈ ಸತ್ಯವನ್ನು ಅರಿತುಕೊಂಡಾಗ ಮಾತ್ರ, ನ್ಯಾಯಮೂರ್ತಿ ಪೀಠದತ್ತ ಸಾಗುವ ಹಾದಿ ಸುಗಮವಾಗುತ್ತದೆ’ ಎಂದು ಹೇಳಿದರು.

‘ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಾತಿಗಾಗಿ ಪರಿಗಣಿಸುವ ಅಭ್ಯರ್ಥಿಗಳ ವ್ಯಾಪ್ತಿಯನ್ನು ವಿಸ್ತರಿಸಬೇಕು. ಸುಪ್ರೀಂ ಕೋರ್ಟ್‌ನಲ್ಲಿ ವಕೀಲಿ ವೃತ್ತಿ ಮಾಡುತ್ತಿರುವ ಆಯಾ ರಾಜ್ಯಗಳ ವಕೀಲೆಯರನ್ನು ಈ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು’ ಎಂದು ಮನವಿ ಮಾಡಿದರು.

‘ಮಹಿಳಾ ಸಬಲೀಕರಣಕ್ಕೆ ಬದ್ಧತೆ ಬೇಕು’

ನವದೆಹಲಿ(ಪಿಟಿಐ): ‘ಅವಕಾಶ ಮತ್ತು ಬೆಂಬಲ ದೊರೆತರೆ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಮೇಲುಗೈ ಸಾಧಿಸಬಹುದು’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರತಿಪಾದಿಸಿದರು.

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ದೇಶದ ಮಹಿಳೆಯರಿಗೆ ಶುಭಾಶಯ ಕೋರಿ ಅವರು ಮಾತನಾಡಿದರು.

ಕೇವಲ ಮಹಿಳೆಯರ ಸಾಧನೆಗಳನ್ನು ಗೌರವಿಸುವುದಲ್ಲದೇ, ಅವರ ಸಬಲೀಕರಣಕ್ಕೆ ರಾಷ್ಟ್ರವೇ ಬದ್ಧವಾಗಿರುತ್ತದೆ ಎಂಬುದನ್ನು ಪುನರುಚ್ಚರಿಸಬೇಕಿದೆ’ ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಆಯೋಜಿಸಿದ್ದ ಮಹಿಳಾ ದಿನಾಚರಣೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಿದರು

ಗ್ರಾಮೀಣ ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ. ನವೋದ್ಯಮ, ಕಾರ್ಪೊರೇಟ್ ಕ್ಷೇತ್ರದಲ್ಲೂ ಮುಂಚೂಣಿ ನಾಯಕಿಯರಾಗಿ ಹೊರಹೊಮ್ಮುತ್ತಿದ್ದಾರೆ’ ಎಂದರು.

prajavani.net prajavani | ಸೋಮವಾರ, ಮಾರ್ಚ್ 9, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 68 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಲಕ್ಷ್ಯ ರನ್ನರ್

ಭಾರತದ ಲಕ್ಷ್ಯ ಸೇನ್ ಅವರು ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ತೈವಾನ್‌ನ ಲಿನ್ ಚುನ್ ಯಿ ಅವರ ಎದುರು ಸೋತು, ಟೂರ್ನಿಯಲ್ಲಿ ಎರಡನೇ ಬಾರಿ ರನ್ನರ್ಸ್ ಅಪ್ ಆದರು

ಮಲೆನಾಡಿಗೊಂದು ಬೃಹತ್ 'ವಿಜ್ಞಾನ ಕೇಂದ್ರ' 4 | ನೇಪಾಳ: ಆರ್‌ಎಸ್‌ಪಿಗೆ ಚಾರಿತ್ರಿಕ ಗೆಲುವು 8

ಟಿ20 ಕ್ರಿಕೆಟ್: ಭಾರತ ವಿಶ್ವವಿಜೇತ

ತವರಿನಲ್ಲಿ ಕಿರೀಟ ಗೆದ್ದ ಮೊದಲ ತಂಡ; ಸತತ ಎರಡನೇ ಬಾರಿ ಚಾಂಪಿಯನ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿ ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಹಾಲಿ ಚಾಂಪಿಯನ್ ಭಾರತ ತಂಡವು ಚುಟುಕು ಮಾದರಿಯ ಕ್ರಿಕೆಟ್‌ನಲ್ಲಿ ಚಾರಿತ್ರಿಕ ಸಾಧನೆ ಮಾಡಿತು.

ಭಾನುವಾರ ರಾತ್ರಿ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 'ನೀಲಿ ಸಾಗರ'ದಂತೆ ಕಂಗೊಳಿಸಿದ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮ ಮುಗಿಲು ಮುಟ್ಟಿತು. ಸೂರ್ಯ ಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು ನ್ಯೂಜಿಲೆಂಡ್ ಎದುರು 96 ರನ್‌ಗಳಿಂದ ಜಯಿಸುವುದರೊಂದಿಗೆ ತ್ರಿವರ್ಣ ಧ್ವಜಗಳು ರಾರಾಜಿಸಿದವು. 2023ರಲ್ಲಿ ಇದೇ ಮೈದಾನದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಭಾರತವು ಅನುಭವಿಸಿದ್ದ ಸೋಲಿನ ಕಹಿಯನ್ನು ಮರೆಯಲು ಈ ಜಯ ಕಾರಣವಾಯಿತು.

ಇದರೊಂದಿಗೆ ಮೂರು ಐತಿಹಾಸಿಕ ದಾಖಲೆಗಳನ್ನೂ ಮಾಡಿತು. ಅವುಗಳೆಂದರೆ– ಸತತ ಎರಡನೇ ಬಾರಿ ವಿಶ್ವಕಪ್ ಜಯಿಸಿತ್ತು. ಚುಟುಕು ಮಾದರಿ ಯಲ್ಲಿ ವಿಶ್ವಕಪ್ ಜಯಿಸಿದ ಮೊದಲ ಆತಿಥೇಯ ತಂಡವೆನಿಸಿತು. ಮೂರನೇ ಸಲ ಚಾಂಪಿಯನ್ ಪಟ್ಟಕ್ಕೇರಿದ ಮೊದಲ ಬಳಗವೆಂಬ ಹೆಗ್ಗಳಿಕೆಗೂ ಪಾತ್ರವಾಯಿತು.

2007ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಚುಟುಕು ವಿಶ್ವಕಪ್‌ನ ಮೊದಲ ಆವೃತ್ತಿಯಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದ ಬಳಗ ಮತ್ತು 2024ರಲ್ಲಿ ಅಮೆರಿಕ–ವೆಸ್ಟ್ ಇಂಡೀಸ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ ರೋಹಿತ್ ಶರ್ಮಾ ಪಡೆಯು ಚಾಂಪಿಯನ್ ಆಗಿತ್ತು.

₹27.48 ಕೋಟಿ ವಿಶ್ವಕಪ್ ಗೆದ್ದ ಭಾರತ ಪಡೆದ ಬಹುಮಾನ

₹14.65 ಕೋಟಿ ರನ್ನರ್ಸ್ ಅಪ್ ನ್ಯೂಜಿಲೆಂಡ್ ಪಡೆದ ಬಹುಮಾನ

ನ್ಯೂಜಿಲೆಂಡ್ ತಂಡದ ಎದುರಿನ ಫೈನಲ್ ಏಕಪಕ್ಷೀಯವಾಯಿತು. ಟಾಸ್ ಗೆದ್ದ ಕಿವೀಸ್ ಬಳಗವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ನಾಯಕ ಮಿಚೆಲ್ ಸ್ಯಾಂಟ್ನರ್ ಲೆಕ್ಕಾಚಾರವನ್ನು ಆತಿಥೇಯ ತಂಡದ ಆರಂಭಿಕ ಜೋಡಿ ಅಭಿಷೇಕ್ ಶರ್ಮಾ (52; 21ಎ, 4X6, 6X3) ಮತ್ತು ಸಂಜು ಸ್ಯಾಮ್ಸನ್ (89; 46ಎ, 4X5, 6X8) ತಲೆಕೆಳಗು ಮಾಡಿದರು. ಪವರ್‌ಪ್ಲೇನಲ್ಲಿಯೇ ಇಬ್ಬರೂ ಸೇರಿ ದಾಖಲೆಯ 92 ರನ್ ಸೂರೆ ಮಾಡಿದರು. ಅಭಿಷೇಕ್ ಔಟಾದ ನಂತರ ಕ್ರೀಸ್‌ಗೆ ಬಂದ ಇಶಾನ್ ಕಿಶನ್ (54; 25ಎಸೆತ, 4X4, 6X4) ಅವರು ಸಂಜು ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ ಮಿಂಚಿನ ವೇಗದಲ್ಲಿ 105 ರನ್ ಗಳಿಸಿದರು. ಕೊನೆಯ ಓವರ್‌ಗಳಲ್ಲಿ ಶಿವಂ ದುಬೆ ಮಿಂಚಿದರು. 256 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಕಿವೀಸ್ ಬಳಗದ ಪರ ಆರಂಭಿಕ ಬ್ಯಾಟರ್ ಟಿಮ್ ಸೀಫರ್ಟ್ (52; 26ಎ) ಮತ್ತು ನಾಯಕ ಮಿಚೆಲ್ ಸ್ಯಾಂಟ್ನರ್ (43; 35ಎ) ಅವರಷ್ಟೇ ಒಂದಿಷ್ಟು ಹೋರಾಟ ತೋರಿದರು. ಉಳಿದಂತೆ ಭಾರತದ ಬೌಲರ್‌ಗಳದ್ದೇ ಕಾರುಬಾರು ನಡೆಯಿತು.

ನಾಯಕ ಸೂರ್ಯ ಅವರ ಬೌಲಿಂಗ್ ಮತ್ತು ಫೀಲ್ಡಿಂಗ್ ತಂತ್ರಗಾರಿಕೆಗಳು ಫಲ ನೀಡಿದವು. 'ಸ್ಥಳೀಯ ಹೀರೊ' ಅಕ್ಷರ್ ಪಟೇಲ್ (27ಕ್ಕೆ3), ವೇಗಿ ಜಸ್‌ಪ್ರೀತ್ ಬೂಮ್ರಾ (13ಕ್ಕೆ4) ಅವರ ದಾಳಿಯ ಮುಂದೆ ಕಿವೀಸ್ ತಂಡದ ಚೊಚ್ಚಲ ಪ್ರಶಸ್ತಿ ಗೆಲುವಿನ ಕನಸು ಕಮರಿತು.

ಪಂದ್ಯದ ಸ್ಕೋರ್	
ಭಾರತ	
5ಕ್ಕೆ 255	(20 ಓವರ್‌ಗಳಲ್ಲಿ)
ನ್ಯೂಜಿಲೆಂಡ್	
159	(19 ಓವರ್‌ಗಳಲ್ಲಿ)
ಫಲಿತಾಂಶ: ಭಾರತಕ್ಕೆ 96 ರನ್ ಗೆಲುವು	

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸಹಪಾಠಿ ಹಲ್ಲೆ: ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಡಿ.ಹೇಮಂತ್

ಬಳ್ಳಾರಿ: ನಗರದ ತಾಳೂರು ರಸ್ತೆಯಲ್ಲಿರುವ ಖಾಸಗಿ ವಸತಿ ಶಾಲೆಯಲ್ಲಿ ಶನಿವಾರ ರಾತ್ರಿ 9ನೇ ತರಗತಿ ವಿದ್ಯಾರ್ಥಿಯೊಬ್ಬ ಸಹಪಾಠಿಗಳ ಮೇಲೆ ಮಾರಕಾಸ್ತ್ರಗಳಿಂದ ತೀವ್ರವಾಗಿ ದಾಳಿ ಮಾಡಿದ್ದು, ಘಟನೆಯಲ್ಲಿ ಒಬ್ಬ ವಿದ್ಯಾರ್ಥಿ ಮೃತಪಟ್ಟು, ಬಾಲಕಿ ಸೇರಿ ಏಳು ಮಕ್ಕಳು ಗಾಯಗೊಂಡಿದ್ದಾರೆ. ಒಂಬತ್ತನೇ ತರಗತಿ ವಿದ್ಯಾರ್ಥಿ, ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಸಮ್ಮತಗೇರಿ ಗ್ರಾಮದ ಡಿ.ಹೇಮಂತ್ ಮೃತಪಟ್ಟ ಬಾಲಕ. ಗಾಯಗೊಂಡವರ ಪೈಕಿ ಒಬ್ಬ ವಿದ್ಯಾರ್ಥಿಯ ಸ್ಥಿತಿ ಗಂಭೀರ ವಾಗಿದ್ದು, ಎಲ್ಲರೂ ಬಳ್ಳಾರಿಯ ವಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ▶4

ಪತ್ತೆಗೆ 7 ಅಧಿಕಾರಿಗಳ ತಂಡ ರಚನೆ

ಮೃತ ಬಾಲಕನ ತಂದೆ ನೀಡಿದ ದೂರು ಆಧರಿಸಿ ಆರೋಪಿ ಬಾಲಕ ಮತ್ತು ಶಾಲಾ ಆಡಳಿತ ಮಂಡಳಿ ವಿರುದ್ಧ ಬ್ರೂಸ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿ ಪತ್ತೆಗೆ ಐವರು ಇನ್‌ಸ್ಪೆಕ್ಟರ್‌ಗಳು ಹಾಗೂ ಇಬ್ಬರು ಸಬ್ ಇನ್‌ಸ್ಪೆಕ್ಟರ್‌ಗಳ ತಂಡ ರಚಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪಿ ತಿಳಿಸಿದರು.

ಪರೀಕ್ಷೆ ಕೊಠಡಿಗೆ ಮೊಬೈಲ್ ಡಿಬಾರ್ ಆದೇಶಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್ ಒಯ್ದಿದ್ದ ಆರೋಪದಡಿ 12ನೇ ತರಗತಿಯ 'ಕೇಂದ್ರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ' (ಸಿಬಿಎಸ್‌ಇ) ವಿದ್ಯಾರ್ಥಿಯೊಬ್ಬನನ್ನು ಎರಡು ವರ್ಷ ಡಿಬಾರ್ ಮಾಡಿದ್ದ ಸಿಬಿಎಸ್‌ಇ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಸಿಬಿಎಸ್‌ಇ ಮತ್ತು ನವದೆಹಲಿಯ, 'ಪರೀಕ್ಷಾ ನಿಯಂತ್ರಣ ಕೇಂದ್ರ' ಸಲ್ಲಿಸಿದ್ದ ರಿಟ್ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಕಲಿಯುತ್ತಿರುವ ನಗರದ ವಿದ್ಯಾರ್ಥಿಯೊಬ್ಬ 12ನೇ ತರಗತಿ 'ದೈಹಿಕ ಶಿಕ್ಷಣ' ಪರೀಕ್ಷೆ ಬರೆಯುವಾಗ ಮೊಬೈಲ್ ಅನ್ನು ತನ್ನ ಜೇಬಿನಲ್ಲಿ ಇರಿಸಿಕೊಂಡ ಆರೋಪದಡಿ ಎರಡು ವರ್ಷ ಡಿಬಾರ್‌ಗೆ ಒಳಗಾಗಿದ್ದ. ▶7

ಬಂಗಾಳ ಸರ್ಕಾರಕ್ಕೆ ನೋಟಿಸ್

ರಾಷ್ಟ್ರಪತಿ ಭೇಟಿ ವೇಳೆ ಶಿಷ್ಟಾಚಾರ ಉಲ್ಲಂಘನೆ ಆರೋಪ

ನವದೆಹಲಿ/ಕೋಲ್ಕತ್ತ (ಪಿಟಿಐ): 'ನನ್ನ ಪಶ್ಚಿಮ ಬಂಗಾಳದ ಭೇಟಿಯ ವೇಳೆ ರಾಜ್ಯ ಸರ್ಕಾರವು ಶಿಷ್ಟಾಚಾರ ಪಾಲಿಸಿಲ್ಲ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಖುದ್ದು ಆರೋಪಿಸಿದ ಬೆನ್ನಲ್ಲೇ, ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರವು ವಿವರಣೆ ಕೇಳಿ ನೋಟಿಸ್ ನೀಡಿದೆ. ಭಾನುವಾರ ಸಂಜೆ 5 ಗಂಟೆ ಒಳಗೆ ಪ್ರತಿಕ್ರಿಯೆ ನೀಡಬೇಕು ಎಂದು ಕೇಂದ್ರ ಹೇಳಿತ್ತು. ಇದಕ್ಕೆ ರಾಜ್ಯ ಸರ್ಕಾರವು ಅಧಿಕೃತವಾಗಿ ಉತ್ತರ ನೀಡಿಲ್ಲ. ಆದರೆ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರತಿಕ್ರಿಯೆ ನೀಡಿದ್ದಾರೆ. ▶8

'ಮಾಹಿತಿಯನ್ನೇ ನೀಡಿರಲಿಲ್ಲ'

ಮಮತಾ ಬ್ಯಾನರ್ಜಿ

'ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಜ್ಯಕ್ಕೆ ನೀಡಿದ ಭೇಟಿಯ ವೇಳೆ ಶಿಷ್ಟಾಚಾರ ಪಾಲನೆಯಲ್ಲಿ ಯಾವುದೇ ರೀತಿಯಲ್ಲೂ ಉಲ್ಲಂಘನೆಯಾಗಿಲ್ಲ. ರಾಷ್ಟ್ರಪತಿ ಅವರ ಭೇಟಿಯ ವಿವರಗಳ ಕುರಿತು ರಾಜ್ಯ ಸರ್ಕಾರಕ್ಕೆ ಮಾಹಿತಿಯೇ ಇರಲಿಲ್ಲ. ಸಮ್ಮೇಳನವನ್ನು ಆಯೋಜಿಸಿದವರೂ ಸರ್ಕಾರಕ್ಕೆ ಮಾಹಿತಿ ನೀಡಿರಲಿಲ್ಲ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು. ದೋಣಿ ಮಾರ್ಗದಲ್ಲಿ ಕಸ ತುಂಬಿಕೊಂಡಿತ್ತು, ಶೌಚಾಲಯದಲ್ಲಿ ನೀರಿನ ಕೊರತೆ ಸೇರಿ ಗ್ರೀನ್ ರೂಮ್‌ನಲ್ಲಿನ ಅವ್ಯವಸ್ಥೆ ಆರೋಪದ ಕುರಿತು ಪ್ರತಿಕ್ರಿಯಿಸಿದ ಮಮತಾ, 'ಎಲ್ಲ ಅವ್ಯವಸ್ಥೆಗಳಿಗೂ ಸಮ್ಮೇಳನ ಆಯೋಜಕರು ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವೇ ಹೊಣೆ. ಕಾರ್ಯಕ್ರಮದ ಸ್ಥಳವನ್ನು ನಾವಲ್ಲ ನೀವೇ ಗುರುತಿಸಿದ್ದು' ಎಂದರು.

IASBABA
Decade of Excellence
Mohan Kumar S, Founder, IASbaba
200+ RANKS IN UPSC CSE 2025
4 RANK IN TOP 10 IN UPSC CSE 2025
870+ RANK FROM OUR PAID COURSES IN THE LAST 11 YEARS
Hearty Congratulations
TOP RANKS
AIR 1 UPSC CSE 2025 ANUJ AGNIHOTRI
AIR 2 RAJESHWARI SUVE M; AIR 6 ZINNIA AURORA; AIR 8 PAKSHAL SECRETRY; AIR 16 MONIKA SRIVASTAVA; AIR 40 DIKSHA RAI
AIR 43 RUPAL JAISWAL; AIR 44 DEEKSHA CHOURASIYA; AIR 53 KIRAN KAMATE; AIR 82 SANDEEP BADAD; AIR 90 MAURVIE TIWARI
AIR 91 TWINKLE ARORA; AIR 109 AJAY R RAJ; AIR 122 AAKRITI SINGLA.; AIR 142 SHUBHAM KUMAR MAHATO; AIR 169 SHREYANS GOMES
IASBABA Secures 24 Ranks Out of 31 Ranks from Karnataka!
AIR 53 KIRAN KAMATE; AIR 82 SANDEEP BADAD; AIR 169 SHREYANS GOMES; AIR 190 KRUPA A JAIN; AIR 310 CHINMAIEE P; AIR 389 MANOJ GS; AIR 394 S DIVYA; AIR 462 VARUN GOWDA P
AIR 469 NIVEDITA C BHAVIMANI; AIR 525 SOORAJ KL; AIR 554 DHANANJAYA R; AIR 556 ULLAS M S; AIR 622 MUTTESH GOWDA A S; AIR 641 SAGAR A; AIR 660 PANDURANG S KAMBALI; AIR 661 CHANDAN Y
AIR 664 BASAVARAJ JAWALI; AIR 720 PRAVEENA H T; AIR 732 YATHISHA M A; AIR 739 BASAVARAJ M PATIL; AIR 765 R SRIKANTH; AIR 880 CHANDRASHEKAR; AIR 891 LAVANYA S P; AIR 900 BANOTHU BHARATH KUMAR
Are you ready to begin your UPSC Journey but feeling overwhelmed by the vast syllabus and Complex Preparation process?
Kickstart Your UPSC Journey with IASbaba's
GURUKUL FOUNDATION 2027
Your One-Stop Destination for UPSC Success
STARTS ON MAR 25th
ADMISSION OPEN
Bengaluru • Online
BENGALURU | DELHI | LUCKNOW | BHOPAL
www.iasbaba.com
support@iasbaba.com
IASbaba's HQ: 2nd floor, Ganapathi Circle, 80 Feet Rd, Chandra Layout
IASbaba Admission Centre: #38, 3rd Cross Rd, 60 Feet Main Road, Chandra Layout, Bengaluru–560040, Landmark: Opp BBMP Office / Cult Fit
9169191888
9663462015
ad6.in

SIKSHA 'O' ANUSANDHAN (DEEMED TO BE UNIVERSITY)
SAAT-2026
Accredited by NAAC with Grade 'A++' | UGC Graded Autonomy(Category-I) | NBA Accredited | ICAR Accredited | NABL Accredited | NABH Accredited
AICTE Approved | NMC Approved | DCI Approved | PCI Approved | BCI Approved | INC Approved | VCI Approved
PROGRAMMES OFFERED
B.TECH PROGRAMMES IN CORE ENGINEERING: Civil Engineering; Electrical Engineering; Mechanical Engineering
B.TECH PROGRAMMES IN ELECTRONICS DESIGN: Electrical and Electronics Engineering; Electronics and Communication Engineering
B.TECH PROGRAMMES IN CORE COMPUTING: Computer Science and Engineering; Computer Science and Information Technology
B.TECH PROGRAMMES IN EMERGING COMPUTING: Computer Science and Engineering (AI and ML); Computer Science and Engineering (Cyber Security); Computer Science and Engineering (Data Science); Computer Science and Engineering (Internet of Things)
M.TECH PROGRAMMES: Structural Engineering; Electric Vehicle Technology; Machine Design and Robotics; Embedded System and VLSI Design; Computer Science and Engineering
M.Sc. PROGRAMMES: Physics; Chemistry; Mathemetics; Biotechnology; Integrated M.Sc. Biotechnology
COMPUTER APPLICATIONS PROGRAMMES: Bachelor of Computer Applications (BCA); Master of Computer Applications (MCA)
LAW PROGRAMMES: BA. LL.B (H) - Integrated; BBA LL.B (H) - Integrated; LL.B. (H) - 3 Years; LL.M. - 1 Year
MANAGEMENT PROGRAMMES: BBA; MBA; Integrated MBA; MBA (Hospital Administration); MBA (Artificial Intelligence and Data Science)
HOTEL MANAGEMENT PROGRAMMES: BHMCT (Bachelor of Hotel Management & Catering Technology); MBA (Hospitality Management)
NURSING PROGRAMMES: B.Sc. (Nursing) (Basic); B.Sc. (Nursing) (Post Basic); M.Sc. (Nursing)
AGRICULTURAL PROGRAMMES: B.Sc. (H) Agriculture; M.Sc. Agriculture
PHARMACY PROGRAMMES: B. Pharm; M. Pharm
nirf National Institutional Ranking Framework 2025: 15th in University Category; 22nd in Engineering Category; 15th in Medical Category; 09th in Dental Category; 10th in Law Category
Globally Ranked By: QS WORLD UNIVERSITY RANKINGS | THE WORLD UNIVERSITY RANKINGS
To apply for admission through SAAT, Visit: www.soa.ac.in

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ

ಮಾನಸಿಕ ಆರೋಗ್ಯಕ್ಕೆ 'ಮನೋಸಂದೇಶ': ಕನ್ನಡಕ್ಕೂ ವಿಸ್ತರಣೆ

ಬೆಂಗಳೂರು: ಮಾನಸಿಕ ಆರೋಗ್ಯ ಹಾಗೂ ರೋಗಿಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) 'ಮನೋಸಂದೇಶ' ಸರಣಿಯನ್ನು ಕನ್ನಡಕ್ಕೂ ವಿಸ್ತರಿಸಿದೆ.

ಸಂಸ್ಥೆಯ ಮಾನಸಿಕ ಆರೋಗ್ಯ ಶಿಕ್ಷಣ ವಿಭಾಗವು ಈ ಸರಣಿಯನ್ನು ನಿರ್ವಹಣೆ ಮಾಡುತ್ತಿದೆ. ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ಕಳೆದ ವರ್ಷ ಪ್ರಾರಂಭವಾದ ಈ ಸರಣಿ, 37 ವಿಡಿಯೊಗಳನ್ನು ಹೊಂದಿದೆ. ಇದೇ ತಿಂಗಳು ಈ ಸರಣಿಯನ್ನು ಕನ್ನಡಕ್ಕೆ ವಿಸ್ತರಿಸಲಾಗಿದೆ. ಮಾನಸಿಕ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವೃತ್ತಿಪರರು ಈ ಸರಣಿಯಡಿ ಮಾನಸಿಕ ಆರೋಗ್ಯದ ಬಗ್ಗೆ ಚರ್ಚಿಸಲಿದ್ದಾರೆ. ವಿವಿಧ ಮಾನಸಿಕ ಅನಾರೋಗ್ಯ ಸಮಸ್ಯೆಗಳ ನಿರ್ವಹಣೆ ಬಗ್ಗೆಯೂ ವಿಷಯ ತಜ್ಞರು ಮಾಹಿತಿ ಒದಗಿಸಲಿದ್ದಾರೆ.

ಖಿನ್ನತೆ, ಆತಂಕ, ಆಟಿಸಂ ಸೇರಿ ವಿವಿಧ ಮಾನಸಿಕ ಅನಾರೋಗ್ಯ ಸಮಸ್ಯೆಗಳ ಬಗ್ಗೆ ಸರಣಿಯಡಿ ವಿಡಿಯೊ ಸಂದೇಶ ಲಭ್ಯವಾಗಲಿದೆ. 'ಸ್ಕಿಜೋಫ್ರೇನಿಯಾ' ಬಗ್ಗೆ ಕನ್ನಡದಲ್ಲಿ ಈಗಾಗಲೇ ವಿಡಿಯೊ ಹಾಕಲಾಗಿದ್ದು, ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರಾಧ್ಯಾಪಕ ಡಾ. ಜಗದೀಶ ತೀರ್ಥಹಳ್ಳಿ ಅವರು ಈ ಸಮಸ್ಯೆಗೆ ಸಂಬಂಧಿಸಿದಂತೆ ಚಿಕಿತ್ಸಾ ಆಯ್ಕೆ ಹಾಗೂ ಕುಟುಂಬದ ಬೆಂಬಲದ ಪ್ರಾಮುಖ್ಯತೆಯನ್ನು ವಿವರಿಸಿದ್ದಾರೆ. ಸಂಸ್ಥೆಯ ಹೆಸರಿನಲ್ಲಿರುವ ಯೂಟ್ಯೂಬ್ ಚಾನಲ್‌ನಲ್ಲಿ ಈ ವಿಡಿಯೊ ಸರಣಿ ಲಭ್ಯವಾಗಲಿದೆ.

'ದೇಶದಲ್ಲಿ ಮಾನಸಿಕ ಅಸ್ವಸ್ಥತೆಯಿಂದ ಬಳಲುವ ಜನರನ್ನು ಮೊದಲಿನಿಂದಲೂ ಕಳಂಕಿತರಂತೆ ನೋಡಲಾಗುತ್ತಿದೆ. ಇದಕ್ಕೆ ಅರಿವಿನ ಕೊರತೆಯೇ ಕಾರಣ. ಆದ್ದರಿಂದ ಈ ಬಗ್ಗೆ ಅರಿವು ಮೂಡಿಸಲಾಗುತ್ತಿದೆ' ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಒಂದೇ ವರ್ಷ: ಶಿಕ್ಷಕರಿಗೆ 3ನೇ ಗಣತಿ

ಏಪ್ರಿಲ್ 15ರಿಂದ ಮೇ 15ರವರೆಗೆ ಮನೆಗಳ ಪಟ್ಟಿ, ವಸತಿ ಗಣತಿ

● ರಾಜೇಶ್ ರೈ ಚಟ್ಲ

ಬೆಂಗಳೂರು: 2027ರ ಜನಗಣತಿಯ ಮೊದಲ ಹಂತವಾದ 'ಮನೆಗಳ ಪಟ್ಟಿ ಮತ್ತು ವಸತಿ ಗಣತಿ' ಪ್ರಕ್ರಿಯೆಯು ರಾಜ್ಯದಲ್ಲಿ ಏಪ್ರಿಲ್ 15ರಿಂದ ಮೇ 15ರ ವರೆಗೆ ನಡೆಯಲಿದ್ದು, ಈ ಕಾರ್ಯಕ್ಕೆ ಶಿಕ್ಷಕರನ್ನು ಬಳಸಿಕೊಳ್ಳುವಂತೆ ಜನಗಣತಿ ನಿರ್ದೇಶನಾಲಯ ಸೂಚನೆ ನೀಡಿದೆ. ಎರಡನೇ ಹಂತದಲ್ಲಿ 2027ರ ಮಾರ್ಚ್ ತಿಂಗಳಲ್ಲಿ ಜನಸಂಖ್ಯಾ ಗಣತಿ ನಡೆಯಲಿದೆ.

ಆ ಮೂಲಕ, ಒಂದು ವರ್ಷದಲ್ಲಿ ಮೂರನೇ ಬಾರಿಗೆ ಗಣತಿದಾರರಾಗಿ ಕೆಲಸ ನಿಭಾಯಿಸುವ ಹೊಣೆ ಶಿಕ್ಷಕರ ಹೆಗಲೇರಲಿದೆ. 2025ರ ಬೇಸಿಗೆ ರಜೆಯಲ್ಲಿ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ, ನಂತರದ ಮಧ್ಯಂತರ ರಜೆಯಲ್ಲಿ ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಶಿಕ್ಷಕರು ಗಣತಿದಾರರಾಗಿ ಕೆಲಸ ಮಾಡಿದ್ದರು.

ಗಣತಿ ಅವಧಿಯಲ್ಲಿಯೇ ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕೂಡಾ ನಡೆಯಲಿದೆ. ಮತಗಟ್ಟೆ ಅಧಿಕಾರಿಗಳಾಗಿ (ಬಿಎಲ್‌ಒ) ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ಬಳಸಿಕೊಳ್ಳಬಾರದು ಎಂದೂ ನಿರ್ದೇಶನಾಲಯ ಸೂಚನೆ ನೀಡಿದೆ. ಶಿಕ್ಷಕರ ಕೊರತೆಯಾದರೆ, ಯಾವುದೇ ಇಲಾಖೆಯ ಗ್ರೂಪ್ 'ಸಿ' ವೃಂದದ ಅಧಿಕಾರಿಗಳನ್ನು ಬಳಸಿಕೊಳ್ಳುವಂತೆ ತಿಳಿಸಿದೆ.

ಮುಖ್ಯಾಂಶಗಳು

- ಮೊದಲ ಬಾರಿಗೆ ಸಂಪೂರ್ಣ ಡಿಜಿಟಲ್ ರೂಪದಲ್ಲಿ ಗಣತಿ
- ಬಿಎಲ್‌ಒಗಳಾಗಿರುವ ಶಿಕ್ಷಕರಿಗೆ ವಿನಾಯಿತಿ
- 2ನೇ ಹಂತದಲ್ಲಿ ಗಣತಿ ಜೊತೆ 'ಜಾತಿ ಗಣತಿ'

ಮೊದಲ ಬಾರಿಗೆ ಸಂಪೂರ್ಣ ಡಿಜಿಟಲ್ ರೂಪದಲ್ಲಿ ಜನಗಣತಿ ನಡೆಯಲಿದೆ. ಈ ಕಾರ್ಯವನ್ನು ಸಮರ್ಪಕವಾಗಿ ನಡೆಸಲು, ಮೊದಲೇ ಎಲ್ಲ ರೀತಿಯ ಸಿದ್ಧತೆ ಕೈಗೊಳ್ಳಲು ಜಿಲ್ಲಾಮಟ್ಟದಲ್ಲಿ ಅಧಿಕಾರಿಗಳಿಗೆ ಮೂರುದಿನಗಳ ತರಬೇತಿ ಶಿಬಿರವನ್ನು ನಿರ್ದೇಶನಾಲಯವು ಆಯೋಜಿಸಿದೆ. ಕೆಲವು ಜಿಲ್ಲೆಗಳಲ್ಲಿ ತರಬೇತಿ ಈಗಾಗಲೇ ಮುಗಿದಿದೆ. ಗಣತಿ ಆರಂಭವಾಗುವ 15 ದಿನಗಳ ಮೊದಲೇ, ಜನಗಣತಿ ಆ್ಯಪ್ ಅಥವಾ ಪೋರ್ಟಲ್ ಮೂಲಕ ಸ್ವಯಂ ಮಾಹಿತಿ ದಾಖಲಿಸಿಕೊಳ್ಳಬಹುದು. ಗಣತಿದಾರರ ಸ್ಮಾರ್ಟ್‌ಫೋನ್‌ನಲ್ಲಿ ಅಳವಡಿಸಲಾದ ಮೊಬೈಲ್ ಆ್ಯಪ್ ಮೂಲಕ ಆನ್‌ಲೈನ್‌ನಲ್ಲಿ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಆಫ್‌ಲೈನ್‌ನಲ್ಲಿಯೂ ಈ ಆ್ಯಪ್ ಕೆಲಸ ಮಾಡಲಿದ್ದು, ನೆಟ್‌ವರ್ಕ್ ವ್ಯಾಪ್ತಿಗೆ ಬಂದಾಗ ಸಂಗ್ರಹಿಸಿದ ಮಾಹಿತಿಗಳು ಸರ್ವರ್‌ಗೆ ಸಂಯೋಜನೆ ಆಗಲಿವೆ. ಗಣತಿ ಪ್ರಕ್ರಿಯೆಯನ್ನು ಆರಂಭದಿಂದ ಮುಕ್ತಾಯದವರೆಗೆ ನಿರ್ವಹಿಸಲು 'ಜನಗಣತಿ ನಿರ್ವಹಣೆ ಮತ್ತು ಮಾನಿಟರಿಂಗ್ ಸಿಸ್ಟಂ' (ಸಿಎಂಎಂಎಸ್) ಎಂಬ ವಿಶೇಷ ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದೆ.

800 ಜನರಿಗೆ ಒಬ್ಬ ಗಣತಿದಾರ

'ಗಣತಿ ಉದ್ದೇಶಕ್ಕಾಗಿ ಬ್ಲಾಕ್ ರಚಿಸಲಾಗುತ್ತಿದ್ದು, 700ರಿಂದ 800 ಜನಸಂಖ್ಯೆಗೆ ಒಬ್ಬ ಗಣತಿದಾರರನ್ನು ಮತ್ತು ಪ್ರತಿ ಆರು ಜನ ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ನೇಮಿಸಲಾಗುವುದು. ಗಣತಿದಾರರಿಗಿಂತ ಉನ್ನತ ಶ್ರೇಣಿಯ ಅಧಿಕಾರಿಗಳನ್ನು ಮೇಲ್ವಿಚಾರಕರ ಹುದ್ದೆಗೆ ಪರಿಗಣಿಸಲಾಗುತ್ತದೆ. ಗ್ರಾಮೀಣ ಭಾಗದಲ್ಲಿ ತಹಶೀಲ್ದಾರರು ಹಾಗೂ ನಗರ ಪ್ರದೇಶಗಳಲ್ಲಿ ನಗರಸಭೆ, ಪುರಸಭೆಯ ಮುಖ್ಯಾಧಿಕಾರಿಗಳು ಉಸ್ತುವಾರಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಪ್ರಧಾನ ಜನಗಣತಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಲಿದ್ದು, ಮಹಾನಗರ ಪಾಲಿಕೆಗಳಲ್ಲಿ ಆಯುಕ್ತರು ಈ ಜವಾಬ್ದಾರಿ ನಿಭಾಯಿಸಲಿದ್ದಾರೆ' ಎಂದು ತರಬೇತಿಯಲ್ಲಿ ಭಾಗವಹಿಸಿದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಮನೆ ಗಣತಿಗೆ ಅಗತ್ಯವಿರುವ ಸಿಬ್ಬಂದಿಯನ್ನು ನೇಮಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತರಬೇತಿಯಲ್ಲಿ ತಿಳಿಸಲಾಗಿದೆ. 'ಮೊದಲ ಹಂತದಲ್ಲಿ ಮನೆ ಗಣತಿ ಮಾತ್ರ ನಡೆಯಲಿದ್ದು, ಕ್ಷೇತ್ರ ಮಟ್ಟದ ಗಣತಿದಾರರು ಎಚ್‌ಎಲ್‌ಬಿ (ಹೌಸ್ ಲಿಸ್ಟಿಂಗ್ ಬ್ಲಾಕ್) ಕ್ರಿಯೇಟರ್ ಆ್ಯಪ್ ಬಳಸಿ ಪ್ರತಿ ಬ್ಲಾಕ್‌ನ ಮನೆಗಳ ಲೊಕೇಶನ್ ಮತ್ತು ವ್ಯಾಪ್ತಿಯನ್ನು ಜಿಯೋ ಟ್ಯಾಗಿಂಗ್ ಮೂಲಕ ಗುರುತಿಸಲಿದ್ದಾರೆ. ಮನೆಗಳಲ್ಲಿ ಎಷ್ಟು ಜನ ಇದ್ದಾರೆ, ಆ ಪ್ರದೇಶದಲ್ಲಿ ಏನೆಲ್ಲ ನಾಗರಿಕ ಸೌಲಭ್ಯಗಳಿವೆ ಎಂದು ಗಣತಿ ಮಾಡಬೇಕು. ಮುಂದಿನ ಗಣತಿಗೆ ಪ್ರಾಥಮಿಕ ಕೆಲಸ ಇದು. ಎರಡನೇ ಹಂತದಲ್ಲಿ 'ಜಾತಿ ಗಣತಿ'ಯನ್ನೂ ಸೇರಿಸಲಾಗಿದೆ. 1948ರ ಜನಗಣತಿ ಕಾಯ್ದೆ ಪ್ರಕಾರ, ಪ್ರತಿಯೊಬ್ಬ ನಾಗರಿಕನು ಜನಗಣತಿ ಅಧಿಕಾರಿ ಕೇಳುವ ಮಾಹಿತಿಯನ್ನು ಕಾನೂನುಬದ್ಧವಾಗಿ ಒದಗಿಸಲೇಬೇಕು. ಜನಗಣತಿ ಅಧಿಕಾರಿಯ ಪ್ರವೇಶಕ್ಕೆ ಅಡ್ಡಿಪಡಿಸುವುದೂ ಕಾನೂನು ಬಾಹಿರ' ಎಂದು ತರಬೇತಿಯಲ್ಲಿ ಭಾಗವಹಿಸಿದ ಅಧಿಕಾರಿಯೊಬ್ಬರು ವಿವರಿಸಿದರು. ಈ ಹಿಂದೆ 2011ರಲ್ಲಿ ಕೊನೆಯ ಬಾರಿಗೆ ಜನಗಣತಿ ನಡೆದಿತ್ತು. ಬಳಿಕ 2021ರಲ್ಲಿ ಜನಗಣತಿ ನಡೆಯಬೇಕಾಗಿತ್ತು. ಆದರೆ, ಕೋವಿಡ್ ಕಾರಣಕ್ಕೆ 10 ವರ್ಷಗಳಿಗೆ ಒಮ್ಮೆ ನಡೆಯಬೇಕಾದ ಜನಗಣತಿ ನಡೆದಿರಲಿಲ್ಲ. ಇದೀಗ 2026-27ನೇ ಸಾಲಿನಲ್ಲಿ ಜನಗಣತಿ ನಡೆಯುತ್ತಿದೆ.

'ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲು'

ದೇವೇಗೌಡರ ಕನಸು ನನಸು: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ರಾಜಕೀಯ ಪ್ರಾತಿನಿಧ್ಯದಲ್ಲಿ ಮಹಿಳೆಯರಿಗೂ ಮೀಸಲಾತಿ ಇರಬೇಕು ಎಂದು ಎಚ್.ಡಿ. ದೇವೇಗೌಡ ಅವರು ಕನಸು ಕಂಡಿದ್ದರು. ಮಾತ್ರವಲ್ಲ ಈ ನಿಟ್ಟಿನಲ್ಲಿ ಕೆಲಸವನ್ನೂ ಮಾಡಿದ್ದರು. ಅವರ ಕನಸನ್ನು ಪ್ರಧಾನಿ ನರೇಂದ್ರ ಮೋದಿ ನನಸು ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ ಮಹಿಳಾ ಘಟಕ ಭಾನುವಾರ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದರು.

ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ನೀಡಿರುವ ಶೇ33ರಷ್ಟು ಮೀಸಲು ಮುಂದಿನ ದಿನಗಳಲ್ಲಿನ ಸಂಸದೀಯ ವ್ಯವಸ್ಥೆಯ ಹೆಗ್ಗಳಿಕೆಯನ್ನು ಮತ್ತಷ್ಟು ಹೆಚ್ಚಿಸಲಿದೆ. 2032-33ರಲ್ಲಿ ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಬರಬಹುದು ಎಂದು ತಿಳಿಸಿದರು.

ಮುಖ್ಯಾಂಶಗಳು

- 'ಮಹಿಳೆಯರಿಗೆ ಶಕ್ತಿ ತುಂಬಿ, ಚುನಾವಣೆಗೆ ತಯಾರಿ ನಡೆಸಬೇಕು'
- ದೇವೇಗೌಡರು 1996ರಲ್ಲೇ ಮಸೂದೆ ಮಂಡಿಸಿದ್ದರು: ಎಚ್‌ಡಿಕೆ

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ಶೇ50 ರಷ್ಟು ನೀಡಿದ್ದು ದೇವೇಗೌಡರು. 1996ರಲ್ಲಿ ದೇವೇಗೌಡರು ಪ್ರಧಾನಿಯಾದ ಮೇಲೆ ರಾಜ್ಯಸಭೆಯಲ್ಲಿ ಮಹಿಳೆಯರಿಗೆ ಶೇ33 ರಷ್ಟು ಮೀಸಲು ನೀಡುವ ಮಸೂದೆ ಮಂಡಿಸಿದ್ದರು. ಆದರೆ, ಸಮಾಜವಾದಿ ಪಕ್ಷ, ಆರ್‌ಜೆಡಿ ಬೆಂಬಲ ನೀಡದ ಕಾರಣಕ್ಕೆ ಲೋಕಸಭೆಯಲ್ಲಿ ಅಂಗೀಕಾರ ಆಗಿರಲಿಲ್ಲ ಎಂದು ನೆನಪು ಮಾಡಿಕೊಂಡರು.

'ಜಿಬಿಎಗೆ ಶೇ 50ರಷ್ಟು ಮಹಿಳಾ ಮೀಸಲಾತಿ ಘೋಷಣೆ ಆಗಿದೆ. 170-180 ಮಹಿಳೆಯರು ಸ್ಪರ್ಧೆ ಮಾಡಲು ಅವಕಾಶ ಸಿಗಲಿದೆ. ನಮ್ಮಲ್ಲಿ ಮಹಿಳೆಯರಿಗೆ ಶಕ್ತಿ ತುಂಬುವುದು, ತಿಳಿವಳಿಕೆ ಮೂಡಿಸುವ ಕೆಲಸ ಆಗಬೇಕು. ಈಗಿನಿಂದಲೇ ಚುನಾವಣೆಗೆ ತಯಾರಿ ನಡೆಸಬೇಕು' ಎಂದು ಹೇಳಿದರು.

ಜೆಡಿಎಸ್ ಮಹಿಳಾ ಘಟಕ ಭಾನುವಾರ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಎಂ. ಕೃಷ್ಣಾರೆಡ್ಡಿ, ಎಚ್‌.ಡಿ. ದೇವೇಗೌಡ, ಎಚ್‌.ಡಿ. ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ ಭಾಗವಹಿಸಿದ್ದರು

ಕಾರ್ಯಕ್ರಮದಲ್ಲಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಜೆಡಿಎಸ್ ಜಿಬಿಎ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಜವರಾಯಿ ಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ ಹಾಜರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ತಿಳುವಳಿಕೆ
ಶ್ರೀಮತಿ ಅನು ಶಿನೋಜ್, ಮೆ|| ರಾಡಿಸನ್ ಬೆಂಗಳೂರು ಸಿಟಿ ಸೆಂಟರ್ ರವರು # 2 ಗಂಗಾಧರ ಚೆಟ್ಟಿ ರಸ್ತೆ, ಹಲಸೂರು, ಬೆಂಗಳೂರು-560042 ಇಲ್ಲಿ ರೆಕಾರ್ಡೆಡ್/ಲೈವ್ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ಈ ಬಗ್ಗೆ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳು ಏನಾದರೂ ಇದ್ದಲ್ಲಿ, ಅವುಗಳನ್ನು ಲಿಖಿತ ಮೂಲಕ ಸಹಿಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ 15 ದಿನಗಳೊಳಗಾಗಿ ಉಪ ಪೊಲೀಸ್ ಆಯುಕ್ತರು(ಆಡಳಿತ), ಪೊಲೀಸ್ ಆಯುಕ್ತರವರ ಕಚೇರಿ, ನಂ. 1, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು-560001 ರವರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ಸಲಹೆಗಳು ಬಾರದಿದ್ದಲ್ಲಿ ಅರ್ಜಿದಾರರು ಸದರಿ ಸ್ಥಳದಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
ಉದ್ದೇಶಿತ ಕೇಂದ್ರದ ಚಕ್ಕುಬಂದಿ
1. ಪೂರ್ವಕ್ಕೆ : ರಸ್ತೆ, 2. ಪಶ್ಚಿಮಕ್ಕೆ : ಹರ್ಮಿಟೇಜ್ ಅಪಾರ್ಟ್‌ಮೆಂಟ್, 3. ಉತ್ತರಕ್ಕೆ : ರೈನ್‌ಬೋ ಮ್ಯೂಸಿಕ್ ಸ್ಟೂಡಿಯೋ, 4. ದಕ್ಷಿಣಕ್ಕೆ : ಎಂಬೆಸಿ ಎರೋಸ್ ಅಪಾರ್ಟ್‌ಮೆಂಟ್.
ಸಹಿ/-
ಪೊಲೀಸ್ ಆಯುಕ್ತರು
ಬೆಂಗಳೂರು ನಗರ
ದಿನಾಂಕ : 09.03.2026

BUSINESS

Business to Business

Hotel & Restaurant

WELL FURNISHED Restaurant with well equipped kitchen & Everything in 1000 Sft area for SALE or RENT in Posh Vijaya Bank Layout, Bannerghatta Road. Lease Agreement Transferable. For Details Call: 9900001954

JOB OPPORTUNITIES

Graphic Designers

REQUIRED GRAPHIC Designer- Photoshop/ Corel Draw/ Illustrator. Experience 1 Year or Above in around Rajajinagar Contact: 9902891620/ 9845579620

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
9901641752 : 9886213331
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

'ಬ್ಯಾಟರಾಯನಪುರ ಕ್ಷೇತ್ರದಲ್ಲಿ ಬಿಜೆಪಿಯಿಂದ ಹೋರಾಟ'

ಬೆಂಗಳೂರು: 'ಆಡಳಿತವನ್ನು ಸರಿದಾರಿಯಲ್ಲಿ ಕೊಂಡೊಯ್ಯಲು ವಿರೋಧ ಪಕ್ಷಕ್ಕೂ ಆಡಳಿತ ಪಕ್ಷದಷ್ಟೇ ಜವಾಬ್ದಾರಿಯಿದೆ' ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ.ತಮ್ಮೇಶ್‌ಗೌಡ ಹೇಳಿದರು.

ಬ್ಯಾಟರಾಯನಪುರ ಬಿಜೆಪಿ ನಗರ ಮಂಡಲವು ಆಯೋಜಿಸಿದ್ದ ಪಕ್ಷದ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿ 'ಆಡಳಿತದಲ್ಲಿ ಆಗುವ ಅನಾಹುತಗಳನ್ನು ನೋಡಿಕೊಂಡು ವಿರೋಧ ಪಕ್ಷ ಸುಮ್ಮನೆ ಕೂರಬಾರದು' ಎಂದರು.

'ಬ್ಯಾಟರಾಯನಪುರ ಕ್ಷೇತ್ರದಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿದ್ದುಕೊಂಡು ಆಡಳಿತ ಪಕ್ಷದ ವೈಫಲ್ಯಗಳ ವಿರುದ್ಧ ಹೋರಾಟ ರೂಪಿಸಿ, ಕಿವಿ ಹಿಂಡುವ ಕೆಲಸವನ್ನು ಪ್ರಾಮಾಣಿಕವಾಗಿ ಕೈಗೊಂಡಿದ್ದೇನೆ' ಎಂದು ಹೇಳಿದರು.

ಸದೃಢವಾಗಿ ಬಿಜೆಪಿ ಬಲಪಡಿಸಿ 14 ವಾರ್ಡ್‌ಗಳಲ್ಲಿ ಪಕ್ಷ ಗೆಲ್ಲಿಸುವುದು ಗುರಿಯಾಗಿದೆ. ಪ್ರತಿ ವಾರ್ಡ್ ಸಮಸ್ಯೆ ಪಟ್ಟಿ ಮಾಡಿ, ಮಾರ್ಚ್ 16ಕ್ಕೆ ಜಿಬಿಎ ಆಯುಕ್ತರಿಗೆ ಮನವಿ ಸಲ್ಲಿಸಲಾಗುವುದು ಎಂದರು. ಉತ್ತರ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಹರೀಶ್, ರಾಜ್ಯ ಕಾರ್ಯದರ್ಶಿ ವಿನಯ್ ಬಿದರಿ, ಶರಣು ತಳ್ಳಿಕೇರಿ, ಕಾನೂನು ಪ್ರಕೋಷ್ಠ ಸಂಚಾಲಕ ವಸಂತಕುಮಾರ್, ಬ್ಯಾಟರಾಯನಪುರ ನಗರ ಮಂಡಲ ಬಿಜೆಪಿ ಅಧ್ಯಕ್ಷ ಕೃಷ್ಣಮೂರ್ತಿ, ಗ್ರಾ.ಮಂಡಲ ಅಧ್ಯಕ್ಷ ಹನುಮಂತಗೌಡ, ಮಹಿಳಾ ಮೋರ್ಚಾ ಅಧ್ಯಕ್ಷೆ ಪೂರ್ಣಿಮಾ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ 'ದಿಟ್ಟ ಮಹಿಳಾ ಪ್ರಶಸ್ತಿ' ಪ್ರದಾನ ಸಮಾರಂಭ: ಉದ್ಘಾಟನೆ: ತುಷಾರ್ ಗಿರಿನಾಥ್, ಅತಿಥಿಗಳು: ಎಂ. ಮಹೇಶ್ವರ ರಾವ್, ರವೀಂದ್ರ ಪಿ.ಎಸ್., ಸಿ.ಎಸ್. ಷಡಾಕ್ಷರಿ, ರಮೇಶ್ ಸಂಗಾ, ವಿನಯಾ ಪ್ರಸಾದ್, ರಾಜೇಂದ್ರ ಕೆ.ವಿ., ರಾಜೇಂದ್ರ ಚೋಳನ್, ರಮೇಶ್ ಕೆ.ಎಸ್., ಪೊಮ್ಮಲ ಸುನೀಲ್ ಕುಮಾರ್, ರಮೇಶ್ ಡಿ.ಎಸ್., ಆಯೋಜನೆ: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ), ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಡಾ.ರಾಜ್‌ಕುಮಾರ್ ಗಾಜಿನ ಮನೆ, ಜಿಬಿಎ ಕೇಂದ್ರ ಕಚೇರಿ, ಬೆಳಿಗ್ಗೆ 10

ವಿನಯಾ ಪ್ರಸಾದ್

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭ: ಉದ್ಘಾಟನೆ: ಹೇಮಲತಾ ಗೋಪಾಲಯ್ಯ, ಸಾವಿತ್ರಿ ಸುರೇಶ್ ಕುಮಾರ್, ಅತಿಥಿಗಳು: ಮನೋಜ್ ಕುಮಾರ್, ಡಾ.ಭಾನು ಬಿ.ಟಿ., ಅಧ್ಯಕ್ಷತೆ: ಪ್ರೇಮ ಸಿದ್ದರಾಜು, ಆಯೋಜನೆ: ಪರಿಸರಸ್ನೇಹಿ ಟ್ರಸ್ಟ್, ಸ್ಥಳ: ಶ್ರೀಮತಿ ಲಲಿತಮ್ಮ ಮತ್ತು ಶ್ರೀ ಚನ್ನಬಸಪ್ಪ ಸಭಾಂಗಣ, ಎಸ್.ಜೆ.ಆರ್.ಮಹಿಳಾ ಪದವಿ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10.30

'ಅಂಗುಲೀಮಾಲ' ನಾಟಕ ಪ್ರದರ್ಶನ: ನಿರ್ದೇಶನ: ಐ.ಟಿ.ಐ. ರಾಮಮೂರ್ತಿ, ಆಯೋಜನೆ: ರಂಗಧಾಮ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4

'ಭೂ ಕಬಳಿಕೆ ಸಿದ್ಧಾಂತ' ಪುಸ್ತಕ ಬಿಡುಗಡೆ: ಅತಿಥಿಗಳು: ಎಚ್. ವಿಶ್ವನಾಥ್, ಆರ್. ಪೂರ್ಣಿಮಾ, ಟಿ.ಕೆ. ತ್ಯಾಗರಾಜ್, ಉಪಸ್ಥಿತಿ: ಜಿ. ಮಹಾಂತೇಶ್, ಮಲ್ಲಿಕಾರ್ಜುನ ಭಟ್ಟರಹಳ್ಳಿ, ಆಯೋಜನೆ: ಪಾರದರ್ಶಕ ಮೀಡಿಯಾ ಫೌಂಡೇಷನ್, ಸ್ಥಳ: ದಿ ಫೈಲ್ ಕಚೇರಿ, ಹರೇಕೃಷ್ಣ ರಸ್ತೆ, ಶಿವಾನಂದ ವೃತ್ತ, ಸಂಜೆ 6.30

ಉಪನಿಷತ್ತಿನ ಬಗ್ಗೆ ಉಪನ್ಯಾಸ: ಶ್ರೀಎಂ, ಆಯೋಜನೆ: ದಿ ಸತ್ಸಂಗ ಫೌಂಡೇಷನ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭ: ಸಂಪನ್ಮೂಲ ವ್ಯಕ್ತಿ:ಪ್ರಮೇಶ್ ಕೆ.ಎಸ್., ಆಯೋಜನೆ ಹಾಗೂ ಸ್ಥಳ: ಬಿಇಎಸ್ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ಜಯನಗರ, ಸಂಜೆ 7.30

ಮಹಿಳೆಯರಿಂದ ರೈಲು ನಿರ್ವಹಣೆ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

• ಸಿಬ್ಬಂದಿಗೆ ಹೂವು, ಸಿಹಿ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ದಿನಾಚರಣೆಯ ಪ್ರಯುಕ್ತ ಎಂ.ಜಿ.ಆರ್. ಚೆನ್ನೈ ಸೆಂಟ್ರಲ್–ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲನ್ನು ಬೆಂಗಳೂರು– ಮೈಸೂರು ನಡುವೆ ಭಾನುವಾರ ಮಹಿಳಾ ಸಿಬ್ಬಂದಿಯೇ ಸಂಪೂರ್ಣವಾಗಿ ನಿರ್ವಹಣೆ ಮಾಡಿದರು.

ಲೋಕೊ ಪೈಲಟ್ ಆಗಿ ಶಿವಪಾರ್ವತಿ, ಸಹಾಯಕ ಲೋಕೊ ಪೈಲಟ್ ಅಶ್ವತ್ಥಿ ಎಸ್. ನಾಯರ್, ರೈಲು ವ್ಯವಸ್ಥಾಪಕಿ (ಗಾರ್ಡ್) ಆಗಿ ಪ್ರಿಯದರ್ಶಿನಿ ಕಾರ್ಯ ನಿರ್ವಹಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ಬೆಂಗಳೂರು ನಿಲ್ದಾಣದಲ್ಲಿ ಬೆಂಗಳೂರು ವಿಭಾಗದ ಹಿರಿಯ ವಿಭಾಗೀಯ ಪರಿಚಾಲನಾ ವ್ಯವಸ್ಥಾಪಕಿ ಪ್ರಿಯಾ, ಹಿರಿಯ ವಿಭಾಗೀಯ ಅಧಿಕಾರಿ ಉಮಾ ಶರ್ಮಾ, ವಿಭಾಗೀಯ ವ್ಯವಸ್ಥಾಪಕಿ ನಿವೇದಿತಾ ಬಾಲರಡ್ಡಿಯವರ್, ವಿಭಾಗೀಯ ಎಂಜಿನಿಯರ್ (ಟ್ರ್ಯಾಕ್ಷನ್ ಪರಿಚಾಲನೆ) ಅಖಿಲ್ ಮಟ್ಟು ರೈಲಿಗೆ ಹಸಿರು ನಿಶಾನೆ ತೋರಿದರು.

ಎಲ್ಲ ಮಹಿಳಾ ಸಿಬ್ಬಂದಿಗೆ ಹೂವು ನೀಡಿ ಸಿಹಿ ಹಂಚಿ ಸಂಭ್ರಮಿಸಲಾಯಿತು. ವಂದೇ ಭಾರತ್ ರೈಲನ್ನು ಹೂವು, ಬಲೂನ್‌ಗಳಿಂದ ಅಲಂಕರಿಸಲಾಗಿತ್ತು.

ಮಹಿಳೆಯರೇ ನಿರ್ವಹಿಸಿದ ಎಂ.ಜಿ.ಆರ್. ಚೆನ್ನೈ ಸೆಂಟ್ರಲ್– ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಪ್ರಿಯಾ, ಉಮಾ ಶರ್ಮಾ, ನಿವೇದಿತಾ ಬಾಲರಡ್ಡಿಯವರ್ ಚಾಲನೆ ನೀಡಿದರು

‘ಸ್ತ್ರೀಯರ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರೋಗ್ಯಯುತ ಸಮಾಜ ನಿರ್ಮಾಣದಲ್ಲಿ ಮಹಿಳೆಯರು ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಆದ್ದರಿಂದ ಅವರ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡಬೇಕಿದೆ’ ಎಂದು ವೈದ್ಯಕೀಯ ತಜ್ಞರು ಅಭಿಪ್ರಾಯಪಟ್ಟರು.

ಅಂತರರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ ಬನ್ನೇರುಘಟ್ಟ ರಸ್ತೆಯ ಫೋರ್ಟಿಸ್ ಆಸ್ಪತ್ರೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಹಿಳಾ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳ ಕಾರ್ಯದರ್ಶಿಗಳನ್ನು ಸನ್ಮಾನಿಸಲಾಯಿತು. ಇದೇ ವೇಳೆ ವಿಶೇಷ ಉಡುಗೊರೆ ಜತೆಗೆ, ಉಚಿತ ಆರೋಗ್ಯ ತಪಾಸಣೆಗೆ ಸಂಬಂಧಿಸಿದ ಕೂಪನ್‌ಗಳನ್ನು ಸಹ ನೀಡಲಾಯಿತು.

ಈ ವೇಳೆ ಮಾತನಾಡಿದ ಸಂಸ್ಥೆಯ ವೈದ್ಯರು, ‘ಮಹಿಳೆಯರು ಕುಟುಂಬಗಳನ್ನು ಸಮರ್ಥವಾಗಿ ನಿರ್ವಹಣೆ ಮಾಡುವ ಜತೆಗೆ, ಆರೋಗ್ಯಯುತ ಸಮಾಜ ನಿರ್ಮಾಣಕ್ಕೂ ಕೊಡುಗೆ ನೀಡುತ್ತಿದ್ದಾರೆ. ಆದರೆ, ಇದೇ ವೇಳೆ ಅವರು ತಮ್ಮ ಆರೋಗ್ಯವನ್ನು ಕಡೆಗಣಿಸುತ್ತಿದ್ದಾರೆ. ಈ ಬಗ್ಗೆ ಗಮನಹರಿಸಿ, ಅವರ ಆರೋಗ್ಯ ವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ’ ಎಂದರು.

ಆಸ್ಪತ್ರೆಯ ಸೌಲಭ್ಯ ನಿರ್ದೇಶಕ ಗೌತಮ್ ಸಿ.ಬಿ., ‘ಮಹಿಳೆಯರು ತಮ್ಮ ಸಮರ್ಪಣೆ, ಸಹಾನುಭೂತಿ ಮತ್ತು ನಾಯಕತ್ವದ ಗುಣಗಳ ಮೂಲಕ ನಮ್ಮ ಸಮುದಾಯಗಳನ್ನು ಬೆಸೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ’ ಎಂದು ಅಭಿಪ್ರಾಯಪಟ್ಟರು.

ಆಸ್ಪತ್ರೆಯ ಉಪಾಧ್ಯಕ್ಷ ಡಾ. ಅನಂತ್ ರಾವ್ ಹಾಗೂ ಸಂಸ್ಥೆಯ ವೈದ್ಯರು ಇದ್ದರು.

ಕಾರ್ಯಕ್ರಮದಲ್ಲಿ ಮಹಿಳೆಯರು ಕೇಕ್ ಕತ್ತರಿಸಿ ಸಂಭ್ರಮಿಸಿದರು

ನಗರದಲ್ಲಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಹಮ್ಮಿಕೊಂಡಿದ್ದ ಮಹಿಳಾ ದಿನದ ಪ್ರಭಾತ್ ಫೇರಿಯಲ್ಲಿ ಹಲವರು ಭಾಗವಹಿಸಿದ್ದರು

‘ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ’

ಬೆಂಗಳೂರು: ‘ಸಮಾಜದಲ್ಲಿ ಹಾಸು ಹೊಕ್ಕಾಗಿರುವ ಮೂಢನಂಬಿಕೆ, ಅವೈಜ್ಞಾನಿಕ ಧೋರಣೆಯನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು’ ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್‌ಎಸ್) ರಾಜ್ಯ ಕಾರ್ಯದರ್ಶಿ ಎಸ್.ಶೋಭಾ ಸಲಹೆ ನೀಡಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಕೆಂಪಾಪುರ ದಾಸರಹಳ್ಳಿಯಲ್ಲಿ ಎಐಎಂಎಸ್‌ಎಸ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಇಂದು ಮಹಿಳೆಯರು ಸಂಘಟಿತರಾಗುವುದು ಅತ್ಯವಶ್ಯಕವಾಗಿದೆ. ಒಗ್ಗಟ್ಟಾಗಿದ್ದರೆ ಮಾತ್ರ ನಮ್ಮ ಮಾತಿಗೆ ಬೆಲೆ. ಸರಿಯಾದ ವಿಚಾರಧಾರೆ, ಜ್ಞಾನ ಗಳಿಸಿಕೊಂಡರೆ ನಮ್ಮ ವ್ಯಕ್ತಿತ್ವ ಗಟ್ಟಿಯಾಗಿ ರೂಪಗೊಳ್ಳುತ್ತದೆ’ ಎಂದು ಹೇಳಿದರು.

ಜಿಲ್ಲಾ ಅಧ್ಯಕ್ಷೆ ಹೇಮಾವತಿ ಮಾತನಾಡಿದರು. ಎಐಎಂಎಸ್‌ಎಸ್ ಉಪಾಧ್ಯಕ್ಷೆ ಆರ್. ಗೀತಾ ಪ್ರಭಾತ್ ಫೇರಿಗೆ ಚಾಲನೆ ನೀಡಿದರು. ಮಂಡಳಿ ಸದಸ್ಯೆ ಮೇಘನಾ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ನಿರ್ಮಲಾ ಎಚ್.ಎಲ್, ಸುನೀತಾ, ವೈಷ್ಣವಿ, ಸುರೇಖಾ, ರಾಧಿಕಾ, ರಾಜಮ್ಮ, ಅನುರಾಧ, ಅನಿತಾ ಇದ್ದರು.

ಬಳಿಕ ‘ಮಹಿಳಾ ಸಬಲೀಕರಣ’ ಎಂಬ ಕಿರು ನಾಟಕ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಅಪಘಾತ: ಮೂವರು ಯುವಕರ ಸಾವು

ನಿಯಂತ್ರಣ ತಪ್ಪಿ ಲಾರಿಗೆ ಹಿಂಬದಿಯಿಂದ ಅಪ್ಪಳಿಸಿದ ಕಾರು
ಕನಕಪುರ ರಸ್ತೆಯ ಅಗರ ಕ್ರಾಸ್ ಬಳಿ ಘಟನೆ

ಪ್ರಜಾವಾಣಿ ವಾರ್ತೆ

ಕಗ್ಗಲಿಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕನಕಪುರ ರಸ್ತೆಯ ಅಗರ ಕ್ರಾಸ್‌ನಲ್ಲಿ ಲಾರಿಗೆ ಅಪ್ಪಳಿಸಿ ನಜ್ಜುಗುಜ್ಜಾಗಿರುವ ಕಾರು

ಬೆಂಗಳೂರು: ಕಗ್ಗಲಿಪುರ ಠಾಣಾ ವ್ಯಾಪ್ತಿಯ ಕನಕಪುರ ರಸ್ತೆಯ ಅಗರ ಕ್ರಾಸ್ ಬಳಿ ಕಾರು ಹಾಗೂ ಲಾರಿ ನಡುವೆ ಭಾನುವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ಕಾರಿನಲ್ಲಿದ್ದ ಮೂವರು ಮೃತಪಟ್ಟಿದ್ದಾರೆ.

ತಿಲಕ್ ನಗರದ ಸೈಫ್ ಪಾಷಾ (22), ಜಯನಗರ ಮೊದಲ ಹಂತದ ನಿವಾಸಿ ಯೂಸುಫ್ ಖಾನ್ (21) ಹಾಗೂ ಬಿಸ್ಮಿಲಾ ನಗರದ ಅಜರ್ ಖಾನ್ (22) ಮೃತಪಟ್ಟವರು. ಬೆಂಗಳೂರಿನಿಂದ ಹಾರೋಹಳ್ಳಿ ಕಡೆಗೆ ಚಲಿಸುತ್ತಿದ್ದ ಲಾರಿಯ ಹಿಂಭಾಗಕ್ಕೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಕಾರಿನ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿತ್ತು ಎಂದು ಪೊಲೀಸರು ಹೇಳಿದರು.

'ಕಾರನ್ನು ಚಾಲಕ ಅತಿವೇಗವಾಗಿ ಚಾಲನೆ ಮಾಡುತ್ತಿದ್ದರು. ಹಂಪ್ಸ್ ಬಳಿ ನಿಯಂತ್ರಣ ತಪ್ಪಿದ ಕಾರು, ಮುಂದೆ ಚಲಿಸುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದು ಅಪಘಾತವಾಗಿದೆ. ಕಾರಿನಲ್ಲಿದ್ದ ಒಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಮತ್ತಿಬ್ಬರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು. ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದ್ವಿಚಕ್ರ ವಾಹನ ಎಳೆದೊಯ್ದ ಕಾರು

ಜಯಮಹಲ್ ಮೊದಲನೇ ಅಡ್ಡರಸ್ತೆಯಲ್ಲಿ ಸಂಭವಿಸಿದ ಅಪಘಾತ

ಜಯಮಹಲ್ ಮೊದಲನೇ ಅಡ್ಡರಸ್ತೆಯಲ್ಲಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಕಾರೊಂದು ದ್ವಿಚಕ್ರ ವಾಹನವನ್ನು ಅಂದಾಜು 50 ಮೀಟರ್ ದೂರಕ್ಕೆ ಎಳೆದೊಯ್ದಿರುವ ಘಟನೆ ನಡೆದಿದೆ. ಘಟನೆಯಲ್ಲಿ ಮಹಿಳೆ ತೀವ್ರವಾಗಿ ಗಾಯಗೊಂಡಿದ್ದಾರೆ.

ಜಯಮಹಲ್ ನಿವಾಸಿ ರೂಪಾ (40) ಗಾಯಗೊಂಡವರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ರೂಪಾ ಅವರ ದ್ವಿಚಕ್ರ ವಾಹನಕ್ಕೆ ಕಾರು ಹಿಂದಿನಿಂದ ಡಿಕ್ಕಿ ಹೊಡೆದಿತ್ತು. ಪರಿಣಾಮ ಅವರು ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದರು. ಆದರೂ ಚಾಲಕ ವಾಹನ ನಿಲ್ಲಿಸಿಲ್ಲ. ಹೀಗಾಗಿ, ಕಾರು ದ್ವಿಚಕ್ರ ವಾಹನವನ್ನು 50 ಮೀಟರ್ ದೂರದವರೆಗೂ ಎಳೆದೊಯ್ದಿತ್ತು' ಎಂದು ಸಂಚಾರ ಪೊಲೀಸರು ಹೇಳಿದರು.

'ದ್ವಿಚಕ್ರ ವಾಹನದ ಟ್ಯಾಂಕ್ ಜಖಂಗೊಂಡು ಪೆಟ್ರೋಲ್ ಸೋರಿಕೆಯಾಗಿತ್ತು. ಹಾಗಾಗಿ, ಬೆಂಕಿ ಹೊತ್ತಿಕೊಂಡಿದೆ. ದ್ವಿಚಕ್ರ ವಾಹನ ಪೂರ್ಣ ಸುಟ್ಟು ಹೋಗಿದ್ದು, ರೂಪಾ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕಾರು ಚಾಲಕ ಪರಾರಿ ಆಗಿದ್ದಾನೆ. ಆತನಿಗೆ ಹುಡುಕಾಟ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಕಾರು ಚಾಲಕನ ಅತಿಯಾದ ವೇಗ ಹಾಗೂ ಅಜಾಗರೂಕತೆ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಹೇಳಿದರು. ಆರ್.ಟಿ. ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೆಟ್ರೋಲ್ ಸುರಿದು ಪತ್ನಿ, ಅತ್ತೆ, ಮಾವನ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಆಟೊ ಚಾಲಕನೊಬ್ಬ ಪತ್ನಿ, ಅತ್ತೆ ಹಾಗೂ ಮಾವನ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆಗೆ ಯತ್ನಿಸಿರುವ ಘಟನೆ ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಗಾಯಗೊಂಡಿರುವ ತರಬನಹಳ್ಳಿಯ ನಿವಾಸಿ ಸುಮಲತಾ ಹಾಗೂ ಅವರ ತಂದೆ ಶ್ರೀರಾಮ್ ಹಾಗೂ ತಾಯಿ ಮಂಜುಮ್ಮ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಾವನ ಸ್ಥಿತಿ ಗಂಭೀರವಾಗಿದೆ ಎಂದು ಮೂಲಗಳು ಹೇಳಿವೆ.

ಕೃತ್ಯ ಎಸಗಿದ ಆರೋಪಿ ಪಾಂಡುರಂಗನನ್ನು ಬಂಧಿಸಲಾಗಿದೆ ಎಂದು ಸೋಲದೇವನಹಳ್ಳಿ ಠಾಣೆಯ ಪೊಲೀಸರು ಹೇಳಿದರು.

ಮಹಾಲಕ್ಷ್ಮಿ ಲೇಔಟ್ ನಿವಾಸಿ, ಆಟೊ ಚಾಲಕ ಪಾಂಡುರಂಗ ಮತ್ತು ಸುಮಲತಾ ಕೆಲವು ವರ್ಷಗಳ ಹಿಂದೆ ಮದುವೆ ಆಗಿದ್ದರು. ಕೌಟುಂಬಿಕ ಕಾರಣಕ್ಕೆ ಸುಮಲತಾ ಅವರು ಪತಿ ಮನೆಯನ್ನು ತೊರೆದು ತವರು ಮನೆಯಲ್ಲಿ ನೆಲಸಿದ್ದರು. ಎರಡು ದಿನಗಳ ಹಿಂದೆ ಆರೋಪಿ ಪಾಂಡುರಂಗ ಮಾವನ ಮನೆಯ ಬಳಿ ಹೋಗಿದ್ದ, ದ್ವಿಚಕ್ರ ವಾಹನ ಕೊಡಿಸುವಂತೆ ಗಲಾಟೆ ಮಾಡಿದ್ದ, ಅವರು ಬುದ್ಧಿಮಾತು ಹೇಳಿ ಕಳುಹಿಸಿದ್ದರು. ನಂತರ, ಹೊರ ಹೋಗಿದ್ದ ಆರೋಪಿ ಪೆಟ್ರೋಲ್ ತಂದು ಮಾವನ ಮೇಲೆ ಸುರಿದು ಬೆಂಕಿ ಹಚ್ಚಿ ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

ಇನ್‌ಸ್ಟಾಗ್ರಾಂನಲ್ಲಿ ಪರಿಚಯ: ಪಾಂಡುರಂಗ ಹಾಗೂ ಸುಮಲತಾ ಇನ್‌ಸ್ಟಾಗ್ರಾಂನಲ್ಲಿ ಪರಿಚಯ ಆಗಿ ಮದುವೆ ಆಗಿದ್ದರು. ಬೇರೆಯ ಹುಡುಗಿಯ ಜತೆ ಪಾಂಡುರಂಗ ಓಡಾಟ ನಡೆಸುತ್ತಿದ್ದ, ಪತಿ ನಡೆಯನ್ನು ಸುಮಲತಾ ಅವರು ಪ್ರಶ್ನಿಸಿದ್ದರು. ಇದೇ ವಿಚಾರಕ್ಕೆ ದಂಪತಿ ನಡುವೆ ನಿತ್ಯ ಗಲಾಟೆ ನಡೆಯುತ್ತಿತ್ತು. ಪತಿಯಿಂದ ದೂರವಾದ ಮೇಲೆ ಸುಮಲತಾ ಅವರು ಪ್ರತ್ಯೇಕವಾಗಿ ನೆಲಸಿದ್ದರು. ಯಶವಂತಪುರದ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಅಪಘಾತ: ನ್ಯಾಯಮೂರ್ತಿ ಪಾರು

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ರಾಯರಪಾಳ್ಯ ಬಳಿ ಹೈಕೋರ್ಟ್ ನ್ಯಾಯಮೂರ್ತಿ ಬಸವರಾಜು ಅವರು ಪ್ರಯಾಣಿಸುತ್ತಿದ್ದ ಕಾರು ಅಪಘಾತಕ್ಕೀಡಾಗಿದ್ದು, ನ್ಯಾಯಮೂರ್ತಿ ಸೇರಿ ದಂತೆ ಕಾರಿನಲ್ಲಿದ್ದವರು ಅಪಾಯ ದಿಂದ ಪಾರಾಗಿದ್ದಾರೆ.

ಬೆಂಗಳೂರು–ತುಮಕೂರು ರಾಷ್ಟ್ರೀಯ ಹೆದ್ದಾರಿಯ ರಾಯರ ಪಾಳ್ಯದ ಬಳಿ ಕಾರು ಚಲಿಸುತ್ತಿತ್ತು. ವ್ಯಕ್ತಿಯೊಬ್ಬರು ಅಡ್ಡ ಬಂದಿದ್ದರಿಂದ ತಪ್ಪಿಸಲು ಹೋಗಿ ಪೊಲೀಸ್ ಬೆಂಗಾವಲು ವಾಹನಸಿಮೆಂಟ್ ಸ್ಲ್ಯಾಬ್‌ಗೆ ಡಿಕ್ಕಿ ಹೊಡೆ ದಿತ್ತು. ಬಳಿಕ, ನ್ಯಾಯ ಮೂರ್ತಿ ಅವರಿದ್ದ ಕಾರು, ಬೆಂಗಾವಲು ವಾಹನಕ್ಕೆ ಡಿಕ್ಕಿ ಹೊಡೆದಿದೆ. ಪೊಲೀಸ್ ವಾಹನದ ಚಾಲಕನಿಗೆ ಗಂಭೀರ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ನ್ಯಾಯಮೂರ್ತಿ ಅವರು ಕಲಬುರಗಿಗೆ ಪ್ರಯಾಣಿಸುತ್ತಿದ್ದರು ಎಂದು ಪೊಲೀಸರು ಹೇಳಿದರು. ಸ್ಥಳಕ್ಕೆ ನೆಲಮಂಗಲ ಸಂಚಾರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ವೃದ್ಧರೊಬ್ಬರಿಂದ ₹16.60 ಲಕ್ಷ ದೋಚಿದ ಸೈಬರ್ ವಂಚಕರು

ನಿಲ್ಲದ 'ಡಿಜಿಟಲ್ ಅರೆಸ್ಟ್' ಸುಲಿಗೆ

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ಅಪರಾಧ ಪ್ರಕರಣಗಳು ದಿನಕ್ಕೊಂದು ಸ್ವರೂಪ ಪಡೆದುಕೊಳ್ಳುತ್ತಿದ್ದು 'ಡಿಜಿಟಲ್ ಅರೆಸ್ಟ್' ಪ್ರಕರಣಗಳು ಹೆಚ್ಚೆಚ್ಚು ನಡೆಯುತ್ತಿವೆ. 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿ, ವೃದ್ಧರೊಬ್ಬರಿಂದ ಲಕ್ಷಾಂತರ ರೂಪಾಯಿ ದೋಚಲಾಗಿದ್ದು, ಪ್ರಕರಣ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ವೈಟ್‌ಫೀಲ್ಡ್‌ನ ಇ.ಸಿ.ಸಿ ರಸ್ತೆಯ ಲಕ್ಷ್ಮಿ ಎನ್‌ಕ್ಲೇವ್ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿರುವ 64 ವರ್ಷದ ವೃದ್ಧರೊಬ್ಬರು ₹16.60 ಲಕ್ಷ ಕಳೆದುಕೊಂಡು ಸೈಬರ್ ಅಪರಾಧ ಠಾಣೆಯ ಮೆಟ್ಟಿಲೇರಿದ್ದಾರೆ.

ಹಣ ಕಳೆದುಕೊಂಡ ವ್ಯಕ್ತಿ ನೀಡಿದ ದೂರಿನ ಮೇಲೆ ಶಂಕಿತ ಆರೋಪಿ ಸಂದೀಪ್ ರಾವ್ ಎಂಬಾತನ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66(ಸಿ) ಹಾಗೂ 66(ಡಿ) ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 318(4) ಹಾಗೂ 319 (2) ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಪೊಲೀಸ್ ಇಲಾಖೆಯಲ್ಲಿ 'ಡಿಜಿಟಲ್ ಅರೆಸ್ಟ್' ಎಂಬುದೇ ಇಲ್ಲ. ಈ ಸಂಬಂಧ ನಾಗರಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದರೂ ನಾಗರಿಕರು ಭೀತಿಗೆ ಒಳಗಾಗಿ ಹಣ ಕಳೆದುಕೊಳ್ಳುತ್ತಿದ್ದಾರೆ. 2025ರ ಅಂತ್ಯದಲ್ಲಿ 'ಡಿಜಿಟಲ್ ಅರೆಸ್ಟ್' ಪ್ರಕರಣಗಳು ಕಡಿಮೆ ಆಗಿದ್ದವು. ಈಗ ಮತ್ತೆ ಅಂತಹ ಪ್ರಕರಣಗಳು ನಡೆಯುತ್ತಿದ್ದು, 'ಡಿಜಿಟಲ್ ಅರೆಸ್ಟ್' ಭಯದಲ್ಲಿ ಹಣ ಕಳೆದುಕೊಂಡವರು ಹೆಚ್ಚಿನ ಸಂಖ್ಯೆಯಲ್ಲಿ ಠಾಣೆಗೆ ದೂರು ನೀಡುತ್ತಿದ್ದಾರೆ' ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'64 ವರ್ಷದ ವೃದ್ಧರೊಬ್ಬರಿಗೆ ಫೆಬ್ರುವರಿ 14ರಂದು ಕರೆ ಮಾಡಿದ್ದ ವಂಚಕ, ಮುಂಬೈ ಪೊಲೀಸ್ ಎಂಬುದಾಗಿ ಹೇಳಿಕೊಂಡಿದ್ದ. ನಿಮ್ಮ ಖಾತೆಯಿಂದ ಭಯೋತ್ಪಾದನೆ ಸಂಘಟನೆಗಳಿಗೆ ಹಣ ಸಂದಾಯ ಆಗುತ್ತಿದ್ದು ಅಕ್ರಮ ಹಣ ವರ್ಗಾವಣೆಯ ಪ್ರಕರಣ ದಾಖಲಾಗಿದೆ ಎಂದು ಬೆದರಿಸಿದ್ದ. ಸಂದೀಪ್ ರಾವ್ ಹಾಗೂ ಜಾರ್ಜ್ ಮ್ಯಾಥ್ಯುಗೆ ಕರೆಯನ್ನು ವರ್ಗಾವಣೆ ಮಾಡುವುದಾಗಿ ಹೇಳಿ ಸ್ಥಗಿತಗೊಳಿಸಿದ್ದ. ಅದಾದ ಕೆಲವೇ ಕ್ಷಣಗಳಲ್ಲಿ ವಿಡಿಯೊ ಕರೆ ಮಾಡಿದ್ದ ಸೈಬರ್ ವಂಚಕರು, ತಾವು ಮುಂಬೈ ಸೈಬರ್ ಅಪರಾಧ ವಿಭಾಗ ಪೊಲೀಸರೆಂದು ಹೇಳಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಕಳೆದ ಕೆಲವು ತಿಂಗಳಿಂದ ನಿಮ್ಮ ಬ್ಯಾಂಕ್ ಖಾತೆಯಿಂದ ಭಯೋತ್ಪಾದನೆ ಸಂಘಟನೆಗಳಿಗೆ ಹಣ ವರ್ಗಾವಣೆ ಆಗುತ್ತಿದ್ದು, ಬ್ಯಾಂಕ್ ಖಾತೆ ಪರಿಶೀಲನೆ ನಡೆಸಬೇಕು. ಖಾತೆಯಲ್ಲಿರುವ ಎಲ್ಲ ಹಣವನ್ನು ವರ್ಗಾಯಿಸಬೇಕು. ಇಲ್ಲದಿದ್ದರೆ 'ಡಿಜಿಟಲ್ ಅರೆಸ್ಟ್' ಮಾಡುತ್ತೇವೆ ಎಂದು ಬೆದರಿಸಿದ್ದರು. ವಿಡಿಯೊ ಕರೆಯಲ್ಲೇ ಇರಬೇಕು. ಬೇರೆಲ್ಲೂ ಹೋಗುವಂತಿಲ್ಲವೆಂದೂ ಹೇಳಿದ್ದರು. ವಂಚಕರ ಮಾತು ನಂಬಿದ್ದ ವೃದ್ಧ, ಎರಡು ಬ್ಯಾಂಕ್ ಖಾತೆಗಳಿಂದ ಆನ್‌ಲೈನ್ ಮೂಲಕ ₹16.60 ಲಕ್ಷ ವರ್ಗಾಯಿಸಿದ್ದರು.

ಕೆಲವು ದಿನಗಳ ಬಳಿಕ ದೂರುದಾರರು, ವಂಚಕರಿಗೆ ಕರೆ ಮಾಡಿದ್ದರು. ಆಗ ಮೊಬೈಲ್ ಸ್ವಿಚ್ಡ್ ಆಫ್ ಬರುತ್ತಿತ್ತು' ಎಂದು ಮೂಲಗಳು ಹೇಳಿವೆ.

ಉದ್ಯೋಗದ ಆಮಿಷವೊಡ್ಡಿ ದೋಚಿದರು

ಇನ್ನೊಂದು ಪ್ರಕರಣದಲ್ಲಿ ಉದ್ಯೋಗದ ಆಮಿಷವೊಡ್ಡಿ, ವ್ಯಕ್ತಿಯಿಂದ ಸೈಬರ್ ವಂಚಕರು ₹6.13 ಲಕ್ಷ ದೋಚಿದ್ದಾರೆ.

'ಉದ್ಯೋಗಕ್ಕಾಗಿ ಕೆ.ಆರ್ ಪುರದ ನಿವಾಸಿ ಭರತ್ ಶಾಂತಪ್ಪ ಅವರು ವೆಬ್‌ಸೈಟ್‌ವೊಂದರಲ್ಲಿ ಸ್ವವಿವರ ಹಾಕಿದ್ದರು. ಕೆಲವು ದಿನ ಕಳೆದ ಮೇಲೆ ವೊಲ್ವೊ ಗ್ರೂಪ್‌ನ ಹಿರಿಯ ವ್ಯವಸ್ಥಾಪಕ ಹೆಸರಿನಲ್ಲಿ ಕರೆ ಮಾಡಿದ್ದ ವಂಚಕ, ಕಂಪನಿಯಲ್ಲಿ ಕೆಲಸ ಕೊಡುವುದಾಗಿ ಹೇಳಿದ್ದ. ಆನ್‌ಲೈನ್‌ನಲ್ಲಿ ಸಂದರ್ಶನ ಮಾಡುವ ನಾಟಕವಾಡಿ, ಕೆಲಸಕ್ಕೆ ಆಯ್ಕೆ ಆಗಿರುವುದಾಗಿ ಹೇಳಿದ್ದ. ಭದ್ರತಾ ಠೇವಣಿಯಾಗಿ ₹6.13 ಲಕ್ಷ ವರ್ಗಾವಣೆ ಮಾಡಬೇಕೆಂದು ಸೂಚಿಸಿದ್ದ. ವಂಚಕನ ಮಾತು ನಂಬಿದ್ದ ಭರತ್ ಅವರು ತಮ್ಮ ಹಾಗೂ ಪತ್ನಿಯ ಖಾತೆಯಿಂದ ಹಣ ವರ್ಗಾವಣೆ ಮಾಡಿ ಹಣ ಕಳೆದುಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರಾಜರಾಜೇಶ್ವರಿ ನಗರದಲ್ಲಿ ಕಸಕ್ಕೆ ಬೆಂಕಿ ಹಚ್ಚಿರುವುದು

ತ್ಯಾಜ್ಯಕ್ಕೆ ಬೆಂಕಿ: ಆವರಿಸಿದ ಹೊಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರದಲ್ಲಿ ವ್ಯಕ್ತಿಯೊಬ್ಬರು ತ್ಯಾಜ್ಯಕ್ಕೆ ಬೆಂಕಿ ಹಚ್ಚಿ ಮಾಲಿನ್ಯ ಉಂಟು ಮಾಡಿದ್ದು, ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜರಾಜೇಶ್ವರಿ ನಗರದ ಬಿಇಎಂಎಲ್ ಐದನೇ ಹಂತದ ಬಡಾವಣೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಚೇರಿಯ ಪಕ್ಕದ ರಸ್ತೆಯಲ್ಲಿ ಒಂದು ವಾರದಿಂದ ಪಾಲಿಕೆ ಸಿಬ್ಬಂದಿ ಕಸಗುಡಿಸಿ ಅಲ್ಲಲ್ಲೇ ಗುಡ್ಡೆ ಹಾಕಿದ್ದರು. ಕಸ ವಿಲೇವಾರಿ ಮಾಡುವಂತೆ ಮನವಿ ಮಾಡಿದ್ದರೂ ಪಾಲಿಕೆಯ ಅಧಿಕಾರಿಗಳು ಸ್ಪಂದಿಸಿರಲಿಲ್ಲ. ಶನಿವಾರ ಸಂಜೆ ದ್ವಿಚಕ್ರ ವಾಹನದಲ್ಲಿ ಬಂದ ವ್ಯಕ್ತಿಯೊಬ್ಬರು ಬೆಂಕಿ ಹಚ್ಚಿ ಹೋಗಿದ್ದರು.

ಇಡೀ ಪ್ರದೇಶವೇ ಹೊಗೆ ತುಂಬಿ ಉಸಿರುಕಟ್ಟುವ ವಾತಾವರಣ ಉಂಟಾಗಿದ್ದರಿಂದ ಅಕ್ಕಪಕ್ಕದ ಜನರು ಭೀತರಾದರು. ಸ್ಥಳೀಯ ನಿವಾಸಿಗಳು ನೀರು ತಂದು ಬೆಂಕಿ ನಂದಿಸಲು ಪ್ರಯತ್ನಿಸಿದರು. ಬೆಂಕಿ ನಿಯಂತ್ರಣಕ್ಕೆ ಬರುವ ಹೊತ್ತಿಗೆ ಆ ಭಾಗದಲ್ಲಿದ್ದ ಹಸಿರು ಗಿಡ ಮರಗಳು ಕರಕಲಾಗಿದ್ದವು ಎಂದು ಸ್ಥಳೀಯರು ತಿಳಿಸಿದ್ದಾರೆ.

ಪರಿಸರ ಸಂರಕ್ಷಣೆ ಕಾಯ್ದೆಯ ಪ್ರಕಾರ ತ್ಯಾಜ್ಯ ವಸ್ತುಗಳಿಗೆ ಬೆಂಕಿ ಹಚ್ಚಿ ಪರಿಸರ ಮಾಲಿನ್ಯ ಮಾಡುವವರಿಗೆ ದಂಡ ಮತ್ತು ಐದು ವರ್ಷ ಜೈಲು ಶಿಕ್ಷೆ ಎಂಬ ಕಾನೂನು ಇದೆ. ಆದರೆ, ಜನರು ಕಾನೂನು ಪಾಲನೆ ಮಾಡುತ್ತಿಲ್ಲ. ಬೆಂಕಿ ಹಚ್ಚಿ ಮಾಲಿನ್ಯ ಸೃಷ್ಟಿಸುವವರ ವಿರುದ್ಧ ಬಿಗಿ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದ್ದರು. ಅದರೂ ಬೆಂಕಿ ಹಚ್ಚಿ ಮಾಲಿನ್ಯ ಮಾಡುವುದು ಮುಂದುವರಿದಿದೆ. ಸಾರ್ವಜನಿಕರಷ್ಟೇ ಅಲ್ಲ, ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಹೀಗಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಸ್ಪ್ರೇ ಹೊಡೆದು ಯುವಕನ ಅಪಹರಣ

ಆನೇಕಲ್: ಆನೇಕಲ್ ಪೊಲೀಸ್ ಠಾಣೆ ವ್ಯಾಪ್ತಿಯ ಕರ್ಪೂರು ಬಳಿ ಭಾನುವಾರ ಕಾರನ್ನು ಅಡ್ಡಗಟ್ಟಿ ಯುವಕನೊಬ್ಬನನ್ನು ಅಪಹರಣ ಮಾಡಲಾಗಿದೆ.

ಹೊನ್ನಕಳಶಾಪುರ ಗೋಪಾಲ್ ಅಪಹರಣ ಆದವರು. ಗೋಪಾಲ್ ರಿಯಲ್ ಎಸ್ಟೇಟ್ ಮತ್ತು ಹಣಕಾಸು ವ್ಯವಹಾರ ಮಾಡುತ್ತಿದ್ದ ಎನ್ನಲಾಗಿದ್ದು, ಅಪಹರಣಕ್ಕೆ ನಿಖರ ಕಾರಣ ತಿಳಿದು ಬಂದಿಲ್ಲ.

ಗೋಪಾಲ್ ಮತ್ತು ಅವರ ಸ್ನೇಹಿತ ಸತೀಶ್ ಅತ್ತಿಬೆಲೆಯಿಂದ ಆನೇಕಲ್‌ನತ್ತ ಬರುವಾಗ ಕರ್ಪೂರು ಬಳಿ ಕಾರಿಗೆ ದುಷ್ಕರ್ಮಿಗಳು ತಮ್ಮ ವಾಹನದಿಂದ ಡಿಕ್ಕಿ ಹೊಡೆದು ಗೋಪಾಲ್ ಮುಖಕ್ಕೆ ಸ್ಪ್ರೇ ಹಾಕಿ ಅಪಹರಣ ಮಾಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆಯ ಹಿನ್ನೆಲೆಯಲ್ಲಿ ಕರ್ಪೂರು ಬಳಿ ಇದ್ದ ವಾಹನವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಆನೇಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಗಳಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 14 ವರ್ಷಗಳ ಹಿಂದೆ ಕಾರ್ಪೊರೇಷನ್ ಬ್ಯಾಂಕ್‌ನ ಚಿಕ್ಕಬಾಣಾವರ ಶಾಖೆಯಲ್ಲಿ ನಡೆದಿದ್ದ ಗ್ರಾಹಕರೊಬ್ಬರ ಕೊಲೆ ಮತ್ತು ₹15 ಲಕ್ಷ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಹಾರದ ಮೂವರು ಮತ್ತು ಛತ್ತೀಸಗಢ ರಾಜ್ಯದ ಒಬ್ಬ ಆರೋಪಿಗೆ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.

ಈ ಸಂಬಂಧ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ನೇತೃತ್ವದ ವಿಭಾಗೀಯ ನ್ಯಾಯಪೀಠ, ವಿಚಾರಣಾ ನ್ಯಾಯಾಲಯದ ಆದೇಶವನ್ನು ತಿದ್ದುಪಡಿ ಮಾಡಿ ತೀರ್ಪು ಪ್ರಕಟಿಸಿದೆ.

ಬಿಹಾರದ ದೇವೇಶ್ ಕುಮಾರ್ ಸಿಂಗ್, ವಿಕಾಸ್ ಕುಮಾರ್ ಗುಪ್ತಾ, ಇಮ್ರಾನ್ ಮತ್ತು ಛತ್ತೀಸಗಢದ ಪ್ರೇಮ್‌ಕುಮಾರ್ ಸಾಹು ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಆರೋಪಿಗಳು.

'ನಾಲ್ವರೂ ಅಪರಾಧಿಗಳು ಎರಡು ವಾರಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಏಳನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಹಾಜರಾಗಬೇಕು. ವಿಚಾರಣಾ ನ್ಯಾಯಾಲಯ ಅಪರಾಧಿಗಳನ್ನು ಜೈಲಿಗೆ ಕಳುಹಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

'ಅಪರಾಧಿಗಳಿಗೆ ವಿಧಿಸಲಾದ ತಲಾ ₹90 ಸಾವಿರ ಮೊತ್ತದ ಪೈಕಿ ಶೇ 80ರಷ್ಟು ಹಣವನ್ನು ಘಟನೆಯಲ್ಲಿ ಕೊಲೆಗೀಡಾದ ಮುರಳೀಧರ ಅವರ ಪತ್ನಿಗೆ ಪರಿಹಾರವಾಗಿ ನೀಡಬೇಕು' ಎಂದೂ ನ್ಯಾಯಪೀಠವು ನಿರ್ದೇಶನ ನೀಡಿದೆ.

ಪ್ರಕರಣವೇನು?: 2012ರ ನವೆಂಬರ್ 19ರಂದು ಸಂಜೆ 4 ಗಂಟೆಗೆ ಕಾರ್ಪೊರೇಷನ್ ಬ್ಯಾಂಕ್ ದರೋಡೆ ಮಾಡಲಾಗಿತ್ತು. ಈ ವೇಳೆ ಅಲ್ಲಿದ್ದ ಗ್ರಾಹಕ ಮುರಳೀಧರ ದೇವೇಶ್ ಅವರನ್ನು ಗುಂಡು ಹಾರಿಸಿ ಕೊಲೆ ಮಾಡಲಾಗಿತ್ತು. ಆರೋಪಿಗಳು ನಂತರ ಕ್ಯಾಷಿಯರ್ ಅವರಿಂದ ₹15.23 ಲಕ್ಷ ಲಪಟಾಯಿಸಿ ಪರಾರಿ ಆಗಿದ್ದರು. ಬ್ಯಾಂಕ್ ಮ್ಯಾನೇಜರ್ ನೀಡಿದ್ದ ದೂರು ಆಧರಿಸಿ ಸೋಲದೇವನಹಳ್ಳಿ ಠಾಣೆ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆರೋಪಿಗಳಾದ ವಿಕಾಸ್ ಕುಮಾರ್ ಗುಪ್ತಾ, ಇಮ್ರಾನ್ ಮತ್ತು ಪ್ರೇಮ್ ಕುಮಾರ್ ಸಾಹು ಅವರನ್ನು 2016ರ ಏಪ್ರಿಲ್‌ನಲ್ಲಿ ಖುಲಾಸೆಗೊಳಿಸಿ ಆದೇಶಿಸಿತ್ತು. ಮೊದಲನೇ ಆರೋಪಿ ದೇವೇಶ್ ಕುಮಾರ್ ಸಿಂಗ್ ಅವರನ್ನು ಅತಿಕ್ರಮ ಪ್ರವೇಶ, ದರೋಡೆ ಮತ್ತು ಅಕ್ರಮ ಶಸ್ತ್ರಾಸ್ತ್ರ ಹೊಂದಿದ್ದ ಅಪರಾಧದಡಿ ಜೈಲಿಗೆ ಕಳುಹಿಸಲಾಗಿತ್ತು.

ಪೊಲೀಸ್ ಸಮವಸ್ತ್ರದಲ್ಲಿ ಮನೆಗೆ ನುಗ್ಗಿ ದೋಚಿದ್ದ ಪ್ರಕರಣ

ದರೋಡೆಗೆ ಸ್ನೇಹಿತನ ಸಂಚು, ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಮವಸ್ತ್ರದಲ್ಲಿ ರಿಯಲ್ ಎಸ್ಟೇಟ್ ಏಜೆಂಟ್ ಮನೆಗೆ ನುಗ್ಗಿ ₹20 ಲಕ್ಷ ನಗದು ಮತ್ತು ಚಿನ್ನದ ಅಭರಣ ದೋಚಿದ್ದ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸ್ಟ್ಯಾಂಪ್ ವೆಂಡರ್ ಬೆಟ್ಟೇಗೌಡ (52) ಬಂಧಿತ. ಬಿ.ಇ.ಎಲ್ ಲೇಔಟ್‌ನಲ್ಲಿ ನೆಲಸಿದ್ದ ರಿಯಲ್ ಎಸ್ಟೇಟ್ ಏಜೆಂಟ್ ಹೊಂಬಾಳೇಗೌಡ ಅವರ ಮನೆಗೆ ಫೆಬ್ರುವರಿ 16ರಂದು ಮಧ್ಯಾಹ್ನ ಪೊಲೀಸರ ಸೋಗಿನಲ್ಲಿ ಇಬ್ಬರು ಆರೋಪಿಗಳು ನುಗ್ಗಿ, ಗನ್ ಮತ್ತು ಚಾಕು ತೋರಿಸಿ ಮನೆಯಲ್ಲಿದ್ದವರನ್ನು ಬೆದರಿಸಿದ್ದರು. ಬಳಿಕ, ಹೊಂಬಾಳೇಗೌಡ ದಂಪತಿಯ ಕೈ–ಕಾಲುಗಳಿಗೆ ಟೇಪ್ ಸುತ್ತಿ, ಬೆಡ್ ರೂಮ್‌ನಲ್ಲಿದ್ದ ₹20 ಲಕ್ಷ ನಗದು ಮತ್ತು ಚಿನ್ನಾಭರಣ ದೋಚಿ ಪರಾರಿ ಆಗಿದ್ದರು. ಈ ಸಂಬಂಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ದರೋಡೆಕೋರರು ದಂಪತಿಯ ಮೊಬೈಲ್ ಫೋನ್ ಕಸಿದುಕೊಂಡಿದ್ದರು. ಅಲ್ಲದೇ, ಸಾಕ್ಷ್ಯ ನಾಶಪಡಿಸಲು ಮನೆಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದ ಡಿವಿಆರ್ ತೆಗೆದುಕೊಂಡು ಪರಾರಿ ಆಗಿದ್ದರು ಎಂದು ಮೂಲಗಳು ಹೇಳಿವೆ.

ಪ್ರಕರಣದ ತನಿಖೆ ನಡೆಸಿದ್ದ ಬ್ಯಾಡರಹಳ್ಳಿ ಪೊಲೀಸರು, ನಾಗೇಂದ್ರ ಹಾಗೂ ಬಚ್ಚನ್ ಎಂಬುವರನ್ನು ಆರಂಭದಲ್ಲಿ ಬಂಧಿಸಿದ್ದರು. ಆದರೆ, ತನಿಖೆ ಮುಂದುವರಿಸಿದಾಗ ಅಸಲಿ ಸತ್ಯ ಬಯಲಾಗಿದ್ದು, ಹೊಂಬಾಳೇಗೌಡ ಅವರ ಸ್ನೇಹಿತ ಬೆಟ್ಟೇಗೌಡ ಅವರ ಸಂಚು ಬಯಲಾಗಿದೆ.

ಹೊಂಬಾಳೇಗೌಡ ಅವರು ನಿವೇಶನ ಮಾರಾಟಕ್ಕೆ ಬೆಟ್ಟೇಗೌಡ ಅವರ ಬಳಿ ಸ್ಟ್ಯಾಂಪ್ ಪೇಪರ್ ಮಾಡಿಸಿದ್ದರು. ಹೀಗಾಗಿ, ಸ್ನೇಹಿತನ ಬಳಿ ನಿವೇಶನ ಮಾರಾಟ ಮಾಡಿದ ಹಣ ಇದೆ ಎಂದು ಆರೋಪಿ ತಿಳಿದುಕೊಂಡಿದ್ದರು. ದರೋಡೆಗೆ ಸಂಚು ರೂಪಿಸಿದ್ದರು ಎಂದು ಪೊಲೀಸರು ಹೇಳಿದರು.

ಜೈಲಿಂದ ಬಂದು ಕೃತ್ಯ: ಆರೋಪಿ ನಾಗೇಂದ್ರ ಪರೋಲ್ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದರು. ದರೋಡೆ ನಡೆಸುವಂತೆ ನಾಗೇಂದ್ರ ಅವರಿಗೆ ಬೆಟ್ಟೇಗೌಡ ತಿಳಿಸಿದ್ದರು. ಶಿವಾಜಿನಗರದಲ್ಲಿ ಶೂಟಿಂಗ್‌ಗೆಂದು ಪೊಲೀಸ್ ಸಮವಸ್ತ್ರವನ್ನು ಬಾಡಿಗೆಗೆ ಪಡೆದಿದ್ದ ನಾಗೇಂದ್ರ, ಅದೇ ಸಮವಸ್ತ್ರ ಧರಿಸಿ ಸಹಚರನೊಂದಿಗೆ ಹೊಂಬಾಳೇಗೌಡ ಅವರ ಮನೆಗೆ ನುಗ್ಗಿ ದರೋಡೆ ನಡೆಸಿದ್ದರು ಎಂದು ಪೊಲೀಸರು ತಿಳಿಸಿದರು.

ಪ್ರಕರಣ ದಾಖಲಾದ ಮೇಲೆ ಸುಕೊ (ಸೀನ್ ಆಫ್ ಕ್ರೈಂ) ತಂಡ ಮತ್ತು ಬೆರಳಚ್ಚು ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅಲ್ಲಿ ಪತ್ತೆಯಾದ ಬೆರಳಚ್ಚುಗಳನ್ನು ಪರೀಕ್ಷೆ ಮಾಡಿದಾಗ, ಅದು ಈಗಾಗಲೇ ಜೈಲಿನಲ್ಲಿ ಇರುವ ಒಬ್ಬ ಕೈದಿಯ ಬೆರಳಚ್ಚಿಗೆ ಹೋಲಿಕೆ ಆಗುತ್ತಿತ್ತು. ನ್ಯಾಯಾಲಯದ ಅನುಮತಿ ಪಡೆದು ಬಾಡಿ ವಾರಂಟ್ ಮೇಲೆ ಆತನನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಯಿತು.

ಬೆಟ್ಟೇಗೌಡ ಅವರು ದರೋಡೆ ನಡೆಸಲು ಸೂಚಿಸಿದ್ದರು ಎಂಬುದಾಗಿ ವಿಚಾರಣೆ ವೇಳೆ ನಾಗೇಂದ್ರ ತಪ್ಪೊಪ್ಪಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ಕಸದ ರಾಶಿ ತೆರವುಗೊಳಿಸಿ'

ಮಾಗಡಿ ರಸ್ತೆ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಇದರಿಂದ ಇಡೀ ಪ್ರದೇಶವೇ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಇದು ಸೊಳ್ಳೆಗಳ ಉತ್ಪತ್ತಿ ತಾಣವಾಗಿಯೂ ಮಾರ್ಪಟ್ಟಿದೆ. ಸ್ಥಳೀಯ ನಿವಾಸಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ಬಂದು ಇಲ್ಲಿ ಎಸೆದು ಹೋಗುತ್ತಿದ್ದಾರೆ. ಇಲ್ಲಿ ಕಸ ಹಾಕುವವರನ್ನು ಗುರುತಿಸಿ, ದಂಡ ಹಾಕಬೇಕು.

ಎಂ. ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರ ಮಾಗಡಿರಸ್ತೆ

'ಅಗೆದ ರಸ್ತೆ ದುರಸ್ತಿಗೊಳಿಸಿ'

ಆರ್.ಟಿ. ನಗರದ ವ್ಯಾಪ್ತಿಯಲ್ಲಿ ಬರುವ ರಹಮತ್‌ನಗರದ ಸಿಎಸ್‌ಬಿ ಬ್ಯಾಂಕ್ ಮುಂಭಾಗದಲ್ಲಿ ರಸ್ತೆ ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗಿದೆ. ಕೆಲ ದಿನಗಳ ಹಿಂದೆ ಬೆಂಗಳೂರು ಜಲಮಂಡಳಿ ಪೈಪ್‌ಗಳನ್ನು ಅಳವಡಿಸಲು ರಸ್ತೆ ಅಗೆದು ಹಾಗೆಯೇ ಬಿಟ್ಟಿದೆ. ವಾಹನ ಸಂಚಾರಕ್ಕೆ ಸಮಸ್ಯೆ ಆಗಿ ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆ ದುರಸ್ತಿಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ.

ರಹಮತ್ ನಗರದ ನಿವಾಸಿಗಳು

'ರೈಲ್ವೆ ಗೇಟ್ ಸಂಚಾರ ದಟ್ಟಣೆ'

ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ಬರುವ ವೀರಣ್ಣ ಪಾಳ್ಯ ರೈಲ್ವೆ ಹಳಿ ಗೇಟ್ ಹತ್ತಿರ ಸಂಚಾರ ದಟ್ಟಣೆ ಆಗುತ್ತಿದೆ. ರೈಲ್ವೆ ಗೇಟ್ ಹಾಕಿದ ಸಂದರ್ಭದಲ್ಲಿ ವಾಹನಗಳ ಭರಾಟೆ ಜೋರಾಗಿರುತ್ತದೆ. ಪಾದಚಾರಿ ಮಾರ್ಗವೂ ಇಲ್ಲದಿರುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಅಪಘಾತಗಳು ಆಗುವ ಸಂಭವ ಇದೆ. ಆದ್ದರಿಂದ ಇಲ್ಲಿ ಅಂಡರ್‌ಪಾಸ್ ನಿರ್ಮಿಸಬೇಕು. ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಅ.ನಾ.ರಾವ್ ಜಾದವ್, ವೀರಣ್ಣಪಾಳ್ಯ

'ಬ್ಯಾನರ್ ವಿಲೇವಾರಿ ಮಾಡಿ'

ಪೂರ್ವ ನಗರ ಪಾಲಿಕೆಯ ಕೆ.ಆರ್. ಪುರ ವಾರ್ಡ್ ವ್ಯಾಪ್ತಿಗೆ ಬರುವ ಪಾದಚಾರಿ ಮೇಲ್ಸೇತುವೆ ಮೇಲೆ ಅಳವಡಿಸಿದ ಹಳೇ ಜಾಹೀರಾತು ಬ್ಯಾನರ್ ವಿಲೇವಾರಿ ಮಾಡದೇ ಹಾಗೆಯೇ ಇಡಲಾಗಿದೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಆಗುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಹಳೇ ಜಾಹೀರಾತು ಬ್ಯಾನರ್ ಅನ್ನು ವಿಲೇವಾರಿ ಮಾಡಿ ಸಾರ್ವಜನಿಕರು ಸುಗಮವಾಗಿ ಓಡಾಡಲು ಅನುಕೂಲ ಮಾಡಿಕೊಡಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ

'ರಸ್ತೆಯಲ್ಲಿನ ಕಸ ವಿಲೇವಾರಿ ಮಾಡಿ'

ಸಾರಕ್ಕಿ ಸಿಗ್ನಲ್ ಬಳಿಯ ರಸ್ತೆಯಲ್ಲಿ ರಾಶಿಗಟ್ಟಲೇ ಕಸ ಬಿದ್ದಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ. ರಸ್ತೆಯಲ್ಲಿ ಬಿದ್ದಿರುವ ಕಸವನ್ನು ಬೀಡಾಡಿ ದನಗಳು ಹಾಗೂ ಬೀದಿ ನಾಯಿಗಳು ರಸ್ತೆಗೆ ಎಳೆದು ತರುತ್ತಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆಯಲ್ಲಿ ಬಿದ್ದಿರುವ ಕಸದಿಂದ ನಗರದ ಸೌಂದರ್ಯಕ್ಕೂ ಧಕ್ಕೆಯಾಗುತ್ತಿದೆ.

ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಇಲ್ಲಿ ಹಾಕಿರುವ ಕಸವನ್ನು ಕೂಡಲೇ ವಿಲೇವಾರಿ ಮಾಡಬೇಕು.

ತೇಜಸ್, ವಾಹನ ಸವಾರ

ಬಂಧನಕ್ಕೆ ಕಾರಣಗಳು ದೋಷಪೂರಿತವೆಂಬ ಆರೋಪ

ವಿದೇಶಿಯರ ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಂಧನದ ಕಾರಣಗಳು ದೋಷಪೂರಿತವಾಗಿವೆ' ಎಂಬ ಹಿನ್ನೆಲೆಯಲ್ಲಿ; ಮಾದಕವಸ್ತು ಸಂಗ್ರಹ ಹಾಗೂ ಮಾರಾಟ ಆರೋಪದಡಿ ಬಂಧಿಸಲಾಗಿದ್ದ ಇಬ್ಬರು ನೈಜೀರಿಯಾ ಪ್ರಜೆಗಳನ್ನು ಬಿಡುಗಡೆ ಮಾಡುವಂತೆ ಹೈಕೋರ್ಟ್ ಆದೇಶಿಸಿದೆ.

'ನಮ್ಮನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಲಾಗಿದ್ದು ಬಿಡುಗಡೆ ಮಾಡಲು ಪೊಲೀಸರಿಗೆ ನಿರ್ದೇಶಿಸಬೇಕು' ಎಂದು ಕೋರಿ ನೈಜಿರಿಯಾ ಪ್ರಜೆಗಳಾದ (ಸದ್ಯ ಕೋಗಿಲು ಲೇಔಟ್ ವಿಳಾಸ ಹೊಂದಿರುವ) ಇಮೆಕಾ ಜೇಮ್ಸ್ ಐವೊಬಾ (39) ಹಾಗೂ ವುಡೆರಿಕ್ ಫಿಡೆಲಿಸ್ (34) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ.

'ಅರ್ಜಿದಾರರಿಗೆ ನೀಡಲಾದ ಬಂಧನದ ಕಾರಣಗಳು ದೋಷಪೂರಿತವಾಗಿವೆ. ಬಂಧನದ ಕಾರಣಗಳನ್ನು ಗಮನಿಸಿದಾಗ ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ ಆಗಿರುವುದು ಸ್ಪಷ್ಟವಾಗಿದ್ದು, ಅರ್ಜಿದಾರರು ಬಿಡುಗಡೆ ಹೊಂದಲು ಅರ್ಹರಾಗಿದ್ದಾರೆ' ಎಂದು ನ್ಯಾಯಪೀಠ ತಿಳಿಸಿದೆ.

'ಅರ್ಜಿದಾರರು ಅಧಿಕೃತ ದಾಖಲೆಗಳಿಲ್ಲದೆ ಕಳೆದೊಂದು ದಶಕದಿಂದ ಭಾರತದಲ್ಲಿ ನೆಲಸಿದ್ದಾರೆ. ಹೀಗಾಗಿ, ಅವರನ್ನು ಬಿಡುಗಡೆ ಮಾಡಿದ ನಂತರ ದೇಶದಿಂದ ಗಡೀಪಾರು ಮಾಡುವುದಕ್ಕೆ ಸಂಬಂಧಿಸಿದ, ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ಅನುಸಾರ ಮುಂದಿನ ಕ್ರಮ ಕೈಗೊಳ್ಳಲು ಎಫ್‌ಆರ್‌ಆರ್‌ಒಗೆ (ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ) ಹಸ್ತಾಂತರಿಸಬೇಕು' ಎಂದು ನಿರ್ದೇಶಿಸಿದೆ.

ಪ್ರಕರಣವೇನು?: ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಆರೋಪದಡಿ ಅರ್ಜಿದಾರರನ್ನು 2024ರ ಮೇ 12ರಂದು ನಗರದ ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದರು. ಈ ವೇಳೆ, ಆರೋಪಿಗಳಿಂದ 400 ಗ್ರಾಂ ಎಂಡಿಎಂಎ (ಮಿಥೈಲ್ ಎನೆಡಿಯೊಕ್ಸಿ ಮೆಥಾಮ್‌ಫೆಟಾ ಅಮೈನ್) ವಶಪಡಿಸಿಕೊಳ್ಳಲಾಗಿತ್ತು.

ಈ ಸಂಬಂಧ ಅವರ ವಿರುದ್ಧ, ಮಾದಕ ದ್ರವ್ಯ ನಿಗ್ರಹ ಕಾಯ್ದೆ–1985 ರ (ಎನ್‌ಡಿಪಿಎಸ್) ಕಲಂ 8(ಸಿ), 22(ಸಿ) ಮತ್ತು ವಿದೇಶಿಯರ ಕಾಯ್ದೆ–1946ರ ಕಲಂ 14ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ಪ್ರಕರಣವು ಬೆಂಗಳೂರಿನ ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ಆರ್. ಬಾಲಕೃಷ್ಣ ಹಾಗೂ ಪ್ರಾಸಿಕ್ಯೂಷನ್ ಪರ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.

ಮುಖ್ಯಾಂಶಗಳು

- ಸಂಪಿಗೆಹಳ್ಳಿ ಠಾಣೆ ಪೊಲೀಸರು ದಾಖಲಿಸಿದ್ದ ಪ್ರಕರಣ
- ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದ 41ನೇ ಎಸಿಎಂಎಂ ಕೋರ್ಟ್

ಗಣನೀಯ ಅನುಸರಣೆ ಸಾಕು

- ಭಾರತದ ಸಂವಿಧಾನದ 22(1) ನೇ ವಿಧಿಯು, ಬಂಧನಕ್ಕೆ ಒಳಗಾದ ಪ್ರತಿಯೊಬ್ಬ ವ್ಯಕ್ತಿಗೂ ಬಂಧನದ ಕಾರಣಗಳನ್ನು ತಿಳಿಸಬೇಕು ಎಂದು ಆದೇಶಿಸುತ್ತದೆ.
- ಬಂಧನದ ಕಾರಣಗಳನ್ನು ತಿಳಿಸುವ ಅವಶ್ಯಕತೆ ಕಡ್ಡಾಯ ಸಾಂವಿಧಾನಿಕ ರಕ್ಷಣೆಯಾಗಿದೆ. ಕಾರ್ಯವಿಧಾನದ ಔಪಚಾರಿಕತೆಗೆ ಮಾತ್ರವೇ ಸೀಮಿತವಾಗಿಲ್ಲ.
- ಸಂವಿಧಾನದ 22ನೇ ವಿಧಿಯ ಅಡಿಯಲ್ಲಿ ಸಾಂವಿಧಾನಿಕ ರಕ್ಷಣೆಯು ವಿದೇಶಿ ಪ್ರಜೆಗಳೂ ಸೇರಿದಂತೆ ಭಾರತದ ಪ್ರದೇಶದೊಳಗಿನ ಎಲ್ಲಾ ವ್ಯಕ್ತಿಗಳಿಗೂ ವಿಸ್ತರಿಸುತ್ತದೆ. ಏಕೆಂದರೆ, ಅದು ನಾಗರಿಕ ಕೇಂದ್ರಿತವಲ್ಲ ಬದಲಿಗೆ ವ್ಯಕ್ತಿ ಕೇಂದ್ರಿತವಾಗಿದೆ.
- ಬಂಧನದ ಕಾರಣಗಳನ್ನು ಇಂತಹುದೇ ಭಾಷೆಯಲ್ಲಿ ಹೀಗೇ ಎಂದು ಸಂವಹನ ಮಾಡುವ ಕಠಿಣ ರೂಪವನ್ನು ಕಾನೂನು ಪ್ರತಿಪಾದಿಸುವುದಿಲ್ಲ. ಆದರೆ, ಸಂಬಂಧಿತ ಕಾನೂನಿನ ಗಣನೀಯ ಅನುಸರಣೆಯಾಗಿದ್ದು, ಬಂಧಿತ ವ್ಯಕ್ತಿಗೆ ಬಂಧನದ ಆಧಾರದ ಬಗ್ಗೆ ತಿಳಿಸಿದರೆ ಸಾಕು.
- ನ್ಯಾಯಾಂಗ ಪರಿಶೀಲನೆ, ಬಂಧನದ ಕಾರಣಗಳನ್ನು ತಿಳಿಸಲಾಗಿದೆಯೇ ಎಂಬುದಕ್ಕೆ ಮಾತ್ರವೇ ಸೀಮಿತವಾಗಿರುತ್ತದೆಯೇ ಹೊರತು ಬಂಧನದ ಕಾರಣಗಳ ಸಮರ್ಪಕತೆ ಎಷ್ಟರಮಟ್ಟಿಗೆ ಸೂಕ್ತವಾಗಿದೆ ಎಂಬುದರ ಪರಿಶೀಲನೆಗೆ ಹೋಗುವುದಿಲ್ಲ.

ಎಸ್‌ಒಪಿ ಅನುಸಾರ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸ್ಕ್ರೀನಿಂಗ್ ಸಮಿತಿ ರಚಿಸಬೇಕು. ತೀರ್ಪಿನ ಪ್ರತಿ ಸ್ವೀಕರಿಸಿದ ದಿನದಿಂದ ನಾಲ್ಕು ತಿಂಗಳ ಒಳಗೆ ನ್ಯಾಯಾಲಯಕ್ಕೆ ಈ ಕುರಿತ ಅನುಪಾಲನಾ ವರದಿ ಸಲ್ಲಿಸಬೇಕು.

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

'ಎಸ್‌ಒಪಿ: ದೇಶದ ಮೊದಲ ತೀರ್ಪು'

ತೀರ್ಪು ಪ್ರಕಟವಾದ ವೇಳೆ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್ ಅವರು, ವಿದೇಶಿ ಪ್ರಜೆಗಳ ಅಕ್ರಮ ವಾಸಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳಿಗೆ (ಎಸ್‌ಒಪಿ) ಅನುಗುಣವಾಗಿ ಪ್ರಕಟವಾಗಿರುವ ಈ ತೀರ್ಪು ದೇಶದಲ್ಲೇ ಮೊದಲ ತೀರ್ಪಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಇದಕ್ಕೆ ನ್ಯಾ.ನಾಗಪ್ರಸನ್ನ ಅವರು, 'ದುರುದ್ದೇಶ ಹೊಂದಿದವರು ಒಂದಿಲ್ಲೊಂದು ಅಪರಾಧ ಪ್ರಕರಣಗಳಲ್ಲಿ ಉದ್ದೇಶಪೂರ್ವಕವಾಗಿಯೇ ಸಿಲುಕಿಕೊಳ್ಳುತ್ತಾರೆ. ತದನಂತರ ಪ್ರಕರಣದ ವಿಚಾರಣೆ ಬಾಕಿ ಇದೆ ಎಂಬ ನೆಪದಲ್ಲಿ ಅವಧಿ ಮೀರಿ ಇಲ್ಲಿಯೇ ಉಳಿದುಕೊಳ್ಳಲು ಯತ್ನಿಸುತ್ತಾರೆ. ಈ ನಿಟ್ಟಿನಲ್ಲಿ ಎಸ್‌ಒಪಿ ಸೂಕ್ತವಾಗಿದೆ' ಎಂದು ಪ್ರತಿಕ್ರಿಯಿಸಿದರು.

ವಾರ್ಡ್: ಬದಲಾಗದ ಮಹಿಳಾ ಮೀಸಲಾತಿ

ಅಂತಿಮ ಅಧಿಸೂಚನೆಯಲ್ಲೂ ಶೇ 50ರಷ್ಟು ಮೀಸಲು ಇಲ್ಲ
• ಕರಡು ಅಧಿಸೂಚನೆಯಂತೆ ಉಳಿದ ಮೀಸಲಾತಿ

• ಆರ್. ಮಂಜುನಾಥ್



ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಇಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ವಾರ್ಡ್‌ಗಳಿಗೆ ಮೀಸಲಾತಿಯನ್ನು ಅಂತಿಮಗೊಳಿಸಿ ಶನಿವಾರ ತಡರಾತ್ರಿ ಅಧಿಸೂಚನೆ ಹೊರಡಿಸಲಾಗಿದೆ. ಆದರೆ, ಮಹಿಳಾ ಮೀಸಲಾತಿಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯಂತೆ (ಜಿಬಿಜಿಎ) ಶೇ 50ರಷ್ಟನ್ನು ಪಾಲಿಸಿಲ್ಲ.

ಐದು ನಗರ ಪಾಲಿಕೆಗಳ ಚುನಾವಣೆಯನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡದೆ ಸುಪ್ರೀಂ ಕೋರ್ಟ್ ಸೂಚನೆಯಂತೆ ಜೂನ್ ಅಂತ್ಯದೊಳಗೆ ನಡೆಸಲಾಗುತ್ತದೆ ಎಂದು ರಾಜ್ಯ ಸರ್ಕಾರ ಹೇಳುತ್ತಲೇ ಇದೆ. ಆದರೆ, ವಾರ್ಡ್ ಮೀಸಲಾತಿಯಲ್ಲಿ ಮೇಲ್ನೋಟಕ್ಕೆ ತಪ್ಪಾಗಿರುವುದು ಕರಡು ಅಧಿಸೂಚನೆಯಲ್ಲೇ ಕಂಡು ಬಂದಿತ್ತು. ಅದರಲ್ಲಿ ಯಾವುದೇ ಬದಲಾವಣೆ ಮಾಡದೆ ಅಂತಿಮ ಅಧಿಸೂಚನೆ ಪ್ರಕಟಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಐದು ನಗರ ಪಾಲಿಕೆಗಳ ಒಟ್ಟು ವಾರ್ಡ್‌ಗಳ ಸಂಖ್ಯೆ 369. ಇದರಲ್ಲಿ ಶೇ 50ರಷ್ಟು ಎಂದರೆ, 184.5. ಅರ್ಧ ವಾರ್ಡ್ ಅನ್ನು ನೀಡಲು ಸಾಧ್ಯವಿಲ್ಲ. ಆದರೆ, 184 ವಾರ್ಡ್‌ಗಳನ್ನು ಮಹಿಳೆಯರಿಗೆ ಮೀಸಲಿಡಬಹುದಾಗಿತ್ತು. 176 ವಾರ್ಡ್‌ಗಳನ್ನು ಮಾತ್ರ ಮಹಿಳೆಯರಿಗೆ ಮೀಸಲಿಟ್ಟು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ವಾರ್ಡ್‌ವಾರು ಮೀಸಲಾತಿಯ ಕರಡು ಹಾಗೂ ಅಂತಿಮ ಅಧಿಸೂಚನೆಯಲ್ಲಿ ಮಹಿಳೆಯರಿಗೆ ಅದೇ ಸಂಖ್ಯೆ ವಾರ್ಡ್‌ಗಳು ಮೀಸಲಾಗಿವೆ.

ಮಹಿಳೆಯರ ಮೀಸಲಾತಿಯಷ್ಟೇ ಅಲ್ಲ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಎ ಹಾಗೂ ಬಿ, ಸಾಮಾನ್ಯ ವರ್ಗದ ವಾರ್ಡ್‌ಗಳ ಮೀಸಲಾತಿಯ ಕರಡು ಹಾಗೂ ಅಂತಿಮ ಅಧಿಸೂಚನೆಗೂ ಯಾವುದೇ ವ್ಯತ್ಯಾಸವಿಲ್ಲ.

ಮಹಿಳಾ ಮೀಸಲಾತಿ ನೀಡುವಾಗ ಐದು ನಗರ ಪಾಲಿಕೆಗಳಿಗೆ ಒಟ್ಟಾರೆ ಶೇ 50ರಷ್ಟು ಲೆಕ್ಕಾಚಾರ ಮಾಡಲು ಸಾಧ್ಯವಿಲ್ಲ ಎಂಬ ವಾದವನ್ನು ಒಪ್ಪಬಹುದಾದರೂ, ಆಯಾ ನಗರ ಪಾಲಿಕೆಗಳಲ್ಲೂ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಸಿಕ್ಕಿಲ್ಲ ಎಂದು ಅಂಕಿ–ಅಂಶಗಳೇ ಹೇಳುತ್ತವೆ. ಕೇಂದ್ರ ನಗರ ಪಾಲಿಕೆಯಲ್ಲಿ ಮೂರು ಹಾಗೂ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ನಗರ ಪಾಲಿಕೆಗಳಲ್ಲಿ ತಲಾ ಎರಡು ವಾರ್ಡ್‌ಗಳಲ್ಲಿ ಮಹಿಳಾ ಮೀಸಲಾತಿ ಕಡಿಮೆಯಾಗಿದೆ. ಇದಲ್ಲದೆ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಬೇಕಾದ ವಾರ್ಡ್‌ಗಳ ಸಂಖ್ಯೆ ಕಡಿಮೆಯಾಗಿದೆ. ಹಿಂದುಳಿದ ವರ್ಗದಲ್ಲೂ ಅವರಿಗೆ ನಿಗದಿಯಾಗಿರುವ ಪ್ರಮಾಣದಲ್ಲಿ ಕಡಿಮೆಯಾಗಿದೆ ಎನ್ನಲಾಗಿದೆ.

'ಕರಡು ವಾರ್ಡ್ ಮೀಸಲಾತಿಯಲ್ಲಿ ಸಾಕಷ್ಟು ಸಮಸ್ಯೆ ಇದೆ ಎಂದು ನಾವೆಲ್ಲ ಹೇಳಿದ್ದೆವು. 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಗೆ (ಜಿಬಿಜಿಎ) ವಿರುದ್ಧ ವಾಗಿಯೇ ಮೀಸಲಾತಿ ಕರಡು ಹೊರಬಂದಿದೆ. ಇದು ಚುನಾವಣೆಗೆ ಅಡ್ಡಿಯಾಗಬಹುದು' ಎಂಬ ಆಂತಕವನ್ನೂ ವ್ಯಕ್ತಪಡಿಸಿದ್ದೆವು. ಮಹಿಳಾ ಮೀಸಲಾತಿ ಸೇರಿದಂತೆ ಹಲವು ರೀತಿಯ ಸಮಸ್ಯೆಗಳು ಇರುವುದನ್ನು ನಮ್ಮ ನಾಯಕರ ಗಮನಕ್ಕೆ ತಂದಿದ್ದೆವು. ಆದರೆ, ಅದ್ಯಾವುದನ್ನೂ ಪರಿಗಣಿಸದೆ, ಕರಡು ಅಧಿಸೂಚನೆಯಂತೆಯೇ ಅಂತಿಮ ಅಧಿಸೂಚನೆಯನ್ನೂ ಹೊರಡಿಸಲಾಗಿದೆ. ನ್ಯಾಯಾಲಯಕ್ಕೆ ಹೋದರೆ, ಚುನಾವಣೆಗೂ ತಡೆ ಸಿಗಬಹುದು. ಇದನ್ನೇ ನಮ್ಮ ನಾಯಕರು, ಶಾಸಕರು ಬಯಸುತ್ತಿದ್ದಾರೆ' ಎಂದೂ ಕಾಂಗ್ರೆಸ್, ಬಿಜೆಪಿಯ ಸ್ಥಳೀಯ ಮುಖಂಡರು ಹೇಳಿದರು.

'2026ರ ಏಪ್ರಿಲ್‌ನಲ್ಲಿ ದೇಶದಲ್ಲಿ ಜನಗಣತಿ ಆರಂಭವಾಗುತ್ತಿರುವುದರಿಂದ, ನಗರ ಪಾಲಿಕೆ ಚುನಾವಣೆ ಪ್ರಕ್ರಿಯೆಗೆ ತೊಡಕಾಗಲಿದೆ. ನಗರ ಪಾಲಿಕೆ ಚುನಾವಣೆಯ ಸಿದ್ಧತೆಯಲ್ಲಿ ರುವವರೇ ಏಪ್ರಿಲ್‌ನಿಂದ ಒಂದೂವರೆ ತಿಂಗಳು ಜನಗಣತಿ ಕಾರ್ಯಕ್ಕೆ ನಿಯೋಜನೆ ಆಗುವುದರಿಂದ ಮತದಾರರ ಪಟ್ಟಿ ಹಾಗೂ ಇತರೆ ಕಾರ್ಯಗಳು ಸ್ಥಗಿತವಾಗಲಿವೆ. ಇನ್ನು 2011ರ ಜನಗಣತಿಯಂತೆ ನಗರ ಪಾಲಿಕೆ ಚುನಾವಣೆಯನ್ನು ನಡೆಸಲಾಗುತ್ತಿದ್ದು, ಇನ್ನು ಆರು ತಿಂಗಳು ಕಳೆದರೆ ಹೊಸ ಜನಗಣತಿಯ ಅಂಕಿ-ಅಂಶಗಳೇ ಬರುತ್ತವೆ. ಅದರಂತೆ ಚುನಾವಣೆ ಮಾಡಿದರೆ ಮೀಸಲಾತಿಯಲ್ಲಿ ನ್ಯಾಯ ಸಿಗುತ್ತದೆ. ಇದನ್ನು ನ್ಯಾಯಾಲಯದಲ್ಲೂ ಪ್ರಶ್ನಿಸಬಹುದಾಗಿದೆ. ಹೀಗಾಗಿ, ನಗರ ಪಾಲಿಕೆಗಳ ಚುನಾವಣೆ ನಮಗೆಲ್ಲ ಇನ್ನೂ ಕನಸೇ' ಎಂಬುದು ಕಾರ್ಪೊರೇಟರ್‌ಗಳಾಗುವ ಆಕಾಂಕ್ಷೆ ಹೊಂದಿರುವ ಪ್ರಮುಖ ಮೂರೂ ಪಕ್ಷಗಳ ಮುಖಂಡರ ಮಾತು.

ವಾರ್ಡ್ ಮೀಸಲಾತಿ ಪಾಲಿಕೆವಾರು

ನಗರ ಪಾಲಿಕೆ	ಒಟ್ಟು ವಾರ್ಡ್	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಹಿಂದುಳಿದ ವರ್ಗ ಎ	ಹಿಂದುಳಿದ ವರ್ಗ ಬಿ	ಸಾಮಾನ್ಯ	ಮಹಿಳೆ ಒಟ್ಟು
ಉತ್ತರ	72	9(4)	2(1)	19(9)	5(2)	37(18)	34
ದಕ್ಷಿಣ	72	7(3)	1(-)	19(9)	5(2)	40(20)	34
ಪೂರ್ವ	50	7(3)	1(-)	14(7)	3(1)	25(12)	23
ಪಶ್ಚಿಮ	112	9(4)	2(1)	30(15)	7(3)	64(32)	55
ಕೇಂದ್ರ	63	11(5)	1(-)	15(7)	4(2)	32(16)	30

*ಆವರಣದಲ್ಲಿರುವುದು ಮಹಿಳೆಯರಿಗೆ ಮೀಸಲಿರುವ ವಾರ್ಡ್ ಸಂಖ್ಯೆ

369 ಐದು ನಗರ ಪಾಲಿಕೆಗಳ ಒಟ್ಟು ವಾರ್ಡ್‌ಗಳು

184 ಮಹಿಳೆಯರಿಗೆ ಮೀಸಲಿಡಬೇಕಾದ ವಾರ್ಡ್‌ಗಳು

176 ಮಹಿಳೆಯರಿಗೆ ಮೀಸಲಾಗಿರುವ ವಾರ್ಡ್‌ಗಳು

ಅಂತಿಮವಾಗದ ಮತದಾರರ ಪಟ್ಟಿ

ಐದು ನಗರ ಪಾಲಿಕೆಗಳ ಮತದಾರರ ಪಟ್ಟಿ ಅಂತಿಮವಾಗಿ ಪ್ರಕಟವಾದ ನಂತರದ ಒಂದೂವರೆ ತಿಂಗಳಲ್ಲಿ ಚುನಾವಣೆ ಪ್ರಕ್ರಿಯೆ ಮುಗಿಸಲಾಗುತ್ತದೆ ಎಂದು ರಾಜ್ಯ ಚುನಾವಣಾ ಆಯೋಗದ ಅಧಿಕಾರಿ ಹೇಳುತ್ತಿದ್ದಾರೆ. 2026ರ ಜನವರಿಯಲ್ಲಿ ಮತದಾರರ ಅಂತಿಮ ಪಟ್ಟಿ ಪ್ರಕಟವಾಗಬೇಕಿತ್ತು. ಆದರೆ, ಮತದಾರರ ಕರಡು ಪಟ್ಟಿಯನ್ನು ಜನವರಿ 19ರಂದು ಪ್ರಕಟಿಸಲಾಗಿದೆ. ಇದರಲ್ಲೂ ಸಾಕಷ್ಟು ಸಮಸ್ಯೆಗಳಾಗಿದ್ದು, ಮತದಾರರ ಪರಿಷ್ಕೃತ ಕರಡು ಪಟ್ಟಿಯನ್ನು ಮಾರ್ಚ್ 9ರಂದು ಪ್ರಕಟಿಸಲಿದೆ. ನಂತರ, ಆಕ್ಷೇಪಗಳನ್ನೆಲ್ಲ ಪರಿಶೀಲಿಸಿ, ಏಪ್ರಿಲ್ 6ರಂದು ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸುವುದಾಗಿ ಹೇಳಿದೆ.

ಮಹಿಳೆಯರಿಗೆ ಅನ್ಯಾಯ: ಪದ್ಮನಾಭರೆಡ್ಡಿ

- ವಿಶ್ವ ಮಹಿಳಾ ದಿನಾಚರಣೆಯ ಹಿಂದಿನ ದಿನ ಐದು ನಗರ ಪಾಲಿಕೆಗಳ ವಾರ್ಡ್ ಮೀಸಲಾತಿ ಪ್ರಕಟಿಸಿರುವ ರಾಜ್ಯ ಸರ್ಕಾರ, ಮಹಿಳೆಯರ ರಾಜಕೀಯ ಹಕ್ಕನ್ನು ಕಸಿದುಕೊಂಡಿದೆ. ಕಾಯ್ದೆ ಪ್ರಕಾರ ಸಿಗಬೇಕಾದ ಎಂಟು ಸ್ಥಾನಗಳನ್ನು ಮಹಿಳೆಯರಿಂದ ಕಸಿದುಕೊಂಡು ಅನ್ಯಾಯ ಮಾಡಿದೆ. ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ ಆಶಯದಂತೆ ಮಹಿಳೆಯರಿಗೆ ಶೇ 50ರಷ್ಟು ಅಧಿಕಾರ ನೀಡುತ್ತೇವೆ ಎನ್ನುವ ಕಾಂಗ್ರೆಸ್ ಸರ್ಕಾರ, ಐದು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಹಿಳೆಯರಿಗೆ ವಂಚನೆ ಮಾಡಿದೆ' ಎಂದು ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ, ಬಿಜೆಪಿಯ ಪದ್ಮನಾಭರೆಡ್ಡಿ ದೂರಿದರು.
- 'ಜಿಬಿಜಿಎಯ ಪ್ರಕರಣ 29ರ ಅಂಶ ನಾಲ್ಕರ ಪ್ರಕಾರ, ಎಲ್ಲ ವರ್ಗಗಳಲ್ಲೂ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಕಲ್ಪಿಸಿ, ನಗರ ಪಾಲಿಕೆಗಳಿಗೆ ನೇರವಾಗಿ ಆಯ್ಕೆಯಾಗಬೇಕು' ಎಂದು ಹೇಳಲಾಗಿದೆ. ಆದರೆ, ಅದನ್ನು ಮೀರಿ ಮೀಸಲಾತಿ ಕರಡು ಹೊರಡಿಸಲಾಗಿತ್ತು, ಅದನ್ನೇ ಅಂತಿಮ ಅಧಿಸೂಚನೆಯಲ್ಲೂ ಪ್ರಕಟಿಸಲಾಗಿದೆ. 'ಬಿಬಿಎಂಪಿಯ 198 ವಾರ್ಡ್‌ಗಳಲ್ಲಿ 99 ವಾರ್ಡ್‌ಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಇತ್ತು. ಅಲ್ಲದೆ, ಸಾಮಾನ್ಯ ವಾರ್ಡ್‌ಗಳಲ್ಲೂ ಮಹಿಳೆಯರು ಗೆಲುವು ಸಾಧಿಸಿದ್ದರು' ಎಂದು ತಿಳಿಸಿದರು.
- ಹೈಕೋರ್ಟ್ ಸೂಚನೆಯನ್ನೂ ಪಾಲಿಸದೆ, ವಾರ್ಡ್‌ನಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದ್ದರೆ ಅಲ್ಲಿ ಮೀಸಲಾತಿ ನೀಡಬೇಕೆಂಬ ಉದ್ದೇಶವನ್ನೂ ಗಾಳಿಗೆ ತೂರಲಾಗಿದೆ. ನಗರ ಪಾಲಿಕೆಗಳ ಚುನಾವಣೆ ನಡೆಸಲು ಸರ್ಕಾರಕ್ಕೆ ಇಚ್ಛೆ ಇಲ್ಲ. ಹೀಗಾಗಿ, ನ್ಯಾಯಾಲಯದಲ್ಲಿ ತಡೆಯಾಗಲಿ ಎಂದೇ ಇಂತಹ ತಪ್ಪುಗಳನ್ನು ಉದ್ದೇಶಪೂರ್ವಕವಾಗಿದೆ ಮಾಡುತ್ತಿದೆ ಎಂದರು.

ಬೆಂಗಳೂರು ಉತ್ತರ ನಗರ ಪಾಲಿಕೆ

ವಾರ್ಡ್ ಸಂಖ್ಯೆ	ವಾರ್ಡ್ ಹೆಸರು	ಮೀಸಲಾತಿ
	ಯಲಹಂಕ ವಿಧಾನಸಭಾ ಕ್ಷೇತ್ರ	
1	ರಾಜಾ ಕೆಂಪೇಗೌಡ ವಾರ್ಡ್	ಹಿಂದುಳಿದ ವರ್ಗ ಬಿ
2	ಏರೋ ಸಿಟಿ ವಾರ್ಡ್	ಹಿಂದುಳಿದ ವರ್ಗ ಬಿ (ಮಹಿಳೆ)
3	ಚೌಡೇಶ್ವರಿ ವಾರ್ಡ್	ಹಿಂದುಳಿದ ವರ್ಗ ಎ (ಮಹಿಳೆ)
4	ನ್ಯಾಯಾಂಗ ಬಡಾವಣೆ	ಪರಿಶಿಷ್ಟ ಜಾತಿ
5	ಯಲಹಂಕ ಸ್ಯಾಟಲೈಟ್ ಟೌನ್	ಸಾಮಾನ್ಯ
6	ದೊಡ್ಡಬೆಟ್ಟಹಳ್ಳಿ	ಪರಿಶಿಷ್ಟ ಪಂಗಡ
7	ಅಟ್ಟೂರು	ಹಿಂದುಳಿದ ವರ್ಗ ಎ (ಮಹಿಳೆ)
	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ	
8	ಸಿಂಗಾಪುರ	ಸಾಮಾನ್ಯ (ಮಹಿಳೆ)
9	ಕುವೆಂಪುನಗರ	ಪರಿಶಿಷ್ಟ ಜಾತಿ
10	ವಿದ್ಯಾರಣ್ಯಪುರ	ಸಾಮಾನ್ಯ (ಮಹಿಳೆ)
11	ದೊಡ್ಡಬೊಮ್ಮಸಂದ್ರ	ಸಾಮಾನ್ಯ (ಮಹಿಳೆ)
12	ತಿಂಡ್ಲು	ಹಿಂದುಳಿದ ವರ್ಗ ಬಿ
13	ಕೊಡಿಗೆಹಳ್ಳಿ	ಸಾಮಾನ್ಯ
14	ರಾಜೀವ್ ಗಾಂಧಿ ನಗರ	ಸಾಮಾನ್ಯ
15	ಬ್ಯಾಟರಾಯನಪುರ	ಹಿಂದುಳಿದ ವರ್ಗ ಎ
16	ಅಮೃತಹಳ್ಳಿ	ಹಿಂದುಳಿದ ವರ್ಗ ಎ
17	ಜಕ್ಕೂರು	ಸಾಮಾನ್ಯ (ಮಹಿಳೆ)
18	ಕೆಂಪಾಪುರ	ಸಾಮಾನ್ಯ (ಮಹಿಳೆ)
19	ಥಣಿಸಂದ್ರ	ಹಿಂದುಳಿದ ವರ್ಗ ಎ
	ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ	
20	ಸಂಪಿಗೆಹಳ್ಳಿ	ಸಾಮಾನ್ಯ
21	ಕೋಗಿಲು	ಹಿಂದುಳಿದ ವರ್ಗ ಎ (ಮಹಿಳೆ)
22	ನಾಗವಾರ	ಸಾಮಾನ್ಯ
23	ಹೆಣ್ಣೂರು	ಸಾಮಾನ್ಯ
24	ಎಚ್.ಬಿ.ಆರ್ ಲೇಔಟ್	ಹಿಂದುಳಿದ ವರ್ಗ ಎ
25	ಗೋವಿಂದಪುರ	ಸಾಮಾನ್ಯ
26	ಸಮಾಧಾನ ನಗರ	ಸಾಮಾನ್ಯ (ಮಹಿಳೆ)
27	ಕೆ.ಜಿ.ಹಳ್ಳಿ	ಸಾಮಾನ್ಯ (ಮಹಿಳೆ)
28	ವೆಂಕಟೇಶಪುರಂ	ಸಾಮಾನ್ಯ
29	ಲಿಂಗರಾಜಪುರ	ಹಿಂದುಳಿದ ವರ್ಗ ಬಿ
30	ಕಾಚರಕನಹಳ್ಳಿ	ಸಾಮಾನ್ಯ (ಮಹಿಳೆ)
31	ಕಲ್ಯಾಣ ನಗರ	ಸಾಮಾನ್ಯ (ಮಹಿಳೆ)
32	ಬಾಣಸವಾಡಿ	ಹಿಂದುಳಿದ ವರ್ಗ ಎ
33	ಎಚ್‌ಆರ್‌ಬಿಆರ್ ಲೇಔಟ್	ಹಿಂದುಳಿದ ವರ್ಗ ಬಿ (ಮಹಿಳೆ)
34	ಸುಬ್ಬಯ್ಯನಪಾಳ್ಯ	ಸಾಮಾನ್ಯ (ಮಹಿಳೆ)
35	ಕಮ್ಮನಹಳ್ಳಿ	ಪರಿಶಿಷ್ಟ ಜಾತಿ (ಮಹಿಳೆ)
36	ಮಾರುತಿ ಸೇವಾ ನಗರ	ಸಾಮಾನ್ಯ
37	ಜೀವನಹಳ್ಳಿ	ಪರಿಶಿಷ್ಟ ಜಾತಿ (ಮಹಿಳೆ)
	ಪುಲಕೇಶಿನಗರ ವಿಧಾನಸಭಾ ಕ್ಷೇತ್ರ	
38	ಶಾಂಪುರ	ಸಾಮಾನ್ಯ (ಮಹಿಳೆ)
39	ಕಾವಲ್ ಬೈರಸಂದ್ರ	ಸಾಮಾನ್ಯ (ಮಹಿಳೆ)
40	ಶಕ್ತಿ ನಗರ	ಹಿಂದುಳಿದ ವರ್ಗ ಎ (ಮಹಿಳೆ)
41	ಪೆರಿಯಾರ್ ನಗರ	ಹಿಂದುಳಿದ ವರ್ಗ ಎ (ಮಹಿಳೆ)
42	ಅರುಣಾ ಆಸಿಫ್ ಅಲಿ ವಾರ್ಡ್	ಪರಿಶಿಷ್ಟ ಜಾತಿ (ಮಹಿಳೆ)
43	ವರಲಕ್ಷ್ಮಿ ನಗರ	ಸಾಮಾನ್ಯ (ಮಹಿಳೆ)
44	ದೊಡ್ಡಣ್ಣ ನಗರ	ಪರಿಶಿಷ್ಟ ಜಾತಿ
45	ಕುಶಾಲ್ ನಗರ	ಹಿಂದುಳಿದ ವರ್ಗ ಎ
46	ಸಗಾಯಪುರ	ಪರಿಶಿಷ್ಟ ಜಾತಿ
47	ಪುಲಕೇಶಿ ನಗರ	ಹಿಂದುಳಿದ ವರ್ಗ ಎ
48	ಎಸ್.ಕೆ.ಗಾರ್ಡನ್	ಹಿಂದುಳಿದ ವರ್ಗ ಎ
	ಹೆಬ್ಬಾಳ ವಿಧಾನಸಭಾ ಕ್ಷೇತ್ರ	
49	ಜಯಚಾಮರಾಜೇಂದ್ರ ನಗರ	ಸಾಮಾನ್ಯ
50	ದಿಣ್ಣೂರು	ಸಾಮಾನ್ಯ
51	ಮನೋರಾಯನಪಾಳ್ಯ	ಸಾಮಾನ್ಯ (ಮಹಿಳೆ)
52	ವಿಶ್ವನಾಥ ನಾಗೇನಹಳ್ಳಿ	ಸಾಮಾನ್ಯ
53	ಆರ್.ಟಿ ನಗರ	ಸಾಮಾನ್ಯ
54	ಗಂಗೇನಹಳ್ಳಿ	ಹಿಂದುಳಿದ ವರ್ಗ ಎ (ಮಹಿಳೆ)
55	ಗಂಗಾನಗರ	ಹಿಂದುಳಿದ ವರ್ಗ ಎ (ಮಹಿಳೆ)
56	ಹೆಬ್ಬಾಳ	ಪರಿಶಿಷ್ಟ ಜಾತಿ
57	ಭೂಪಸಂದ್ರ	ಸಾಮಾನ್ಯ (ಮಹಿಳೆ)
58	ನಾಗಶೆಟ್ಟಿಹಳ್ಳಿ	ಸಾಮಾನ್ಯ
59	ಗೆದ್ದಲಹಳ್ಳಿ	ಹಿಂದುಳಿದ ವರ್ಗ ಎ
	ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ	
60	ಜಾಲಹಳ್ಳಿ	ಪರಿಶಿಷ್ಟ ಪಂಗಡ (ಮಹಿಳೆ)
61	ಎಚ್.ಎಂ.ಟಿ ವಾರ್ಡ್	ಸಾಮಾನ್ಯ (ಮಹಿಳೆ)
62	ಬೃಂದಾವನ ನಗರ	ಸಾಮಾನ್ಯ
63	ಜೆಪಿ ಪಾರ್ಕ್	ಸಾಮಾನ್ಯ
64	ಯಶವಂತಪುರ	ಹಿಂದುಳಿದ ವರ್ಗ ಎ (ಮಹಿಳೆ)
	ದಾಸರಹಳ್ಳಿ ವಿಧಾನಸಭಾ ಕ್ಷೇತ್ರ	
65	ಅಬ್ಬಿಗೆರೆ	ಸಾಮಾನ್ಯ
66	ಕಮ್ಮಗೊಂಡನಹಳ್ಳಿ	ಸಾಮಾನ್ಯ
67	ಶೆಟ್ಟಿಹಳ್ಳಿ	ಪರಿಶಿಷ್ಟ ಜಾತಿ (ಮಹಿಳೆ)
68	ಮಲ್ಲಸಂದ್ರ	ಹಿಂದುಳಿದ ವರ್ಗ ಎ (ಮಹಿಳೆ)
69	ಬಾಗಲಗುಂಟೆ	ಸಾಮಾನ್ಯ
70	ಮಂಜುನಾಥ ನಗರ	ಸಾಮಾನ್ಯ (ಮಹಿಳೆ)
71	ನೆಲೆ ಮಹೇಶ್ವರಮ್ಮ ದೇವಸ್ಥಾನ ವಾರ್ಡ್	ಹಿಂದುಳಿದ ವರ್ಗ ಎ
72	ದಾಸರಹಳ್ಳಿ	ಸಾಮಾನ್ಯ (ಮಹಿಳೆ)

ಚಿತ್ರಾವಳಿ

ಸೂರ್ಯ ಕಲಾವಿದರು ವತಿಯಿಂದ ನಯನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸೂರ್ಯ ಕಲೋತ್ಸವದ ಎರಡನೇ ದಿನವಾದ ಶನಿವಾರ ನಡೆದ ಸಂಗೀತೋತ್ಸವದಲ್ಲಿ ಗೀತಾ ಹೆಬ್ಳೀಕರ್ ಅವರು ಹಿಂದೂಸ್ತಾನಿ ಗಾಯನ ಪ್ರಸ್ತುತಪಡಿಸಿದರು. ಆದರ್ಶ ಶೆಣಾಯ್, ಅಶ್ವಿನ್ ವರಾವಲ್ಕರ್ ಸಾಥ್ ನೀಡಿದರು

ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಸಿಸ್ಟರ್ಸ್ ಇನ್ ಸ್ವೆಟ್‌ನಿಂದ ಒರಾಯನ್ ಮಾಲ್‌ನಲ್ಲಿ ಭಾನುವಾರ ಆಯೋಜಿಸಿದ್ದ 'ಸಿಸ್ತಾ ರನ್'ನಲ್ಲಿ ಮಹಿಳೆಯರು ಪಾಲ್ಗೊಂಡಿದ್ದರು

ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾ ಸಂಸ್ಥೆಯಿಂದ ನಗರದ ರಾಮ ಮಂದಿರ ಮೈದಾನದಲ್ಲಿ ಭಾನುವಾರ ಹೋಳಿ ರಂಗ ಪಂಚಮಿ ಕಾರ್ಯಕ್ರಮ ಆಚರಿಸಲಾಯಿತು. ಕಾಮದಹನ ಮಾಡಿ ಬಣ್ಣದೋಕುಳಿ ಆಡುವ ಮೂಲಕ ಮಹಿಳೆಯರು, ಮಕ್ಕಳು ಸಂಭ್ರಮಿಸಿದರು

ರೇಣುಕಸ್ವಾಮಿ ಕೊಲೆ ಪ್ರಕರಣ: ಹೈಕೋರ್ಟ್ ಅಭಿಮತ
'ಜಾಮೀನು ಕೊಡಬಾರದು ಎಂದೇನಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಲೆ ಪ್ರಕರಣಗಳಲ್ಲಿ ಭಾಗಿಯಾದ ಮಾತ್ರಕ್ಕೆ ಆರೋಪಿಗಳಿಗೆ ಜಾಮೀನು ನೀಡಬಾರದು ಎಂದೇನಿಲ್ಲ. ಕೋರ್ಟ್ ಮೆಟ್ಟಿಲೇರಿದ ಎಲ್ಲಾ ಕೊಲೆ ಪ್ರಕರಣಗಳನ್ನು ಒಂದೇ ರೀತಿ ತುಲನೆ ಮಾಡಿ ನೋಡಲಾಗದು' ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳಿಗೆ ವಿಚಾರಣಾ ನ್ಯಾಯಾಲಯ ಮಂಜೂರು ಮಾಡಿರುವ ಜಾಮೀನು ರದ್ದುಪಡಿಸುವಂತೆ ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಜಾಮೀನು ರದ್ದಪಡಿಸುವ ವಿಚಾರ ಮೂಲಭೂತ ಹಕ್ಕಿಗೆ ಸಂಬಂಧಪಟ್ಟಿರುತ್ತದೆ' ಎಂದು ಸ್ಪಷ್ಟಪಡಿಸಿದೆ.

'ಯಾರೋ ಒಬ್ಬರನ್ನು ಗುರಿಯಾಗಿಸಿಕೊಂಡು ಜಾಮೀನು ರದ್ದುಪಡಿಸಿದರೆ ಹೇಗೆ? ಜಾಮೀನು ಅರ್ಜಿಗಳ ಕುರಿತು ವಿವೇಚನೆ ಬಳಸಿ ತೀರ್ಮಾನ ಕೈಗೊಳ್ಳುವ ಅಧಿಕಾರ ಹೈಕೋರ್ಟ್‌ಗೆ ಇರುತ್ತದೆ. ಅಂದಮಾತ್ರಕ್ಕೆ ಈ ಪ್ರಕರಣದಲ್ಲಿ ಆರೋಪಿಗಳಿಗೆ ಜಾಮೀನು ಮಂಜೂರಾತಿ ಆದೇಶವನ್ನು ಎತ್ತಿ ಹಿಡಿಯಲಾಗುತ್ತದೆ ಎಂದರ್ಥವಲ್ಲ. ವಿಶೇಷವಾಗಿ ಈ ಪ್ರಕರಣ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಚರ್ಚೆಯಾಗುತ್ತಿದ್ದು, ನ್ಯಾಯಾಲಯ ಅದರ ಪ್ರಭಾವಕ್ಕೆ ಒಳಗಾಗಬೇಕಿಲ್ಲ' ಎಂದು ಹೇಳಿತು.

ಆಕ್ಷೇಪಣೆಗೆ ನಿರ್ದೇಶನ: ಪ್ರಕರಣದ ಆರೋಪಿಗಳಾದ ಪುಟ್ಟಸ್ವಾಮಿ ಅಲಿಯಾಸ್ ಪವನ್, ಧನರಾಜ್, ನಂದೀಶ್ ಮತ್ತು ವಿ.ವಿನಯ್ ಅವರಿಗೆ ಜಾಮೀನು ಮಂಜೂರು ಮಾಡಿ ನಗರದ 56ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ 2024ರ ಡಿಸೆಂಬರ್ 23ರಂದು ಆದೇಶಿತ್ತು. ಈ ಆದೇಶವನ್ನು ಪ್ರಶ್ನಿಸಿ ಪ್ರಾಸಿಕ್ಯೂಷನ್ ಹೈಕೋರ್ಟ್ ಮೆಟ್ಟಿಲೇರಿದೆ.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಪ್ರಕರಣ ಅತ್ಯಂತ ಹೀನಾಯವಾಗಿದೆ. ಕೊಲೆ ನಡೆದ ಸ್ಥಳದಲ್ಲಿ ಸಂಗ್ರಹಿಸಿದ ಸಾಕ್ಷ್ಯಗಳ ಎಫ್‌ಎಸ್‌ಎಲ್ ಮತ್ತು ರಕ್ತದ ಡಿಎನ್‌ಎ, ಸಿಡಿಆರ್ ಸಂಗ್ರಹ ದಿಂದ ಆರೋಪಿಗಳ ಪಾತ್ರ ದೃಢವಾಗಿದೆ. ಅಂತೆಯೇ, ಪ್ರಮುಖ ಆರೋಪಿಗಳಾದ ನಟ ದರ್ಶನ್ ಮತ್ತು ಪವಿತ್ರಾ ಗೌಡ ಸೇರಿದಂತೆ ಏಳು ಆರೋಪಿಗಳಿಗೆ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದ್ದು ಅವರೆಲ್ಲಾ ಮರಳಿ ಜೈಲು ಸೇರಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಈ ಪ್ರಕರಣ ಬೇರೆ ಕೊಲೆ ಪ್ರಕರಣದಂತಲ್ಲ. ಆರೋಪಿಗಳು ಸಾಕಷ್ಟು ಪ್ರಭಾವಿಗಳಾಗಿದ್ದಾರೆ. ಒಂದು ವೇಳೆ ಈ ಆರೋಪಿಗಳಿಗೂ ಜಾಮೀನು ದೊರೆತರೆ ಸಾಕ್ಷ್ಯ ನಾಶಪಡಿಸುವ ಆತಂಕವಿದೆ. ಆದ್ದರಿಂದ, ಸುಪ್ರೀಂ ಕೋರ್ಟ್ ತೀರ್ಪು ಗಮನದಲ್ಲಿ ಇರಿಸಿಕೊಂಡು ನ್ಯಾಯಪೀಠ ಈ ನಾಲ್ವರು ಆರೋಪಿಗಳಿಗೆ ಮಂಜೂರಾಗಿರುವ ಜಾಮೀನು ರದ್ದುಪಡಿಸಬೇಕು. ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಉಲ್ಲೇಖಿಸಿರುವ ಗಂಭೀರತೆಯನ್ನು ಅರಿತು ಯಾವುದೇ ವಿನಾಯಿತಿ ತೋರಬಾರದು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಸುಪ್ರೀಂ ಕೋರ್ಟ್ ಆದೇಶ ಇರುವುದೇನೊ ನಿಜ. ಆದರೆ, ಅರ್ಜಿದಾರರಿಗೆ ಜಾಮೀನು ರದ್ದುಪಡಿಸಬೇಕೆಂಬ ಪ್ರಾಸಿಕ್ಯೂಷನ್ ಮನವಿಯನ್ನು ಪರಿಶೀಲನೆ ಮಾಡಬೇಕಿದೆ. ಅಷ್ಟಕ್ಕೂ, ಅರ್ಜಿಗೆ ಸಂಬಂಧಿಸಿದಂತೆ ಆರೋಪಿಗಳ ಪರ ವಕೀಲರು ತಮ್ಮ ಆಕ್ಷೇಪಣೆ ಸಲ್ಲಿಸಲಿ' ಎಂದು ನಿರ್ದೇಶಿಸಿ ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ಅಭಿಮಾನಿಗಳ ಚದುರಿಸಲು ಲಾಠಿ ಪ್ರಹಾರ

ಬೆಂಗಳೂರು: ಮಹದೇವಪುರದ ಕಿಮ್ಸ್ ಆಸ್ಪತ್ರೆಯ ಸೂಪರ್ ಸ್ಪೆಷಾಲಿಟಿ ವಿಭಾಗದ ಉದ್ಘಾಟನೆಗೆ ಭಾನುವಾರ ಬಂದಿದ್ದ ಟಾಲಿವುಡ್ ನಟ ಜೂನಿಯರ್ ಎನ್‌ಟಿಆರ್ ಅವರನ್ನು ನೋಡಲು ಅಭಿಮಾನಿಗಳು ಮುಗಿಬಿದ್ದಿದ್ದರು. ಅವರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.

ಭಾರಿ ಸಂಖ್ಯೆಯಲ್ಲಿ ಅಭಿಮಾನಿಗಳು ಜಮಾಯಿಸಿದ್ದರಿಂದ ನೂಕುನುಗ್ಗಲು ಉಂಟಾಗಿತ್ತು. ಜೂನಿಯರ್ ಎನ್‌ಟಿಆರ್ ಅವರನ್ನು ಹತ್ತಿರದಿಂದ ನೋಡಬೇಕೆಂಬ ಆಸೆಯಿಂದ ಹಲವರು ಆಸ್ಪತ್ರೆಯ ಒಳಗೆ ನುಗ್ಗಿದ್ದರು. ಇದರಿಂದ ಆಸ್ಪತ್ರೆಯ ಎಸ್ಕಲೇಟರ್‌ಗೆ ಹಾನಿ ಆಗಿದೆ ಎಂದು ಪೊಲೀಸರು ಹೇಳಿದರು.

ಬಳಿಕ ಬಿಗಿ ಭದ್ರತೆ ನಡುವೆ ಜೂನಿಯರ್ ಎನ್‌ಟಿಆರ್ ಅವರನ್ನು ಪೊಲೀಸರು ಕರೆದೊಯ್ದರು.

'ನನ್ನ ಅಜ್ಜ ಈ ಆಸ್ಪತ್ರೆಗೆ ಶಿಲಾನ್ಯಾಸ ಮಾಡಿದ್ದರು. ಅಜ್ಜನ ಆಶೀರ್ವಾದ ಮತ್ತು ಅಭಿಮಾನಿಗಳ ಪ್ರೀತಿಯಿಂದ ಸೂಪರ್ ಸ್ಪೆಷಾಲಿಟಿ ವಿಭಾಗವನ್ನು ನಾನು ಉದ್ಘಾಟಿಸುತ್ತಿದ್ದೇನೆ' ಎಂದು ಜೂನಿಯರ್ ಎನ್‌ಟಿಆರ್ ಹೇಳಿದರು.

ಜೂನಿಯರ್ ಎನ್‌ಟಿಆರ್ ಅವರನ್ನು ನೋಡಲು ಮುಗಿಬಿದ್ದ ಅಭಿಮಾನಿಗಳು

'ಕ್ವಾಂಟಮ್ ರೋಡ್‌ಮ್ಯಾಪ್‌ಗೆ ₹10 ಕೋಟಿ: ದಿಟ್ಟ ಹೆಜ್ಜೆ'

ಬೆಂಗಳೂರು: 'ಕ್ವಾಂಟಮ್ ರೋಡ್‌ಮ್ಯಾಪ್‌ನ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ₹10 ಕೋಟಿ ಘೋಷಿಸಿರುವುದು, ಕರ್ನಾಟಕ ರಾಜ್ಯವನ್ನು ಕ್ವಾಂಟಮ್ ಕ್ಷೇತ್ರದ ಕೇಂದ್ರವಾಗಿ ಮಾಡುವ ಹಾದಿಯಲ್ಲಿ ಸರ್ಕಾರದ ದಿಟ್ಟ ಹೆಜ್ಜೆಯಾಗಿದೆ' ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ.

'ಬೆಂಗಳೂರು ಕ್ವಾಂಟಮ್ ಶೃಂಗಸಭೆಯಲ್ಲಿ ಕ್ವಾಂಟಮ್ ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗೆ ₹1 ಸಾವಿರ ಕೋಟಿ ಹೂಡಿಕೆ ಮಾಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಮೊದಲ ಹಂತದ ಅನುಷ್ಠಾನಕ್ಕೆ ಬಜೆಟ್‌ನಲ್ಲಿ ಅವರು ₹10 ಕೋಟಿ ನೀಡಿದ್ದಾರೆ. ಭವಿಷ್ಯದ ಈ ವಲಯವನ್ನು ಮುಂದಿನ ಐದು ವರ್ಷಗಳಲ್ಲಿ ಮುನ್ನಡೆಸಲು ಅಗತ್ಯವಿರುವ ಅತ್ಯುತ್ತಮ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವತ್ತ ಈ ರೋಡ್‌ಮ್ಯಾಪ್ ಗಮನ ಹರಿಸಲಿದೆ' ಎಂದಿದ್ದಾರೆ.

'ಬೆಂಗಳೂರು ನಗರವು ಈಗಾಗಲೇ ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಶೈಕ್ಷಣಿಕ ಸಂಸ್ಥೆಗಳು ಮತ್ತು ನವೋದ್ಯಮಗಳ ಬಲಿಷ್ಠ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಅಗತ್ಯ ಮೂಲಸೌಕರ್ಯ ಮತ್ತು ನೀತಿಯನ್ನು ರೂಪಿಸುವ ಮೂಲಕ 2035ರ ವೇಳೆಗೆ ಶೇ 20ರಷ್ಟು ಜಾಗತಿಕ ಮಾರುಕಟ್ಟೆ ಪಾಲನ್ನು ಸಾಧಿಸುವ ರಾಜ್ಯ ಸರ್ಕಾರದ ದೃಷ್ಟಿಕೋನಕ್ಕೆ ಈ ಬದ್ಧತೆಯು ಮತ್ತಷ್ಟು ಬಲ ತುಂಬಲಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಕ್ವಾಂಟಮ್ ಸಿಟಿ ನಿರ್ಮಾಣಕ್ಕಾಗಿ ಹೆಸರಘಟ್ಟದಲ್ಲಿ ಭೂಮಿಯನ್ನು ಸರ್ಕಾರ ಮಂಜೂರು ಮಾಡಿದೆ. ಐಐಎಸ್‌ಸಿಯಂತಹ ವಿಶ್ವದರ್ಜೆಯ ಸಂಸ್ಥೆಗಳು, ಸುಧಾರಿತ ಕ್ವಾಂಟಮ್ ಕಂಪ್ಯೂಟರ್‌ಗಳ ಲಭ್ಯತೆ ಮತ್ತು ನಮ್ಮ ರಾಜ್ಯದ ತಾಂತ್ರಿಕ ಮಾನವ ಸಂಪನ್ಮೂಲದಿಂದಾಗಿ, ಕರ್ನಾಟಕವು ಕ್ವಾಂಟಮ್ ತಂತ್ರಜ್ಞಾನದಲ್ಲಿ ಅಭೂತಪೂರ್ವ ಪ್ರಗತಿಗೆ ಸಾಕ್ಷಿಯಾಗಲಿದೆ' ಎಂದಿದ್ದಾರೆ.

ಬೈಕ್‌ಗೆ ಕಾರು ಡಿಕ್ಕಿ: ಮೂವರಿಗೆ ಗಾಯ

ಚಿಂತಾಮಣಿ: ಚಿಂತಾಮಣಿ–ಮದನಪಲ್ಲಿ ರಸ್ತೆಯ ಸೀಮನಹಳ್ಳಿ ಬಳಿ ಭಾನುವಾರ ಕಾರೊಂದು ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದು ಮೂವರು ಗಾಯಗೊಂಡಿದ್ದಾರೆ.

ಬೆಂಗಳೂರಿನ ಕೆ.ಆರ್.ಪುರದ ಬಾಬು ಚಾಲನೆ ಮಾಡುತ್ತಿದ್ದ ಕಾರು ಬೈಕ್‌ಗೆ ಡಿಕ್ಕಿ ಹೊಡೆದು ರಸ್ತೆ ಬದಿಗೆ ಮುಗುಚಿ ಬಿದ್ದಿದೆ. ಬೈಕ್ ಸವಾರ ನಾಗರಾಜು, ಹಿಂಬದಿ ಸವಾರ ಸೊಣ್ಣಶೆಟ್ಟಹಳ್ಳಿಯ ಚೆನ್ನಕೇಶವರೆಡ್ಡಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಬಾಬು ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಮಲೆನಾಡಿಗೊಂದು ಬೃಹತ್ ‘ವಿಜ್ಞಾನ ಕೇಂದ್ರ’

ಬೇಕಿದೆ ಸರ್ಕಾರದ ಹಸಿರು ನಿಶಾನೆ ವಿದ್ಯಾರ್ಥಿಗಳ ವಿಜ್ಞಾನ ಜ್ಞಾನ ದಾಹ ತೀರಿಸುವ ಕೇಂದ್ರ

• ಎಸ್.ರವಿಪ್ರಕಾಶ್

ಉದ್ದೇಶಿತ ವಿಜ್ಞಾನ ಕೇಂದ್ರದ ಮಾದರಿ ಚಿತ್ರ

ಬೆಂಗಳೂರು: ಮಲೆನಾಡು, ಕರಾವಳಿ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಆಸಕ್ತಿ ಮೂಡಿಸಿ, ಸಂಶೋಧನೆ ಮತ್ತಿತರ ಚಟುವಟಿಕೆಯತ್ತ ಸೆಳೆಯುವ ಉದ್ದೇಶದಿಂದ ಚಿಕ್ಕಮಗಳೂರು ಜಿಲ್ಲೆ ಶೃಂಗೇರಿಯಲ್ಲಿ ಬೃಹತ್ ವಿಜ್ಞಾನ ಕೇಂದ್ರವೊಂದು ಸ್ಥಾಪನೆಗೊಳ್ಳಲಿದೆ.

ಇಸ್ರೊದ ಬಾಹ್ಯಾಕಾಶ ವಿಜ್ಞಾನಿ ಹಾಗೂ ‘ಭಾರತೀಯ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ’ಯ ಕುಲಪತಿಯೂ ಆಗಿರುವ ಡಾ.ಬಿ.ಎನ್. ಸುರೇಶ್ ಮತ್ತು ಸಮಾನ ಮನಸ್ಕರ ಪ್ರಯತ್ನದಿಂದ ಮಲೆನಾಡು ಭಾಗದಲ್ಲಿ ‘ಶ್ರೀ ಶೃಂಗೇರಿ ವಿಜ್ಞಾನ ಕೇಂದ್ರ’ ಅಸ್ತಿತ್ವಕ್ಕೆ ಬರಲಿದೆ.

‘ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ವಿಜ್ಞಾನ ಶಿಕ್ಷಣ, ಸಂಶೋಧನೆ ಮತ್ತು ವೈಜ್ಞಾನಿಕ ಮನೋಭಾವ ಉತ್ತೇಜಿಸಲು ಈ ಕೇಂದ್ರ ಆರಂಭಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಮುಖ್ಯ ಕಾರಣ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಉಡುಪಿ ಮತ್ತು ಅಕ್ಕ ಪಕ್ಕದ ಜಿಲ್ಲೆಗಳಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಪ್ರಮುಖ ಸಂಸ್ಥೆಗಳಿಲ್ಲ. ಆದ ಕಾರಣ ಶೃಂಗೇರಿಯಲ್ಲಿ ಈ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ’ ಎಂದು ಬಿ.ಎನ್.ಸುರೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಶೃಂಗೇರಿಯಲ್ಲಿ ಶ್ರೀ ಶಾರದಾ ಪೀಠ ವತಿಯಿಂದ ನಡೆಯುತ್ತಿರುವ ಜೆಸಿಬಿಎಂ ಕಾಲೇಜಿನ ಆವರಣದಲ್ಲಿ ಈ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 3 ಎಕರೆ 20 ಗುಂಟೆ ಜಮೀನು ನೀಡಲು ರಾಜ್ಯ ಸರ್ಕಾರವನ್ನು ವಿನಂತಿಸಿದ್ದೇವೆ. ಶೈಕ್ಷಣಿಕ ಉದ್ದೇಶ ಮತ್ತು ಲಾಭ ರಹಿತವಾದ ಕಾರಣ ತಾಲ್ಲೂಕು ಮತ್ತು ಜಿಲ್ಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಇದಕ್ಕೆ ಒಪ್ಪಿಗೆ ನೀಡಲು ಅಭ್ಯಂತರ ಇಲ್ಲ ಎಂದು ಸೂಚಿಸಿದ್ದಾರೆ. ಇದಕ್ಕಾಗಿ ಅಂತಿಮ ಆದೇಶ ಹೊರಡಿಸಬೇಕಾಗಿದೆ. ಈ ಆದೇಶ ಆಗದ ಹೊರತು ನಿರ್ಮಾಣ ಕಾರ್ಯ ಆರಂಭಿಸಲು ಸಾಧ್ಯವಿಲ್ಲ. ಹೀಗಾಗಿ ಶಿಕ್ಷಣ ಇಲಾಖೆ ಉನ್ನತ ಅಧಿಕಾರಿಗಳು ತ್ವರಿತ ಒಪ್ಪಿಗೆ ನೀಡಿದರೆ, ವಿಜ್ಞಾನ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಚಾಲನೆ ಸಿಗುತ್ತದೆ’ ಎಂದರು.

‘ಶೃಂಗೇರಿ ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ರಾಜಧಾನಿ. ಸದಾ ಜೀವಂತಿಕೆಯಿಂದ ಕೂಡಿರುವ ಪಟ್ಟಣ. ಆಧ್ಯಾತ್ಮಿಕ ಮತ್ತು ತತ್ವಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳು ವರ್ಷವಿಡೀ ನಡೆಯುತ್ತಿರುತ್ತವೆ. ವರ್ಷಕ್ಕೆ 40 ರಿಂದ 45 ಲಕ್ಷ ಯಾತ್ರಿಗಳು ಭೇಟಿ ನೀಡುತ್ತಾರೆ. ಆದರೆ, ಸುತ್ತಮುತ್ತಲಿನ ತಾಲ್ಲೂಕು ಮತ್ತು ಜಿಲ್ಲೆಗಳ ವಿದ್ಯಾರ್ಥಿಗಳಿಗೆ ವಿಜ್ಞಾನದ ನಂಟು ಕಡಿಮೆಯೇ. ಆ ಕೊರತೆ ನೀಗಿಸಲು ಶೃಂಗೇರಿಯೇ ಸೂಕ್ತ’ ಎನ್ನುವ ಅಭಿಪ್ರಾಯ ಅವರದು.

‘ಈ ಕಾರ್ಯಕ್ಕೆ ಸರ್ಕಾರದಿಂದ ಯಾವುದೇ ಅನುದಾನ ಕೇಳಿಲ್ಲ. ಶೃಂಗೇರಿ ಮಠದವರು ಬೇಕಾದ ಸಹಾಯ ಮಾಡುವ ಭರವಸೆ ಕೊಟ್ಟಿದ್ದಾರೆ. ಸಿಎಸ್‌ಆರ್ ನಿಧಿಯ ಮೂಲಕ ಹಣ ಪಡೆಯಲಾಗುತ್ತಿದೆ. ಕೇಂದ್ರ ಸರ್ಕಾರ ಮತ್ತು ಖಾಸಗಿ ವಲಯದ ಪ್ರಮುಖ ಸಂಸ್ಥೆಗಳು ಈ ಯೋಜನೆಗೆ ಹಣ ನೀಡಲು ಮುಂದೆ ಬಂದಿವೆ. ನಮಗೆ 33 ವರ್ಷಕ್ಕೆ ಲೀಸ್ ಆಧಾರದಲ್ಲಿ ಭೂಮಿ ನೀಡಲು ಸರ್ಕಾರದ ಅನುಮತಿ ಬೇಕು. ಅದಕ್ಕೆ ರಿಯಾಯ್ತಿ ದರದಲ್ಲಿ ಶುಲ್ಕ ಪಾವತಿಗೆ ಅವಕಾಶ ನೀಡಬೇಕು. ಇದು ಬಡ ಮಧ್ಯಮ ವರ್ಗದ ಮಕ್ಕಳಿಗೆ ಅನುಕೂಲ ಆಗುವ ಯೋಜನೆ’ ಎಂದು ಮನವಿ ಮಾಡಿದರು.

ವಿಜ್ಞಾನ ಕೇಂದ್ರದಲ್ಲಿ ಏನೇನಿರಲಿವೆ?

- ಸೈನ್ಸ್ ಹಾಲ್ (ವಿಜ್ಞಾನದ ಮೂಲಭೂತ ಅಂಶಗಳು)
- ಪ್ರದರ್ಶನ ಭವನ (ವಿಜ್ಞಾನದ ಈಗಿನ ವಿದ್ಯಮಾನಗಳ ಪ್ರದರ್ಶನ)
- ವಿಜ್ಞಾನ ವಸ್ತು ಪ್ರದರ್ಶನ ಕೊಠಡಿ
- ವಿಜ್ಞಾನ-ವಿನೋದ
- ಕಿರು ತಾರಾಲಯ
- ಸೈನ್ಸ್ ಗಾರ್ಡನ್ (ಚಿಣ್ಣರಿಗೆ ವಿಜ್ಞಾನದ ಮೂಲಕ ಮಾಡಿ ಕಲಿ)
- ವಿಜ್ಞಾನ ಮತ್ತು ತಂತ್ರಜ್ಞಾನ ಗ್ಯಾಲರಿ (ಬಾಹ್ಯಾಕಾಶ, ಅಣು ಇಂಧನ, ರಕ್ಷಣೆ, ಜೈವಿಕ ತಂತ್ರಜ್ಞಾನ, ಔಷಧ, ಐಟಿ ಮುಂತಾದವುಗಳ ಗ್ಯಾಲರಿ)
- ಗ್ರಹ-ತಾರೆಗಳ ಆಸಕ್ತಿದಾಯಕ ವಿದ್ಯಮಾನಗಳ ವೀಕ್ಷಣೆಗೆ ವೀಕ್ಷಣಾಲಯ (ಅಬ್ಸರ್ವೇಟರಿ)
- 3 ಡಿ ಪ್ರದರ್ಶನಗಳ ಹಾಲ್
- ವಿಜ್ಞಾನಗಳ ಚಿತ್ರಗಳ ಪ್ರದರ್ಶನ ಮತ್ತು ಉಪನ್ಯಾಸಕ್ಕಾಗಿ ಕೊಠಡಿ
- ಮಕ್ಕಳಿಗಾಗಿ ವಿಜ್ಞಾನದ ಪ್ರಾಜೆಕ್ಟ್ ಹಾಲ್

₹53.15 ಕೋಟಿ ಯೋಜನೆ ವೆಚ್ಚ | ₹15.38 ಕೋಟಿ ಮೊದಲ ಹಂತದ ವೆಚ್ಚ | 4 ವರ್ಷ ನಿರ್ಮಾಣ ಅವಧಿ

ಐಐಎಸ್‌ಟಿ ಕುಲಪತಿ

ಬಿ.ಎನ್.ಸುರೇಶ್ ಅವರು ಇಸ್ರೊದ ತಿರುವನಂತಪುರ ಕೇಂದ್ರದಲ್ಲಿ ನಿರ್ದೇಶಕರಾಗಿದ್ದರು. ಉದ್ದೇಶಿತ ಮಾನವ ಸಹಿತ ‘ಗಗನಯಾನ’ ಮಿಷನ್‌ನ ಕ್ಯಾಪ್ಸೂಲ್ (ಕೋಶ) ಮರುವಶಕ್ಕೆ ಪಡೆಯುವ ತಂತ್ರಜ್ಞಾನದಲ್ಲಿ ಇವರ ಪಾತ್ರ ಮಹತ್ವದ್ದು. ಸದ್ಯ ಇವರು ‘ಭಾರತೀಯ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ’ಯ ಕುಲಪತಿಯೂ ಆಗಿದ್ದಾರೆ. ಇವರು ಶೃಂಗೇರಿಯ ಸಮೀಪದ ಗ್ರಾಮದವರು.

ಸುದ್ದಿ 2 ನಿಮಿಷ

ರಾಜ್ಯದಲ್ಲಿ ಹೆಚ್ಚಿದ ತಾಪಮಾನ

ಬೆಂಗಳೂರು: ರಾಜ್ಯದಲ್ಲಿ ಬಿಸಿಲ ಧಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಹಲವು ಜಿಲ್ಲೆಗಳಲ್ಲಿ ಈಗಾಗಲೇ ತಾಪಮಾನವು 36 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ.

ವಾತಾವರಣದಲ್ಲಿನ ಉಷ್ಣಾಂಶವು ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್‌ರಿಂದ 3 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚುತ್ತಿದೆ. ಇದರಿಂದಾಗಿ ಮಾರ್ಚ್ ತಿಂಗಳಲ್ಲಿಯೇ ಉಷ್ಣಾಂಶವು ಗಣನೀಯವಾಗಿ ಏರಿಕೆ ಕಾಣುತ್ತಿದೆ. ಪರಿಣಾಮ, ಮಕ್ಕಳು, ವೃದ್ಧರು ಹಾಗೂ ಮಹಿಳೆಯರು ಬಸವಳಿಯುತ್ತಿದ್ದಾರೆ. ಬಿಸಿಲಿನಿಂದ ರಕ್ಷಣೆ ಪಡೆಯಲು ಹರಸಾಹಸ ಪಡುತ್ತಿದ್ದಾರೆ.

ಹವಾಮಾನ ಇಲಾಖೆಯ ಪ್ರಕಾರ, ರಾಜ್ಯದಲ್ಲಿ ಒಣಹವೆ ಮುಂದುವರಿಯಲ್ಲಿದೆ. ಮುಂದಿನ ಐದು ದಿನಗಳ ಅವಧಿಯಲ್ಲಿ ಗರಿಷ್ಠ ತಾಪಮಾನವು 2ರಿಂದ 4 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಳವಾಗುವ ಸಾಧ್ಯತೆಯಿದೆ. ಈ ಮೂಲಕ ಕಲಬುರಗಿ, ವಿಜಯಪುರ, ರಾಯಚೂರು, ಯಾದಗಿರಿ, ಕೊಪ್ಪಳ, ಬೀದರ್, ಬಾಗಲಕೋಟೆ, ಗದಗ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್ ದಾಟುವ ಬಗ್ಗೆ ಮುನ್ಸೂಚನೆ ನೀಡಿದೆ.

ಭಾನುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ, ರಾಜ್ಯದ 12 ಜಿಲ್ಲೆಗಳಲ್ಲಿ ಗರಿಷ್ಠ ಉಷ್ಣಾಂಶವು 35 ಡಿಗ್ರಿ ಸೆಲ್ಸಿಯಸ್ ದಾಟಿದೆ. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್ (39.8) ಸಮೀಪಿಸಿದರೆ, ರಾಯಚೂರಿನಲ್ಲಿ 37 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ.

ಬೆಂಗಳೂರಿನಲ್ಲಿಯೂ ತಾಪಮಾನ ಏರಿಕೆ ಕಂಡಿದ್ದು, 34.3 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿದೆ. ಮುಂದಿನ ಎರಡು ದಿನಗಳು ಗರಿಷ್ಠ ಉಷ್ಣಾಂಶ 34 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ಇರುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಹೈಕೋರ್ಟ್ ಅಧಿಕೃತ ವೆಬ್‌ಸೈಟ್ ಸ್ಥಗಿತ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಅಧಿಕೃತ ವೆಬ್‌ಸೈಟ್ ಶನಿವಾರ ಮತ್ತು ಭಾನುವಾರ (ಮಾ.7-8) ಕಾರ್ಯನಿರ್ವಹಿಸಲಿಲ್ಲ.

ಈ ಕುರಿತಂತೆ, ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಹೈಕೋರ್ಟ್ ಕಂಪ್ಯೂಟರ್ ವಿಭಾಗದ ರಿಜಿಸ್ಟ್ರಾರ್ ಎನ್.ಜಿ.ದಿನೇಶ್ ಅವರು, ‘ಎಸ್‌ಎಸ್‌ಎಲ್ (ಸೆಕ್ಯೂರ್ ಸಾಕೆಟ್ಸ್ ಲೇಯರ್) ಪ್ರಮಾಣಪತ್ರದ ಅವಧಿ ಮುಕ್ತಾಯವಾಗಿದೆ. ಇದನ್ನು ನವೀಕರಣ ಮಾಡಬೇಕಾದ ಕಂಪನಿಯ ಕೇಂದ್ರ ಕಚೇರಿ ದೆಹಲಿ ಮತ್ತು ಕೊಲ್ಕತ್ತಾದಲ್ಲಿದ್ದು ಭಾನುವಾರದ ರಜೆಯ ಕಾರಣ ಪುನರ್ ಕಾರ್ಯಾರಂಭ ಸಾಧ್ಯವಾಗಿಲ್ಲ’ ಎಂದು ವಿವರಿಸಿದರು.

‘ಆದಾಗ್ಯೂ, ವಕೀಲರು ಮತ್ತು ಕಕ್ಷಿದಾರರಿಗೆ ಯಾವುದೇ ತೊಂದರೆ ಆಗದಂತೆ ಸಾಕಷ್ಟು ಪರ್ಯಾಯ ವ್ಯವಸ್ಥೆ ಕೈಗೊಳ್ಳಲಾಗಿದೆ. ಇ-ಕೋರ್ಟ್ ಆ್ಯಪ್, ಅಧಿಕೃತ ಸಾರ್ವಜನಿಕ ಟೆಲಿಗ್ರಾಂ ಚಾನೆಲ್, ವಿಡಿಯೊ ಕಾನ್ಫರೆನ್ಸ್ ಹೆಲ್ಪ್ ಡೆಸ್ಕ್‌ಗಳಲ್ಲಿ ದೈನಂದಿನ ಕಾಸ್ ಲಿಸ್ಟ್ ಮತ್ತು ಕೇಸ್ ಸ್ಟೇಟಸ್ ಪರಿಶೀಲಿಸಲು ಅನುವಾಗುವಂತೆ ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರೂ ಇನ್‌ಕಾಗ್ನಿಟೊ ಮೋಡ್‌ನಲ್ಲಿ ಹುಡುಕಾಟ ನಡೆಸಬಹುದು. ಸೋಮವಾರ (ಮಾ.9) ಬೆಳಿಗ್ಗೆ ಎಂದಿನಂತೆ ಹೈಕೋರ್ಟ್ ಅಧಿಕೃತ ವೆಬ್‌ಸೈಟ್ ತನ್ನ ಕಾರ್ಯಾರಂಭ ಮಾಡಲಿದೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಇಂದಿನಿಂದ ಬಜೆಟ್ ಮೇಲೆ ಚರ್ಚೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿಧಾನಮಂಡಲದ ಉಭಯ ಸದನಗಳಲ್ಲಿ ಸೋಮವಾರದಿಂದ ಬಜೆಟ್ ಮೇಲಿನ ಚರ್ಚೆ ಆರಂಭವಾಗಲಿದೆ. ಮಾರ್ಚ್ 27ರವರೆಗೆ ಅಧಿವೇಶನ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6 ರಂದು ₹4.48 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸುವ ಜೊತೆಗೆ, ವಿವಿಧ ಯೋಜನೆಗಳಿಗೂ ಹಣ ಒದಗಿಸಿದ್ದಾರೆ.

ಸಾಲದ ಹೊರೆ, ನೇಮಕಾತಿ ವಿಳಂಬ, ಗುತ್ತಿಗೆದಾರರ ಬಿಲ್ ಬಾಕಿ, ಎಸ್‌ಸಿಎಸ್‌ಪಿ ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮತ್ತಿತರ ವಿಷಯಗಳನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ಮುಗಿಬೀಳಲು ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಸಿದ್ಧವಾಗಿವೆ.

‘ಆರ್‌ಎಸ್‌ಎಸ್ ಮುಗಿಸುವ ಶಕ್ತಿ ಯಾರಿಗೂ ಇಲ್ಲ’

ಪ್ರಜಾವಾಣಿ ವಾರ್ತೆ

ಅನಂತಕುಮಾರ ಹೆಗಡೆ

ಭಟ್ಕಳ (ಉತ್ತರ ಕನ್ನಡ): ‘ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತರು ದೇಶವನ್ನು ಕಟ್ಟಿದ್ದಾರೆ. ಆರ್‌ಎಸ್‌ಎಸ್ ಮುಗಿಸುವ ಶಕ್ತಿ ಜಗತ್ತಿನಲ್ಲಿ ಯಾರಿಗೂ ಇಲ್ಲ’ ಎಂದು ಕೇಂದ್ರದ ಮಾಜಿ ಸಚಿವ ಅನಂತಕುಮಾರ ಹೆಗಡೆ ಇಲ್ಲಿ ಹೇಳಿದರು.

ಹಿಂದೂ ಸಮ್ಮೇಳನ ಸಮಿತಿ ಭಾನುವಾರ ಹಮ್ಮಿಕೊಂಡಿದ್ದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ‘ಮಿಣುಕು ಹುಳ ತನ್ನಿಂದಲೇ ಜಗತ್ತು ಬೆಳಗುತ್ತದೆ ಎಂಬ ಭ್ರಮೆಯಲ್ಲಿರುತ್ತದೆ. ಆರ್‌ಎಸ್‌ಎಸ್ ಮುಗಿಸುತ್ತೇವೆ ಎನ್ನುವವರು ಇಂತಹದ್ದೇ ಭ್ರಮೆಯಲ್ಲಿದ್ದಾರೆ’ ಎಂದು ಲೇವಡಿ ಮಾಡಿದರು.

‘ಜಾತ್ಯತೀತ ಗುಣ ಹಿಂದೂಗಳ ರಕ್ತದಲ್ಲಿದೆ. ಕಾನೂನು ಜಾರಿಗೆ ಬರುವ ಮುನ್ನವೇ ದೇಶದಲ್ಲಿ ಚರ್ಚ್, ಮಸೀದಿಗಳ ಸ್ಥಾಪನೆಗೆ ಅವಕಾಶ ನೀಡಲಾಗಿದೆ. ಹಿಂದೂಗಳಿಗೆ ಜಾತ್ಯತೀತ ಪಾಠ ಮಾಡುವ ಅಗತ್ಯವೇ ಇಲ್ಲ’ ಎಂದರು.

‘ಹಿಂದುಳಿದವರು ಎಂದು ಹೇಳಿಕೊಳ್ಳುವುದು, ಬ್ರಾಹ್ಮಣರನ್ನು ವಿರೋಧಿಸುವುದು ಇತ್ತೀಚಿನ ದಿನಗಳಲ್ಲಿ ಕೆಲವರಿಗೆ ಫ್ಯಾಶನ್ ಆಗಿದೆ. ಆದರೆ, ಹಿಂದೂಗಳು ಆರಾಧಿಸುವ ಬಹುತೇಕ ಮಹರ್ಷಿಗಳು ಹಿಂದುಳಿದ ವರ್ಗ, ಪರಿಶಿಷ್ಟ ಸಮುದಾಯದವರು ಎಂಬುದನ್ನು ಟೀಕಾಕಾರರು ಅರಿತುಕೊಳ್ಳಲಿ’ ಎಂದು ಹೇಳಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಚೇರಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ, ಸರಸ್ವತಿ ಪುರಂ, ಮೈಸೂರು-09.
ದೂರವಾಣಿ ಸಂ: 0821-2545894 ಇ-ಮೇಲ್: kwbcemys2014@gmail.com
IFT ಸಂ.: 1856/2025-26 ದಿನಾಂಕ: 05.03.2026
ಟೆಂಡರ್ ಪ್ರಕಟಣೆ
ಕಾಮಗಾರಿಯ ವಿವರ: ‘ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಠೇವಣಿ ಕೊಡುಗೆ ಕಾಮಗಾರಿಗಳ ಅಡಿಯಲ್ಲಿ ಮೈಸೂರು ನಗರದ ಚಾಮುಂಡಿ ಬೆಟ್ಟಕ್ಕೆ ಸಗಟು ನೀರು ಸರಬರಾಜು ವ್ಯವಸ್ಥೆಯ ಹೆಚ್ಚುವರಿ ಕಾಮಗಾರಿಗಳು (ಲಂಪ್ಸಮ್ ಟೆಂಡರ್ - ವೇರಿಯೇಷನ್ ಇಲ್ಲದಂತೆ)’ ಟೆಂಡರ್‌ನ್ನು **ರೂ.513.25 ಲಕ್ಷಗಳಿಗೆ** (ಜಿ.ಎಸ್.ಟಿ ಹೊರತುಪಡಿಸಿ): KUWSDB/2025-26/WS/WORK_INDENT497 ರಲ್ಲಿ ಆಹ್ವಾನಿಸಲಾಗಿರುತ್ತದೆ.
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಸಂಪರ್ಕಿಸುವುದು
DIPR/MYS/1793/SA/2025-26 ಸಹಿ/-ಮುಖ್ಯ ಅಭಿಯಂತರರು

ಕರ್ನಾಟಕ ಸರ್ಕಾರ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ನಿರ್ದೇಶಕರ ಕಛೇರಿ, ನಂ. 34, ಮೊದಲನೇ ಮಹಡಿ, ಲೋಟಸ್ ಟವರ್ಸ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 001
ಸಂಖ್ಯೆ:ಪವಕಇ:ಪ.ಪಂ.ಉ.ಯೋ:ಸಿಆರ್-02:2025-26 ದಿನಾಂಕ:06.03.2026
ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಸರ್ಕಾರದ ಆದೇಶ ಸಂಖ್ಯೆ STW/SECB/STP/439/2025 ದಿನಾಂಕ: 04.02.2026 ಮತ್ತು ತಿದ್ದುಪಡಿ ಆದೇಶ ದಿನಾಂಕ: 03.03.2026 ರನ್ವಯ ರಾಜ್ಯದ ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅರಣ್ಯ ಹಾಗೂ ಅರಣ್ಯದ ಅಂಚಿನಲ್ಲಿ ವಾಸಿಸುತ್ತಿರುವ ಮೂಲನಿವಾಸಿ ಪಂಗಡಗಳಾದ ಕೊರಗ ಮತ್ತು ಜೇನುಕುರುಬ ಹಾಗೂ ಇತರೆ ಪರಿಶಿಷ್ಟ ಪಂಗಡದವರಾದ ಕಾಡುಕುರುಬ, ಸೋಲಿಗ, ಯರವ, ಮಲೈಕುಡಿ, ಸಿದ್ಧಿ, ಗೌಡಲು, ಹಸಲರು, ಗೊಂಡ, ಕುಡಿಯ ಮತ್ತು ಬೆಟ್ಟಕುರುಬ ಸಮುದಾಯದವರಿಗೆ 12 ತಿಂಗಳವರೆಗೆ ಪೌಷ್ಠಿಕ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in/#/portal/portal-home ಮುಖಾಂತರ ಈ ಕೆಳಕಂಡ ವಿವರದಂತೆ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಸದರಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ವಿವರ	ಅಂದಾಜು ಟೆಂಡರ್ ಮೌಲ್ಯ (ರೂ.ಕೋಟಿಗಳಲ್ಲಿ)
1	Procurement of Nutrition food for aforesaid tribes resided in 8 districts in the State of Karnataka (FY-2026-27).	145.00

ಟೆಂಡರ್ ಕರೆದ ದಿನಾಂಕ : **06.03.2026.** ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : **06.04.2026.**
ವಿಶೇಷ ಸೂಚನೆ: ಹೆಚ್ಚಿನ ವಿವರಗಳನ್ನು https://kppp.karnataka.gov.in/#/portal/portal-home ಅಥವಾ ನಿರ್ದೇಶಕರ ಕಛೇರಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ದೂರವಾಣಿ ಸಂಖ್ಯೆ:080-22261787 ಸಂಪರ್ಕಿಸಬಹುದು.
ಸಹಿ/- ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ವಾಸಾಸಂಇ/ವಾಪ್ರ/ಜೆಎ/6086/2025-26

‘ಮೀಸಲಾತಿ ಅನ್ಯಾಯ: ಪಾದಯಾತ್ರೆ’

ಮಾರ್ಚ್ 22ರಂದು ಚಿತ್ರದುರ್ಗದಲ್ಲಿ ಚಾಲನೆ; ಬಿಜೆಪಿ ನಾಯಕರ ಘೋಷಣೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಭೆಯನ್ನು ಮಾಜಿ ಸಚಿವ ಬಿ.ಶ್ರೀರಾಮುಲು ಹಾಗೂ ಮುಖಂಡರು ತಮಟೆ ಬಾರಿಸುವ ಮೂಲಕ ಉದ್ಘಾಟಿಸಿದರು

ಚಿತ್ರದುರ್ಗ: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿಯಲ್ಲಿ ಆಗುತ್ತಿರುವ ಅನ್ಯಾಯ ಖಂಡಿಸಿ ಬಿಜೆಪಿ ವತಿಯಿಂದ ಮಾರ್ಚ್ 22ರಿಂದ ಬೃಹತ್ ಪಾದಯಾತ್ರೆ ನಡೆಸಲು ನಿರ್ಧರಿಸಲಾಗಿದೆ.

ನಗರದ ವಾಲ್ಮೀಕಿ ಸಮುದಾಯ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಬೃಹತ್ ಜನಾಂದೋಲನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಪ್ರಕಟಿಸಲಾಯಿತು.

‘ಮಾರ್ಚ್ 22 ರಂದು ಚಿತ್ರದುರ್ಗದಲ್ಲಿ ಆರಂಭವಾಗುವ ಪಾದಯಾತ್ರೆ 27ರಂದು ಬೆಂಗಳೂರು ತಲುಪಲಿದ್ದು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುತ್ತದೆ’ ಎಂದು ಹೋರಾಟದ ನೇತೃತ್ವ ವಹಿಸಿರುವ ಮಾಜಿ ಶಾಸಕ ಪಿ.ರಾಜೀವ್ ತಿಳಿಸಿದರು.

‘ಮೊದಲ ದಿನವೇ ಒಂದು ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಸರ್ಕಾರದ ಪ್ರತಿನಿಧಿಗಳು ಬಂದು ಎಸ್‌ಸಿ., ಎಸ್‌ಟಿ., ಸಮುದಾಯಗಳಿಗೆ ನ್ಯಾಯ ಒದಗಿಸುವ ಭರವಸೆ ನೀಡಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುತ್ತದೆ. ಬೆಂಗಳೂರು ತಲುಪಿದ ಬಳಿಕ ಹೋರಾಟದ ಸ್ವರೂಪ ಬದಲಾಗಲಿದೆ’ ಎಂದು ಎಚ್ಚರಿಸಿದರು.

‘ಬಿಜೆಪಿ ಸರ್ಕಾರವು ಎಸ್‌ಸಿ, ಎಸ್‌ಟಿ ಸಮುದಾಯದ ಹೋರಾಟಕ್ಕೆ ಮನ್ನಣೆ ನೀಡಿ ಮೀಸಲಾತಿ ಹೆಚ್ಚಿಸಿತ್ತು. ಆದರೆ ಕಾಂಗ್ರೆಸ್ ಸರ್ಕಾರ ನಮ್ಮ ಧ್ವನಿ ಹತ್ತಿಕ್ಕುತ್ತಿದೆ. ಮೀಸಲಾತಿ ಹೆಚ್ಚಳ ಅಂಬೇಡ್ಕರ್ ಅವರ ಕೊಡುಗೆಯೇ ಹೊರತು ಸಿದ್ದರಾಮಯ್ಯ ಅವರದ್ದಲ್ಲ’ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಕಿಡಿಕಾರಿದರು.

‘ಮದಕರಿ ನಾಯಕರ ಜನ್ಮಭೂಮಿಯಲ್ಲಿ ಸರ್ಕಾರದ ವಿರುದ್ಧದ ಹೋರಾಟಕ್ಕೆ ಕಹಳೆ ಊದಿದ್ದೇವೆ. ಇದು ಮಾಡು ಇಲ್ಲವೆ ಮಡಿ ಹೋರಾಟ. ಸತ್ತರೂ ಇದರಿಂದ ಹಿಂದೆ ಸರಿಯುವುದಿಲ್ಲ. ಪರಿಶಿಷ್ಟರ ಮೀಸಲಾತಿ ಪಡೆದೇ ಮನೆ ಸೇರುತ್ತೇವೆ’ ಎಂದು ಮಾಜಿ ಸಚಿವ ಶಿವನಗೌಡ ನಾಯಕ ತಿಳಿಸಿದರು.

‘ಇದು ನಮ್ಮ ಅಳಿವು, ಉಳಿವಿನ ಪ್ರಶ್ನೆ. ಗುರಿ ಮುಟ್ಟುವವರೆಗೆ ಹೋರಾಟ ನಡೆಯಲಿದೆ. ಮೀಸಲಾತಿ ಕೈ ತಪ್ಪಿದರೆ ಪರಿಶಿಷ್ಟರ ನಾಲ್ಕು ಸಾವಿರ ಹುದ್ದೆಗಳು ಕೈ ತಪ್ಪಲಿವೆ. ಇದು ಸಮುದಾಯದ ಉಳಿವಿಗಾಗಿ ನಡೆಯುತ್ತಿರುವ ಹೋರಾಟ’ ಎಂದು ಮಾಜಿ ಶಾಸಕ ರಾಜುಗೌಡ ಹೇಳಿದರು.

ಸಂಸದ ಗೋವಿಂದ ಕಾರಜೋಳ, ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ, ಶಾಸಕ ಎಂ.ಚಂದ್ರಪ್ಪ, ಎನ್. ಮಹೇಶ್ ಹಾಗೂ ಇತರರು ಇದ್ದರು.

ನಿತೀಶ್ ‘ಸಮೃದ್ಧಿ ಯಾತ್ರೆ’ ಇಂದಿನಿಂದ

ನಿತೀಶ್ ಕುಮಾರ್

ಪಾಟ್ನಾ (ಪಿಟಿಐ): ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮಾರ್ಚ್ 9ರಿಂದ ರಾಜ್ಯದಲ್ಲಿ ‘ಸಮೃದ್ಧಿ ಯಾತ್ರೆ’ಯನ್ನು ಪುನರಾರಂಭಿಸಲಿದ್ದಾರೆ.

ಪಶ್ಚಿಮ ಚಂಪಾರಣ್ ಜಿಲ್ಲೆಯಿಂದ ಜ.16ರಂದು ಸಮೃದ್ಧಿ ಯಾತ್ರೆಯನ್ನು ಆರಂಭಿಸಲಾಗಿತ್ತು. ಆದರೆ, ಬಿಹಾರದ ಬಜೆಟ್ ಅಧಿವೇಶನದ ಕಾರಣಕ್ಕೆ ಈ ಯಾತ್ರೆಯನ್ನು ಮುಂದೂಡಲಾಗಿತ್ತು. ‘ಯಾತ್ರೆಯಲ್ಲಿ ಮುಖ್ಯಮಂತ್ರಿ ಜನರೊಂದಿಗೆ ಸಂವಾದ ನಡೆಸಲಿದ್ದು, ಸರ್ಕಾರದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ.

ಹನಿಟ್ರ್ಯಾಪ್: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಉದ್ಯಮಿಯೊಬ್ಬರನ್ನು ಹನಿಟ್ರ್ಯಾಪ್ ಮಾಡಿ ಲಕ್ಷಾಂತರ ರೂಪಾಯಿ ವಸೂಲಿಗೆ ಯತ್ನಿಸಿದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ದಾವಣಗೆರೆ ನಿವಾಸಿಗಳಾದ ಸುಷ್ಮಿತಾ, ಚನ್ನಬಸಪ್ಪ, ಕೃಷ್ಣ ಹಾಗೂ ರಾಹುಲ್ ಬಂಧಿತರು. ಆರೋಪಿ ಸಂಜನಾ ತಲೆಮರೆಸಿಕೊಂಡಿದ್ದಾರೆ.

ಸಂಚು ರೂಪಿಸಿದ್ದರು: ವೃತ್ತಿಯಲ್ಲಿ ಶುಶ್ರೂಷಕಿ ಆಗಿದ್ದ ಸುಷ್ಮಿತಾ, ರಾಜಕೀಯ ಪಕ್ಷವೊಂದರಲ್ಲಿ ಗುರುತಿಸಿಕೊಂಡಿರುವ 66 ವರ್ಷದ ಉದ್ಯಮಿಯೊಬ್ಬರ ಸ್ನೇಹ ಬೆಳೆಸಿದ್ದರು. ಕ್ರಮೇಣ ಸಲುಗೆಗೆ ತಿರುಗಿತ್ತು. ಕಷ್ಟ ಎಂದು ಕೆಲ ದಿನಗಳ ಹಿಂದೆ ಆರ್ಥಿಕ ನೆರವು ಕೇಳಿದ್ದರು.

ಈ ಬಗ್ಗೆ ಮಾತನಾಡಬೇಕಿದೆ ಎಂದು ಉದ್ಯಮಿಯನ್ನು ಅಪಾರ್ಟ್‌ಮೆಂಟ್‌ಗೆ ಕರೆಸಿಕೊಂಡು ತನ್ನೊಂದಿಗೆ ಬಂದಿದ್ದ ಸಂಜನಾ ಅವರನ್ನು ಉದ್ಯಮಿಯಿದ್ದ ಕೊಠಡಿಯೊಳಗೆ ಕಳಿಸಿದ್ದರು.

‘ಯುವತಿಯೊಂದಿಗೆ ಅರೆಬೆತ್ತಲೆ ಸ್ಥಿತಿಯಲ್ಲಿದ್ದಾಗ ಕೊಠಡಿಗೆ ನುಗ್ಗಿ ಮೊಬೈಲ್‌ನಲ್ಲಿ ವಿಡಿಯೊ ಮಾಡಿಕೊಂಡಿದ್ದರು. ₹25 ಲಕ್ಷ ನೀಡದಿದ್ದರೆ ಜಾಲತಾಣಗಳಲ್ಲಿ ಹರಿಬಿಡುವುದಾಗಿ ಬೆದರಿಸಿದ್ದರು. ₹12 ಲಕ್ಷ ನೀಡುವುದಾಗಿ ಹೇಳಿ ಬಂದಿದ್ದೆ. ಬಳಿಕ ನನ್ನಿಂದ ₹1 ಲಕ್ಷ ಪಡೆದಿದ್ದರು’ ಎಂದು ಉದ್ಯಮಿ ಇಲ್ಲಿನ ವಿದ್ಯಾನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಶರಣನ ತೇರು...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿಯ ಶರಣಬಸವೇಶ್ವರರ ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಭಾನುವಾರ ಸಂಜೆ ಅಪಾರ ಭಕ್ತ ಸಮೂಹದ ಮಧ್ಯೆ ಮಹಾರಥೋತ್ಸವ ಜರುಗಿತು

ಯುಪಿಎಸ್‌ಸಿ: ಬಸವರಾಜಗೆ 739ನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಬಸವರಾಜ

ಕಬ್ಬೂರ (ಬೆಳಗಾವಿ): ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕಬ್ಬೂರಿನ ಯುವಕ ಬಸವರಾಜ ಮಡಿವಾಳಪ್ಪ ಪಾಟೀಲ (28) ಯುಪಿಎಸ್‌ಸಿ ಪರೀಕ್ಷೆಯಲ್ಲಿ 739ನೇ ರ‍್ಯಾಂಕ್ ಪಡೆದಿದ್ದಾರೆ.

ಇವರು ಬೈಲಹೊಂಗಲ ತಾಲ್ಲೂಕಿನ ಚಿಕ್ಕಹಳ್ಳಿ ಮೇಕಲಮರಡಿಯವರು. ತಂದೆ ಮಡಿವಾಳಪ್ಪ ಪ್ರಾಥಮಿಕ ಶಾಲಾ ಶಿಕ್ಷಕ, ತಾಯಿ ಶಾಂತವ್ವ ಗೃಹಿಣಿ.

ಕಬ್ಬೂರಿನಲ್ಲಿ ಪ್ರಾಥಮಿಕ ಶಿಕ್ಷಣ, ಕೋಥಳಿ ಜವಾಹರ ನವೋದಯ ವಿದ್ಯಾಲಯದಲ್ಲಿ ಪ್ರೌಢಶಿಕ್ಷಣ, ಧಾರವಾಡದ ಎಸ್‌ಡಿಎಂ ಕಾಲೇಜಿನಲ್ಲಿ ಪಿಯು, ಹಳಿಯಾಳದ ವಿಶ್ವನಾಥರಾವ್ ದೇಶಪಾಂಡೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಬಿಇ ಮೆಕ್ಯಾನಿಕಲ್ ಮುಗಿಸಿದ್ದಾರೆ.

ಬೆಂಗಳೂರಿನಲ್ಲೇ ಉಳಿದು ಅಭ್ಯಾಸ ಮಾಡುತ್ತಿದ್ದರು. 5ನೇ ಪ್ರಯತ್ನದಲ್ಲಿ ಸಫಲರಾಗಿದ್ದಾರೆ. ‘ನಿತ್ಯ 8-10 ತಾಸು ಓದುತ್ತಿದ್ದೆ. ಇನ್ನೂ ಉತ್ತಮ ರ‍್ಯಾಂಕ್ ನಿರೀಕ್ಷೆ ಇತ್ತು. ಮತ್ತೆ ಪರೀಕ್ಷೆ ಬರೆದು ಐಎಎಸ್ ಅಧಿಕಾರಿಯಾಗುವ ಕನಸು ನನಸು ಮಾಡಿಕೊಳ್ಳುತ್ತೇನೆ’ ಎಂದರು.

ಸಹಪಾಠಿ ಹಲ್ಲೆ: ಬಾಲಕ ಸಾವು

ಒಂದನೇ ಪುಟದಿಂದ...

ಇವರೆಲ್ಲರೂ ವಿವಿಧ ತರಗತಿಗಳಲ್ಲಿ ಓದುತ್ತಿದ್ದಾರೆ.

ದಾಳಿ ಮಾಡಿದ ಬಾಲಕ ಬಳ್ಳಾರಿಯ ಗೋನಾಳು ಗ್ರಾಮದವನಾಗಿದ್ದು, ಘಟನೆ ಬಳಿಕ ಪರಾರಿಯಾಗಿದ್ದಾನೆ. ರಾಡ್, ಚಾಕು, ತೆಂಗಿನಕಾಯಿ ಸುಲಿಯುವ ಸಾಧನದಿಂದ ದಾಳಿ ನಡೆಸಿದ್ದಾನೆ.

‘ಹಾಸ್ಟೆಲ್‌ನಲ್ಲಿ ಶನಿವಾರ ರಾತ್ರಿ ಎಲ್ಲರೂ ಊಟ ಮುಗಿಸಿದ್ದರು. ಹೇಮಂತ್, ಆರೋಪಿ ಬಾಲಕ ಮತ್ತು ಮತ್ತು ಇತರ ಇಬ್ಬರು ವಿದ್ಯಾರ್ಥಿಗಳು ಒಂದೇ ಕಡೆ ಮಲಗಿದ್ದರು. ರಾತ್ರಿ 10.15ರ ಸುಮಾರಿಗೆ ಆರೋಪಿ ಏಕಾಏಕಿ ದಾಳಿ ನಡೆಸಿದ್ದಾನೆ. ಅಡ್ಡ ಬಂದ ವಾರ್ಡನ್ ಬ್ಲೆಸಿ ಅವರ ಮೇಲೂ ಹಲ್ಲೆ ನಡೆಸಿದ್ದಾನೆ’ ಎಂದು ಮೂಲಗಳು ತಿಳಿಸಿವೆ.

‘ಹಾಸ್ಟೆಲ್ ಒಳಗೆ ಸಿ.ಸಿ.ಟಿ.ವಿ ಕ್ಯಾಮೆರಾಗಳು ಇರಲಿಲ್ಲ. ಹೀಗಾಗಿ ಘಟನೆ ಹೇಗೆ ನಡೆಯಿತು ಎಂಬುದು ಗೊತ್ತಾಗಿಲ್ಲ. ಆದರೆ, ಆರೋಪಿ ಪರಾರಿಯಾಗುತ್ತಿರುವುದು ಬೇರೊಂದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘15 ವರ್ಷದ ಬಾಲಕನೊಬ್ಬ ಈ ರೀತಿ ದಾಳಿ ನಡೆಸಬೇಕೆಂದರೆ ಆತ ಡ್ರಗ್ಸ್ ವ್ಯಸನಿಯಾಗಿರಬಹುದು ಎಂಬ ಅನುಮಾನವಿದೆ. ಆತನಿಗೆ ಮಾರಕಾಸ್ತ್ರ ಸಿಕ್ಕಿದೆ ಎಂದರೆ ಇದಕ್ಕೆ ಶಾಲೆಯ ಆಡಳಿತ ಮಂಡಳಿಯ ವೈಫಲ್ಯವೂ ಕಾರಣ’ ಎಂದು ವಕೀಲರೂ ಆಗಿರುವ, ಮೃತನ ತಂದೆ ಲಕ್ಷ್ಮೀಕಾಂತ ಆರೋಪಿಸಿದ್ದಾರೆ.

> **ಘಟನೆ ಕುರಿತು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ. ಬಳ್ಳಾರಿ ಐಜಿಪಿ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಮಾಹಿತಿ ಪಡೆಯಲಾಗಿದೆ**
> **ಶಶಿಧರ ಕೋಸಂಬೆ,** ಅಧ್ಯಕ್ಷ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

‘ಅನುಮತಿ ನೀಡಿಲ್ಲ’

ವಸತಿ ಶಾಲೆಯಲ್ಲಿ ಸಿಬಿಎಸ್‌ಇ ಪಠ್ಯಕ್ರಮ ಬೋಧಿಸಲಾಗುತ್ತಿದ್ದು, ಇದಕ್ಕೆ ಅನುಮತಿ ಇತ್ತೇ ಎಂಬ ಬಗ್ಗೆ ಅಧಿಕಾರಿಗಳಲ್ಲಿ ಮಾಹಿತಿ ಇಲ್ಲ. ವಸತಿ ಶಾಲೆಗೆ ಅನುಮತಿ ಕೊಟ್ಟಿಲ್ಲ ಎಂದು ಡಿಡಿಪಿಐ ಉಮಾದೇವಿ ತಿಳಿಸಿದ್ದಾರೆ. ಹಾಸ್ಟೆಲ್‌ನಲ್ಲಿ ಬಾಲಕಿ ಸೇರಿ 9 ವಿದ್ಯಾರ್ಥಿಗಳಷ್ಟೇ ಇದ್ದರು’ ಎಂದು ತಿಳಿದುಬಂದಿದೆ.

ಪ್ರಧಾನಿ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

‘ಟ್ರಂಪ್ ತಾಳಕ್ಕೆ ಕುಣಿಯುವ ಮೋದಿ’

ಪ್ರಜಾವಾಣಿ ವಾರ್ತೆ

ಚಿತ್ತಾಪುರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಚಾಲನೆ ನೀಡಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಪ್ರಿಯಾಂಕ್ ಖರ್ಗೆ ಇತರರು ಭಾಗವಹಿಸಿದ್ದರು

ಚಿತ್ತಾಪುರ: ‘ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಬ್ಬ ಸರ್ವಾಧಿಕಾರಿ. ಎಪ್‌ಸ್ಟೀನ್ ಫೈಲ್‌ನಲ್ಲಿ ತಮ್ಮ ಹೆಸರು ಬಂದಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿ ಟ್ರಂಪ್ ತಾಳಕ್ಕೆ ತಕ್ಕಂತೆ ಕುಣಿಯುವ ಗುಲಾಮರಾಗಿದ್ದಾರೆ. ಟ್ರಂಪ್ ಜೊತೆ ಸ್ನೇಹ ಮಾಡಿಕೊಂಡು ದೇಶವನ್ನು ಗಿರವಿ ಇಟ್ಟಿದ್ದಾರೆ’ ಎಂದು ಎಐಸಿಸಿ ಅಧ್ಯಕ್ಷ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಚಿತ್ತಾಪುರ ಪಟ್ಟಣದಲ್ಲಿ ಭಾನುವಾರ ಆಯೋಜಿಸಿದ್ದ ₹ 1069 ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬೆಳಿಗ್ಗೆ ಚಹಾ ಕುಡಿಯುವ ಸಮಯಕ್ಕೆ ಟ್ರಂಪ್ ಅವರೊಂದಿಗೆ ಮಾತನಾಡುವುದಾಗಿ ಮೋದಿ ಹೇಳುತ್ತಾರೆ. ಅಷ್ಟೊಂದು ಸ್ನೇಹ ಇದ್ದರೆ ನಮ್ಮ ದೇಶದ ಮೇಲೆ ಇಷ್ಟೊಂದು ಪ್ರಮಾಣದಲ್ಲಿ ತೆರಿಗೆ ಹೇರುತ್ತಿರುವುದೇಕೆ? ಯಾವ ದೇಶದೊಂದಿಗೆ ವ್ಯವಹಾರ ಮಾಡಬೇಕು ಎಂದು ಹೇಳುತ್ತಿರುವುದೇಕೆ? ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಹೇಳಲು ಮೋದಿ ಅವರಿಗೆ ಏಕೆ ಆಗುವುದಿಲ್ಲ’ ಎಂದು ಪ್ರಶ್ನಿಸಿದರು.

‘ಭಾರತದ ಆಹ್ವಾನದ ಮೇರೆಗೆ ವಿಶಾಖಪಟ್ಟಣದಲ್ಲಿ ಆಯೋಜಿಸಿದ್ದ ನೌಕಾದಳದ ತಾಲೀಮಿನಲ್ಲಿ ಭಾಗವಹಿಸಲು ಇರಾನ್‌ನಿಂದ ಬಂದಿದ್ದ ಯುದ್ಧ ನೌಕೆಯನ್ನು ಅಮೆರಿಕದ ಜಲಾಂತರ್ಗಾಮಿಯು ಬಾಂಬ್ ದಾಳಿ ನಡೆಸಿ ಮುಳುಗಿಸಿ ಹಲವಾರು ಇರಾನ್ ಸೈನಿಕರ ಸಾವಿಗೆ ಕಾರಣವಾಗಿದೆ. ಅಷ್ಟೊಂದು ಧೈರ್ಯ ಅವರಿಗೆ ಹೇಗೆ ಬಂತು? ಇದನ್ನು ಪ್ರಶ್ನಿಸುವ ಎದೆಗಾರಿಕೆಯೂ ಪ್ರಧಾನಿಗೆ ಇಲ್ಲವೇ? ಇಂದಿರಾಗಾಂಧಿ ಪ್ರಧಾನಿಯಾಗಿದ್ದ ವೇಳೆ ಬಾಂಗ್ಲಾ ದೇಶಕ್ಕೆ ಸ್ವಾತಂತ್ರ್ಯ ಕೊಡಿಸುವ ವೇಳೆ ಅಮೆರಿಕದ ಯುದ್ಧನೌಕೆಯನ್ನು ಕಳುಹಿಸಿ ಭಾರತವನ್ನು ಬೆದರಿಸಲು ನೋಡಿತು. ಆದರೆ, ಇಂದಿರಾಗಾಂಧಿ ಅಮೆರಿಕದ ಬೆದರಿಕೆಗೆ ಮಣಿದಿರಲಿಲ್ಲ’ ಎಂದರು.

‘ದೇಶದ ಉತ್ಪನ್ನಗಳಿಗೆ ಅಮೆರಿಕದಲ್ಲಿ ಭಾರಿ ತೆರಿಗೆ ಹಾಕುತ್ತಾರೆ. ಆದರೆ, ಅಮೆರಿಕದ ಉತ್ಪನ್ನಗಳಿಗೆ ನಾವು ತೆರಿಗೆ ಹಾಕುವಂತಿಲ್ಲ. ನಾವು ಯಾರಿಂದ ತೈಲ ಖರೀದಿ ಮಾಡಬೇಕು ಎಂಬುದನ್ನು ಅಮೆರಿಕವೇ ನಿರ್ಧರಿಸುವುದಾದರೆ ಮೋದಿ ಟ್ರಂಪ್ ಅವರ ಸ್ನೇಹಿತರಾಗಿ ಏನು ಪ್ರಯೋಜನ?’ ಎಂದರು.

> **ಮೋದಿ ಇಸ್ರೇಲ್‌ಗೆ ಹೋಗಿ ಬಂದ ನಂತರ ಇರಾನ್ ದೇಶದ ಮುಖ್ಯಸ್ಥ ಖಮೇನಿ ಅವರನ್ನು ಅಮೆರಿಕ-ಇಸ್ರೇಲ್ ಪಡೆಗಳು ಹತ್ಯೆ ಮಾಡಿದವು. ಮುಖ್ಯಸ್ಥನನ್ನೇ ಹತ್ಯೆ ಮಾಡಿದರೆ ಆ ದೇಶ ಶಾಂತಿಯಿಂದ ಇರುತ್ತದೆಯೇ?**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಶೈಕ್ಷಣಿಕ ಮೇಳ ನಿಮಗಾಗಿ

‘ಪಿಯುಸಿ ನಂತರ ಮುಂದೇನು?’ ಎನ್ನುವ ಪ್ರಶ್ನೆ ಕಾಡುತ್ತಿದೆಯೇ? ಚಿಂತೆ ಬಿಡಿ. ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಏಪ್ರಿಲ್‌ನಲ್ಲಿ ಆಯೋಜಿಸಲಿರುವ ‘ಎಡ್ಯುವರ್ಸ್’ ಶೈಕ್ಷಣಿಕ ಮೇಳದಲ್ಲಿ ಪಾಲ್ಗೊಳ್ಳಿ, ನಿಮ್ಮ ಪ್ರಶ್ನೆಗೆ ಸೂಕ್ತ ಉತ್ತರ ಕಂಡುಕೊಂಡು ಉತ್ತಮ ಭವಿಷ್ಯ ನಿಮ್ಮದಾಗಿಸಿಕೊಳ್ಳಿ. ಅಷ್ಟೇ ಅಲ್ಲ, ಸಿಇಟಿ, ಕಾಮೆಡ್–ಕೆ, ವೃತ್ತಿಪರ ಕೋರ್ಸ್ ಸೇರಿದಂತೆ ವಿವಿಧ ಕೋರ್ಸ್‌ಗಳು, ಉದ್ಯೋಗಾವಕಾಶ... ಎಲ್ಲವೂ ನಿಮಗಾಗಿ. ಮೇಳದ ದಿನಾಂಕಕ್ಕಾಗಿ ನಿರೀಕ್ಷಿಸಿ, ಶೈಕ್ಷಣಿಕ ಮಾಹಿತಿಯ ಕಣಜವನ್ನು ಎದುರುಗೊಳ್ಳಲು ಸಿದ್ಧರಾಗಿ.

ಪ್ರಜಾವಾಣಿ DH ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಮಾಜ ವಿಜ್ಞಾನ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

60) 1935ರ ಭಾರತ ಸರ್ಕಾರದ ಕಾಯ್ದೆ ಕುರಿತು ಬರೆಯಿರಿ

ಉತ್ತರ:– 1935ರ ಭಾರತ ಸರ್ಕಾರದ ಕಾಯ್ದೆ ಭಾರತದ ಸಂವಿಧಾನ ರಚನೆಗೆ ಈ ಕಾಯ್ದೆಯು ಬುನಾದಿಯಾಗಿದೆ. ಈ ಕಾಯ್ದೆಯು ರೂಪುಗೊಳ್ಳಲು ಮೋತಿಲಾಲ್ ನೆಹರು ಅವರ ಅಧ್ಯಕ್ಷತೆಯಲ್ಲಿ ತಯಾರಾದ 1928ರ ವರದಿಯು ಮುಖ್ಯವಾಗಿದೆ. ಸ್ವತಂತ್ರ ಭಾರತದ ಸಂವಿಧಾನದ ಬಹುತೇಕ ಅಂಶಗಳು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ. ಈ ಕಾಯ್ದೆಯು ಭಾರತಕ್ಕೆ ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚಿಸಲು ಅವಕಾಶ ನೀಡಿತು. ಇದು ಬ್ರಿಟಿಷ್ ಭಾರತ ಪ್ರಾಂತ್ಯಗಳಿಗೆ ಮಾತ್ರ ಅನ್ವಯವಾಗದೇ ದೇಶಿಯ ಸಂಸ್ಥಾನಗಳಿಗೂ ಅನ್ವಯವಾಗುವ ಅಂಶಗಳನ್ನು ಒಳಗೊಂಡಿದ್ದಿತು.

ಈ ಕಾಯ್ದೆಯ ಪ್ರಮುಖ ಅಂಶಗಳು 1. ಬ್ರಿಟಿಷ್ ಪ್ರಾಂತ್ಯಗಳ, ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತ ಒಕ್ಕೂಟವನ್ನು ರಚಿಸಲು ಅವಕಾಶ ನೀಡಿತು.

2. ಕೇಂದ್ರದಲ್ಲಿ “ದ್ವಿ ಸರಕಾರ”ವನ್ನು (Dyarchy) ಸ್ಥಾಪಿಸಲಾಯಿತು.
3. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿತು.
4. ಪ್ರಾಂತ್ಯಗಳಲ್ಲಿ “ದ್ವಿ ಸರಕಾರ” ಪದ್ಧತಿಯನ್ನು ರದ್ದುಗೊಳಿಸಿ, ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಲಾಯಿತು.
5. ಭಾರತದಲ್ಲಿ “ಫೆಡರಲ್ ಕೋರ್ಟ್” ಸ್ಥಾಪನೆಗೆ ಅವಕಾಶ ನೀಡಲಾಯಿತು.

61) ಭಾರತದಲ್ಲಿರುವ ಉತ್ತರದ ಪರ್ವತದ ಬಗ್ಗೆ ಬರೆಯಿರಿ

ಉತ್ತರ:– ಭಾರತದ ಉತ್ತರದಲ್ಲಿರುವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಜಗತ್ತಿನಲ್ಲಿಯೇ ಅತಿ ಎತ್ತರವಾದ ಶಿಖರಗಳನ್ನು, ಆಳವಾದ ಕಣಿವೆಗಳನ್ನು, ಹಿಮನದಿ ಮುಂತಾದವುಗಳನ್ನು ಹೊಂದಿದೆ. ಹಿಮಾಲಯ ಪರ್ವತ ಶ್ರೇಣಿಯು ಪಾಮಿರ್ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ಅರುಣಾಚಲದವರೆಗೆ ಸುಮಾರು 2500 ಕಿಮೀ ಉದ್ದವಾಗಿ ಹಬ್ಬಿದೆ. ಇದು ಮಡಿಕೆ ಪರ್ವತವಾಗಿದ್ದು, ಮೂರು ಪ್ರಮುಖ ಶ್ರೇಣಿಗಳನ್ನು ಒಳಗೊಂಡಿದೆ. ಇವುಗಳೆಂದರೆ

ಅ) ಶಿವಾಲಿಕ್ ಶ್ರೇಣಿ (ಹಿಮಾಲಯದ ಪಾದ ಬೆಟ್ಟಗಳು),
ಬ) ಹಿಮಾಚಲ (ಮಧ್ಯ ಹಿಮಾಲಯ),
ಕ) ಮಹಾಹಿಮಾಲಯ (ಹಿಮಾದ್ರಿ)

62) ಚಾಲ್ತಿ ಖಾತೆ ಕುರಿತು ಬರೆಯಿರಿ

ಉತ್ತರ: ಈ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. ಇಲ್ಲಿ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ (Contra) ವ್ಯವಹಾರದ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯ, ಹಣವನ್ನು ದಿನದಲ್ಲಿ ಎಷ್ಟು ಬಾರಿಯಾದರೂ ತೆಗೆಯಬಹುದು ಹಾಗೂ ಎಷ್ಟು ಬಾರಿಯಾದರೂ ಖಾತೆಗೆ ತುಂಬಬಹುದು, ಈ ಖಾತೆಯಲ್ಲಿರುವ ಹಣಕ್ಕೆ ಬಡ್ಡಿಯನ್ನು ಕೊಡುವುದಿಲ್ಲ. ಆದರೆ ಸೇವೆಗೆ ಸೇವಾ ಶುಲ್ಕವನ್ನು ವಸೂಲು ಮಾಡಲಾಗುತ್ತದೆ.

63) ಪ್ಲಾಸಿ ಕದನದ ಪರಿಣಾಮಗಳೇನು?

ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

64) ಹಸಿರು ಕ್ರಾಂತಿ ಎಂದರೇನು?

ಉತ್ತರ:–. 1967–70ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು ‘ಹಸಿರು ಕ್ರಾಂತಿ’ ಎಂದು ಗುರುತಿಸಲಾಗುತ್ತಿದೆ. 1967ರಲ್ಲಿ 74 ದಶಲಕ್ಷ ಟನ್ನುಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯು 1970ರ ವೇಳೆಗೆ 108 ದಶಲಕ್ಷ ಟನ್‌ಗಳಿಗೆ ಹೆಚ್ಚಿತ್ತು. ಕೇವಲ 3 ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಅಗಾಧ ಪ್ರಮಾಣದಲ್ಲಿ ಹೆಚ್ಚಳವಾಯಿತು. ಇದು ಹಸಿರು ಬೆಳೆಗಳಲ್ಲಾದ ಪ್ರಗತಿಯಾದುದರಿಂದ ಇದಕ್ಕೆ ಹಸಿರು ಕ್ರಾಂತಿ ಎಂದು ಹೆಸರಿಸಲಾಯಿತು.’.

54) ಮಣ್ಣಿನ ಸವೆತದ ಕೆಟ್ಟ ಪರಿಣಾಮಗಳು ಯಾವುವು?

ಉತ್ತರ:– ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ,

1) ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.
2) ನದಿಗಳಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.
3) ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ಅವುಗಳಲ್ಲಿ ನೀರು ಸಂಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ.
4) ಭೂಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.

ಭಾರತವು ವ್ಯವಸಾಯ ಪ್ರಧಾನವಾದ ರಾಷ್ಟ್ರ. ಇದರಿಂದ ಭೂ ಸವೆತ ವ್ಯವಸಾಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದು. ಆದುದರಿಂದ ಫಲವತ್ತತೆ ಹಾಗೂ ಉತ್ಪಾದನೆಯನ್ನು ಕಾಪಾಡಲು ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ.

65) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?

ಉತ್ತರ:– ಸಹಾಯಕ ಸೈನ್ಯ ಪದ್ಧತಿಯ ಪ್ರಕಾರ

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.

ಈ ಮೊದಲಾದ ಷರತ್ತನ್ನು ಬ್ರಿಟಿಷರು ಭಾರತೀಯ ರಾಜರ ಮೇಲೆ ಹಾಕುವ ಮೂಲಕ ಭಾರತೀಯ ಸಂಸ್ಥಾನಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡರು

(ಮುಂದುವರಿಯುವುದು)

ಪಿಯುಸಿ/ ಸಿಇಟಿ ಪರೀಕ್ಷೆ ದಿಕ್ಸೂಚಿ

MATHS

PUC : CET

MATHEMATICS

MULTIPLE CHOICE QUESTIONS

9). If 31) $3 + 5 + 7 + \ldots\ldots$ to n term is –

(A) $n(n+2)$ (B) $n(n-2)$
(C) n^2 (D) $(n+1)^2$

Answer: (a)

$3 + 5 + 7 + \ldots\ldots\ldots + n$

$(a = 3, d = 2)$

$S_n = (n/2)[2a + (n-1)d]$
$= (n/2)[2 * 3 + (n-1)2]$
$= (n/2)(6 + 2n - 2)$
$= (n/2)(4 + 2n)$
$= n(n+2)$

10) The real value of 'α' for which 1 - i sin α / 1 + 2 isin α is purely real is:

(A) $(n+1)\pi/2, n \in N$
(B) $(2n+1)\pi/2, n \in N$
(C) $n\pi, n \in N$
(D) $(2n-1)\pi/2, n \in N$

Ans:- (C) $n\pi, n \in N$

11) If $y = 2x^{3x}$, than $\frac{y}{dx}$ at $x = 1$ is

(A) 2 (B) 6
(C) 3 (D) 1

Ans. B

Sol.

$\log y = \log(2.x^{3x})$
$= \log 2 + 3x \log x$

$\frac{1}{y}\frac{dy}{dx} = 3\left[x\frac{1}{x} + \log x\right]$

$\frac{dy}{dx} = 2x^{3x}.3(1 + \log x)$

$\frac{dy}{dx}_{x=1} = 6$

12) **For the function** $f(x) = x^3 - 6x^2 + 12x - 3$; **x=2 is**

(A) a point of minimum
(B) a point of inflexion
(C) not a critical point
(D) a point of maximum

Ans. B

13) A and B are two sets having 3 and 6 elements respectively. Consider the following statements.
Statement (I): Minimum number of elements in AUB is 3
Statement (II): Maximum number of elements in AB is 3

Which of the following is correct?

(A) Statement (I) is true, statement (II) is false
(B) Statement (1) is false, statement (II) is true
(C) Both statements (1) and (II) are true
(D) Both statements (I) and (II) are false

Ans. B

Soln:-

$|A| = 3$
$|B| = 6$
$|A \cup B| = |A| + |B| - |A \cap B|$
$\min|A \cup B| = |A| + |B| - \max|A \cap B|$
$= 3 + 6 - 3 = 6$
$|A \cap B| = |A| + |B| - |A \cup B|$
$\max|A \cap B| = |A| + |B| - \min|A \cup B|$
$= 3 + 6 - 6 = 3$

14) If $\tan(x+y) = 33$ **and** $x = \tan^{-1} 3$ **then y is**

(A) $\frac{3}{10}$ (B) $\frac{33}{10}$
(C) $\frac{1}{3}$ (D) $\tan^{-1}\frac{3}{10}$

Ans : (D) $\tan^{-1}\frac{3}{10}$

Exp ln : $-\tan(x+y) = \frac{\tan x + \tan y}{1 - \tan x \tan y}$

$33 = \frac{3 + \tan y}{1 - 3\tan y}$ $\therefore 33(1 - 3\tan y) = 3 + \tan y$

$33 - 99\tan y = 3 + \tan y$

$30 = 100\tan y$ $\therefore$ $\tan y = \frac{30}{100} = \frac{3}{10}$

$\therefore y = \tan^{-1}\frac{3}{10}$

15) The mean deviation about the mean for the date 4, 7, 8, 9, 10, 12, 13, 17 is....................

(A) 10 **(B) 3**
(C) 8.5 **(D) 4.03**

Ans. B

Sol.

Mean derivation about mean $\mu = \frac{4+7+8+9+10+12+13+17}{8}$

$\frac{1}{N}\sum(xi - \mu)$ $= \frac{80}{8} = 10$

$= \frac{1}{8}(6+3+2+1+2+3+7)$ $= \frac{24}{8} = 3$

16) $\lim_{x \to \infty}\left(\sqrt{a^2x^2 + bx + x} - ax\right) = \ldots\ldots\ldots\ldots\ldots\ldots$

(A) $\frac{b}{2a}$ (B) $\frac{b}{a}$
(C) $\frac{b+1}{2a}$. (D) $\frac{2b}{a}$

Ans : C

Exp ln : –

$$\lim_{x \to \infty}\left[\left(\sqrt{a^2x^2 + bx + x} - ax\right) \times \frac{\sqrt{a^2x^2 + bx + x} + ax}{\sqrt{a^2x^2 + bx + x} + ax}\right]$$

$$\lim_{x \to \infty}\frac{a^2x^2 + bx + x - a^2x^2}{\sqrt{a^2x^2 + bx + x} + ax} = \lim_{x \to \infty}\frac{x(b+1)}{\sqrt{x^2\left(x^2 + \frac{b}{x} + \frac{1}{x}\right)} + ax}$$

$$\lim_{x \to \infty}\frac{x(b+1)}{x\left\{\sqrt{a^2 + \frac{b}{x} + \frac{1}{x}} + a\right\}} \lim_{x \to \infty}\frac{b+1}{\sqrt{a^2 + \frac{b}{x} + \frac{1}{x^2}} + a} = \frac{b+1}{2a}.$$

13) How many numbers greater than 10,00,000 be formed from 2, 3, 0, 3, 4, 2, 3?

(A) 420 (B) 360
(C) 400 (D) 300

Ans: (B) 360

Expln:- Any number greater than 10,00,000 will contain all seven digits.

We have to arrange 7 digits out of which 2 occurs twice and 3 occurs thrice. The rest are distinct.

(Contd…..)

ಉದ್ಯೋಗ ಕಿರಣ

ಬೆಂಗಳೂರು ಕೇಂದ್ರಿತ ಇಂಟರ್ನ್‌ಶಿಪ್

ಕ್ಯೂಬ್‌ಲೆಲೊ.ಕಾಂ (Cubelelo.com) ಗ್ರಾಫಿಕ್ ಡಿಸೈನ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಅಡೋಬ್ ಇಲಸ್ಟ್ರೇಟರ್, ಅಡೋಬ್ Photozdet687shop, ಕ್ಯಾನ್ವ ಮತ್ತು ಕೋರಲ್‌ಡ್ರಾ ಬಗ್ಗೆ ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ಮಾರ್ಚ್ 27ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ₹8,000–₹10,000. ಸಂಪರ್ಕ: https://tinyurl.com/3zxykrpx.

ಬ್ರ್ಯಾಂಡ್‌ಶಾರ್ಕ್ ಡಿಜಿಟಲ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳು ಡಿಜಿಟಲ್ ಮಾರ್ಕೆಟಿಂಗ್, ಫೇಸ್‌ಬುಕ್ ಜಾಹೀರಾತು, ಫೇಸ್‌ಬುಕ್ ಮಾರ್ಕೆಟಿಂಗ್, ಗೂಗಲ್ ಆ್ಯಡ್‌ವರ್ಡ್ಸ್, ಇನ್‌ಸ್ಟಾಗ್ರಾಂ ಮಾರ್ಕೆಟಿಂಗ್, ಪರ್ಫಾರ್ಮೆನ್ಸ್ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಮಾರ್ಕೆಟಿಂಗ್ , ಸರ್ಚ್ ಎಂಜಿನ್ ಆಪ್ಟಿಮೈಸೇಷನ್, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಅರಿತಿರಬೇಕು. ಮಾರ್ಚ್ 26ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹10,000. ಸಂಪರ್ಕ: https://shorturl.at/Q034Q.

ಅಭಿಮತದ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಮಾತಿಗಿಂತಲೂ ಕೃತಿಗೆ ಹೆಚ್ಚು ಬೆಲೆ ಇದೆ. ಆಡಿ ತೋರಿಸುವುದಕ್ಕಿಂತ ಮಾಡಿ ತೋರಿಸುವುದು ಹೆಚ್ಚು ಉಚಿತವಾದುದು.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ಎನ್‌ಸಿಇಆರ್‌ಟಿ ಪಠ್ಯ: ವಿಮರ್ಶೆಯೋ? ನ್ಯಾಯಾಂಗ ನಿಂದನೆ ಪಿತೂರಿಯೋ?

ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಉಲ್ಲೇಖಗಳನ್ನು ಹೊಂದಿದ್ದ ಎಂಟನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿನ ಪಠ್ಯದ ಬಗ್ಗೆ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಕಟು ಟೀಕೆ, ಸಾಂಸ್ಥಿಕ ಸಮಗ್ರತೆಯಲ್ಲಿ ಯಾವುದೇ ಕುಸಿತ ಆಗದಿರುವುದನ್ನು ನಿರಾಕರಿಸುವ ಸಂಕೇತದಂತಿದೆ. ರಾಷ್ಟ್ರೀಯ ಶಿಕ್ಷಣ ಸಂಶೋಧನ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಪಠ್ಯಪುಸ್ತಕದಲ್ಲಿನ ಅಧ್ಯಾಯವೊಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಅವರನ್ನು ಕೆರಳಿಸಿದ್ದು, ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಕಟುವಾದ ಎಚ್ಚರಿಕೆ ನೀಡಲು ಕಾರಣವಾಗಿದೆ. 'ನ್ಯಾಯಾಂಗ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ಇರುವ ಭ್ರಷ್ಟಾಚಾರ'ದ ಬಗ್ಗೆ ಹಾಗೂ ನ್ಯಾಯಾಲಯಗಳಲ್ಲಿ ಪ್ರಕರಣಗಳು ದೊಡ್ಡ ಪ್ರಮಾಣದಲ್ಲಿ ಬಾಕಿ ಉಳಿದಿರುವ ಬಗ್ಗೆ ಆ ಪಠ್ಯ ಚರ್ಚಿಸಿತ್ತು. ಆ ವಿವರಗಳನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಿರುವ ಸಿಜೆಐ, ಪಠ್ಯಪುಸ್ತಕಗಳನ್ನು ತಕ್ಷಣವೇ ಹಿಂಪಡೆಯುವಂತೆ ಆದೇಶಿಸಿದ್ದಾರೆ. ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಕುರಿತು ಮಾಹಿತಿಗಳನ್ನು ಒಳಗೊಂಡಿದ್ದ ಅಧ್ಯಾಯವು ನ್ಯಾಯಾಂಗದ ವಿರುದ್ಧ ನಡೆದ ಪಿತೂರಿಯ ರೂಪದಲ್ಲಿ ಕೋರ್ಟ್‌ಗೆ ಕಾಣಿಸಿರುವುದು, ಈ ಪ್ರಕರಣವನ್ನು ಹಲವು ಆಯಾಮಗಳಲ್ಲಿ ನೋಡಲು ಒತ್ತಾಯಿಸುವಂತಿದೆ. ವಿವಾದಕ್ಕೆ ಕಾರಣವಾದ ಪಠ್ಯವನ್ನು ಪ್ರಕಟಿಸಿದ್ದಕ್ಕಾಗಿ ಎನ್‌ಸಿಇಆರ್‌ಟಿ ಕ್ಷಮೆ ಕೋರಿದೆ ಹಾಗೂ ಪಠ್ಯಪುಸ್ತಕದ ಎಲ್ಲ ಪ್ರತಿಗಳನ್ನು ಹಿಂತೆಗೆದುಕೊಂಡಿರುವುದಾಗಿ ಹೇಳಿದೆ. ವಿವಾದಾಸ್ಪದ ವಿಷಯಗಳನ್ನು ಪಠ್ಯಕ್ಕೆ ಸೇರಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಹೇಳಿದ್ದಾರೆ.



'ಎನ್‌ಸಿಇಆರ್‌ಟಿ' ಪಠ್ಯಕ್ಕೆ ಸಂಬಂಧಿಸಿದ ಪ್ರಕರಣವು, ನ್ಯಾಯಾಂಗದ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಚರ್ಚೆಗೆ ಇರಬಹುದಾದ ಮಿತಿಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಎನ್‌ಸಿಇಆರ್‌ಟಿ ಪಠ್ಯದ ಬಗೆಗಿನ ಸುಪ್ರೀಂ ಕೋರ್ಟ್ ಅಸಮ್ಮತಿಯನ್ನು 'ಆಯ್ದ ಪ್ರತಿಕ್ರಿಯೆ' ರೂಪದಲ್ಲಿ ನೋಡಬಹುದಾಗಿದೆ; ಅತಿರೇಕದ ಪ್ರತಿಕ್ರಿಯೆಯಾಗಿಯೂ ಹಾಗೂ ಸೆನ್ಸಾರ್‌ಶಿಪ್‌ಗೆ ಅವಕಾಶ ಕಲ್ಪಿಸುವ ಕ್ರಮವಾಗಿಯೂ ಅದು ಕಾಣಿಸುವಂತಿದೆ. ನ್ಯಾಯಾಂಗದಲ್ಲಿನ ಭ್ರಷ್ಟಾಚಾರವು ಪ್ರಸ್ತುತ ಸಾರ್ವಜನಿಕ ಚರ್ಚೆಯ ವಿಷಯವಾಗಿದೆ. '....ವಿಷಾದದ ಸಂಗತಿಯೆಂದರೆ, ನ್ಯಾಯಾಂಗದಲ್ಲಿಯೂ ಭ್ರಷ್ಟಾಚಾರ ಮತ್ತು ದುರ್ವ್ಯವಹಾರದ ನಿದರ್ಶನಗಳು ಕಾಣಿಸಿಕೊಂಡಿವೆ... ಇದರಿಂದಾಗಿ ಇಡೀ ವ್ಯವಸ್ಥೆಯ ವಿಶ್ವಾಸಾರ್ಹತೆ ಕುಸಿಯುವ ಸಾಧ್ಯತೆ ಇದೆ...' ಎನ್ನುವ ನಿವೃತ್ತ ಸಿಜೆಐ ಬಿ.ಆರ್. ಗವಾಯಿ ಅವರ ಹೇಳಿಕೆಯನ್ನು ಎನ್‌ಸಿಇಆರ್‌ಟಿ ಪಠ್ಯ ಒಳಗೊಂಡಿತ್ತು. ಕೆಲವು ನ್ಯಾಯಮೂರ್ತಿಗಳ ಬಗೆಗಿನ ಆರೋಪಗಳೂ ಸಾರ್ವಜನಿಕ ವಲಯದಲ್ಲಿವೆ. ಈ ಅಭಿಪ್ರಾಯಗಳೆಲ್ಲವೂ ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ಅಗತ್ಯವೇ ಎನ್ನುವುದು ಚರ್ಚಾರ್ಹ ವಿಷಯ. ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆಯಂತಹ ಮಾಹಿತಿಯ ಮೂಲಕ ಕಿರಿಯ ವಯಸ್ಸಿನ ವಿದ್ಯಾರ್ಥಿಗಳು ಪೂರ್ವಗ್ರಹ ಪೀಡಿತರಾಗುವ ಹಾಗೂ ಅಭಿಪ್ರಾಯಗಳನ್ನೇ ಸತ್ಯವೆಂದು ಭಾವಿಸುವ ಸಾಧ್ಯತೆಯಿದೆ. ಆದರೂ, ಎನ್‌ಸಿಇಆರ್‌ಟಿ ಪಠ್ಯವನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸುವುದು ಅತಿರೇಕವೇ ಸರಿ.

ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ರೂಪಿಸಿದರೂ, ಮಂಡಳಿಯು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುವುದರಿಂದ ಪಠ್ಯದಲ್ಲಿನ ವಿಷಯಗಳ ಹೊಣೆಗಾರಿಕೆ ಸರ್ಕಾರದ್ದೂ ಆಗಿದೆ. ಎನ್‌ಸಿಇಆರ್‌ಟಿ ಹಾಗೂ ಸಿಬಿಎಸ್‌ಇ, ಕೇಂದ್ರ ಸರ್ಕಾರದ ರಾಜಕೀಯ ಕಾರ್ಯಸೂಚಿಗೆ ತಕ್ಕನಾಗಿ ಪಠ್ಯಗಳನ್ನು ರೂಪಿಸಿರುವ ಉದಾಹರಣೆಗಳೂ ಇವೆ. ಇತಿಹಾಸದ ಕೆಲವು ಭಾಗಗಳನ್ನು ತೆಗೆದುಹಾಕುವ ಅಥವಾ ಸೆನ್ಸಾರ್ ಮಾಡುವ, ಕೆಲವು ವಿಷಯಗಳನ್ನು ವಿಜೃಂಭಿಸುವ ಹಾಗೂ ಕೆಲವರನ್ನು ಕೇಡಿನ ರೂಪದಲ್ಲಿ ಚಿತ್ರಿಸುವ ಕೆಲಸವನ್ನೂ ಮಾಡಿವೆ. ಈ ಹಿನ್ನೆಲೆಯಲ್ಲಿ, ಪಠ್ಯದಲ್ಲಿನ ವಿಷಯವನ್ನು ನ್ಯಾಯಾಂಗದ ಬಗೆಗಿನ ಸರ್ಕಾರದ ವಿಮರ್ಶೆಯಂತೆಯೂ ನೋಡಬಹುದಾಗಿದೆ. ಇದೇ ರೀತಿಯ ಅಥವಾ ಇನ್ನೂ ಹಾನಿ ಮಾಡಬಹುದಾದ ಇತರ ವಿಷಯಗಳಿಗೆ ಸಂಬಂಧಿಸಿದಂತೆ ಕೋರ್ಟ್ ಇಷ್ಟೇ ತೀವ್ರವಾಗಿ ಪ್ರತಿಕ್ರಿಯಿಸಿಲ್ಲ ಎನ್ನುವುದನ್ನೂ ಗಮನಿಸಬೇಕು. ಈ ಪ್ರಕರಣದ ಹಿನ್ನೆಲೆಯಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ ಪಾಲುದಾರರಾಗಿರುವ ಜನರು ಕೇಳಬೇಕಾದ ನಿರ್ಣಾಯಕ ಪ್ರಶ್ನೆಯೊಂದಿದೆ: ನ್ಯಾಯಾಂಗದಲ್ಲಿ ಇರಬಹುದಾದ ಭ್ರಷ್ಟಾಚಾರದ ಬಗೆಗಿನ ವಿಶ್ವಾಸಾರ್ಹ ಕಾಳಜಿಗೆ ನ್ಯಾಯಾಲಯದ ಪ್ರತಿಕ್ರಿಯೆಯು ಅಸಹಿಷ್ಣುತೆಯನ್ನು ತೋರಿಸುತ್ತದೆಯೆ?

ನಷ್ಟಕ್ಕೆ ಹೊಣೆ ಯಾರು?

ಭಾರತವು ನೇರವಾಗಿ ರಷ್ಯಾದೊಂದಿಗೆ ತೈಲ ಖರೀದಿಸುವಾಗ ರಿಯಾಯಿತಿ ಇತ್ತು. ಈಗ ಅಮೆರಿಕದ ಒಪ್ಪಿಗೆಯ ಮೇಲೆ ಖರೀದಿಸುವಾಗ ರಿಯಾಯಿತಿ ಇಲ್ಲ. ಈ ನಷ್ಟಕ್ಕೆ ಕಾರಣರ್‍ಯಾರು?

ವಿಕಾಸ್ ಆರ್. ಮೌರ್ಯ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕೇಂದ್ರ ಸರ್ಕಾರ ₹215 ಲಕ್ಷ ಕೋಟಿ ಸಾಲ ಮಾಡಿದೆ. ಜನರಿಗೆ ಹೇಳಿಕೊಳ್ಳುವಂತಹ ಒಂದೊಳ್ಳೆ ಯೋಜನೆಯನ್ನೂ ನೀಡಿಲ್ಲ. ಹಾಗಿದ್ದ ಮೇಲೆ ಇಷ್ಟು ಹಣವನ್ನು ಯಾರ ಜೇಬಿಗೆ ಸುರಿಯಲಾಗಿದೆ?

ಡಾ. ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 9-3-2001

- **ಪಾಂಡವಪುರ ಸಕ್ಕರೆ ಕಾರ್ಖಾನೆಗೆ ಬೆಂಕಿ: ರೂ. 5 ಕೋಟಿ ನಷ್ಟ**

ಮಂಡ್ಯ, ಮಾರ್ಚ್ 8– ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ಬುಧವಾರ ರಾತ್ರಿ ಆಕಸ್ಮಿಕ ಬೆಂಕಿ ಅನಾಹುತ ಸಂಭವಿಸಿ ಸುಮಾರು ರೂ. 5 ಕೋಟಿ ನಷ್ಟ ಉಂಟಾಗಿದೆ.

ಕಾರ್ಖಾನೆಯ ಮೊಗಸಾಲೆಯಲ್ಲಿದ್ದ (ಡ್ರೈಯರ್ ಹಾಲ್) ಸಕ್ಕರೆ ಚೀಲಗಳಿಗೆ ರಾತ್ರಿ 8ರಿಂದ 8.30ರಲ್ಲಿ ಬೆಂಕಿ ಬಿದ್ದಿದೆ. ಇದರಿಂದ ರೂ. 4 ಕೋಟಿ 75 ಲಕ್ಷ ಮೌಲ್ಯದ 34,327 ಸಕ್ಕರೆ ಚೀಲಗಳು ಮತ್ತು ಮೂರ್ನಾಲ್ಕು ಕಡೆ ಗೋಡೆ ಕುಸಿದು ರೂ. 25 ಲಕ್ಷದಷ್ಟು ನಷ್ಟ ಸಂಭವಿಸಿದೆ.

ಇದಲ್ಲದೆ, ವಿದ್ಯುತ್ ಕೇಬಲ್‌ಗಳು ಹಾನಿಗೆ ಒಳಗಾಗಿವೆ. ಕಾರ್ಖಾನೆ ಯಂತ್ರೋಪಕರಣಗಳಿಗೆ ಯಾವುದೇ ಹಾನಿ ಉಂಟಾಗಿಲ್ಲ.

- **ಸ್ಥಳೀಯ ಸಂಸ್ಥೆ ಚುನಾವಣೆ ಏಪ್ರಿಲ್ 19ರ ಗಡುವು**

ಬೆಂಗಳೂರು, ಮಾರ್ಚ್ 8– ರಾಜ್ಯದ ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣಾ ಪ್ರಕ್ರಿಯೆಯನ್ನು ಏಪ್ರಿಲ್ 19ರ ಒಳಗೆ ಪೂರ್ಣಗೊಳಿಸುವಂತೆ ಹೈಕೋರ್ಟ್ ಇಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ವಾರ್ಡ್‌ಗಳಿಗೆ ಮೀಸಲಾತಿ ಕುರಿತಂತೆ ಮಾರ್ಚ್ 13ರ ಒಳಗೆ ಅಧಿಸೂಚನೆ ಹೊರಡಿಸಬೇಕು ಮತ್ತು ಈ ಸಂಬಂಧ ತೆಗೆದುಕೊಂಡ ಕ್ರಮದ ಬಗೆಗೆ ಮರುದಿನವೇ (ಮಾರ್ಚ್ 14) ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಜಿ.ಸಿ. ಭರೂಕ ಮತ್ತು ಶ್ರೀಧರರಾವ್ ಅವರಿದ್ದ ವಿಭಾಗೀಯ ಪೀಠ ಆದೇಶಿಸಿತು.

75 ವರ್ಷಗಳ ಹಿಂದೆ

ಶುಕ್ರವಾರ, 9-3-1951

- **ಜನರ ಮೆಚ್ಚಿನ ತಿಂಡಿಗಳಾದ ಇಡ್ಲಿ–ದೋಸೆ ಮೇಲೆ ಪ್ರತಿಬಂಧ**

ಬೆಂಗಳೂರು, ಮಾರ್ಚ್ 8– ದಕ್ಷಿಣ ಭಾರತೀಯರ ಹಾಗೂ ಮೈಸೂರಿನ ಪ್ರಜೆಗಳ ನೆಚ್ಚಿನಾಸೆಯ ತಿಂಡಿಗಳಾದ ಇಡ್ಲಿ ಮತ್ತು ದೋಸೆಗಳು ಇಂದಿನಿಂದ ದೊರೆಯಲಾರವು. ಮೈಸೂರು ಸರ್ಕಾರದವರು ಗುರುವಾರ ಆಜ್ಞೆಯೊಂದನ್ನು ಹೊರಡಿಸಿ ಹೋಟೆಲುಗಳು ಹಾಗೂ ಇತರ ಫಲಹಾರ ಮಂದಿರಗಳಲ್ಲಿ ಇಡ್ಲಿ, ದೋಸೆಗಳನ್ನು ತಯಾರಿಸದಂತೆ ನಿರ್ಬಂಧಿಸಿದ್ದಾರೆ.

ಸರ್ಕಾರದ ಈ ಆಜ್ಞೆ ಸಂಸ್ಥಾನದಲ್ಲಿ ತಕ್ಷಣ ಜಾರಿಗೆ ಬಂದಿದೆ. ಮೈಸೂರು ಸರ್ಕಾರದ 1951ರ ಈ ಆಹಾರ ಆಜ್ಞೆಯಂತೆ ಯಾವ ಫಲಹಾರ ಮಂದಿರಗಳೂ ಕೂಡ ಮಾರಾಟಕ್ಕಾಗಿ ಅಕ್ಕಿ ಅಥವಾ ಹಾಲನ್ನು ಉಪಯೋಗಿಸಿದ ತಿಂಡಿಗಳನ್ನು ತಯಾರು ಮಾಡಕೂಡದು ಮತ್ತು ಇಡ್ಲಿ, ದೋಸೆಗಳನ್ನು ತಯಾರಿಸಕೂಡದೆಂದೂ ಅಥವಾ ಅಕ್ಕಿಯನ್ನು ಉಪಯೋಗಿಸಿದ ಅದೇ ರೀತಿಯ ಇತರ ಪದಾರ್ಥಗಳನ್ನು ಮಾಡಕೂಡದೆಂದೂ ತಿಳಿಸಲಾಗಿದೆ.

ನೈತಿಕತೆ ಎಂಬ ಗಾಳಿ–ಬೆಳಕು

ವಿಶ್ಲೇಷಣೆ

ಕಿರಣ್ ಎಂ. ಗಾಜನೂರು

ನಮ್ಮ ಸಮಾಜ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೊಸ ಗಾಳಿ–ಬೆಳಕು ಕಾಣುವುದಕ್ಕೆ ನೈತಿಕತೆಯ ಸ್ಪರ್ಶ ಅಗತ್ಯ. ಅಂಬೇಡ್ಕರ್ ಪ್ರತಿಪಾದಿಸಿದ 'ನೈತಿಕ ರಾಜಕಾರಣ' ಒಂದು ಮೌಲ್ಯವಷ್ಟೇ ಅಲ್ಲ, ಜೀವನವಿಧಾನವೂ ಹೌದು. ನೈತಿಕತೆಯ ನಂಟಿನಿಂದ ರಾಜಕಾರಣ ಹಾಗೂ ಧರ್ಮ ಮಾನವೀಯಗೊಳ್ಳುವುದು.

ಸಮಾಜದಲ್ಲಿ ಹಾಗೂ ರಾಜಕಾರಣದಲ್ಲಿ ನೈತಿಕತೆಯ ಪಾತ್ರ ಬಹಳ ಮುಖ್ಯವಾದುದು ಎನ್ನುವುದು ಅಂಬೇಡ್ಕರ್ ಅವರ ನಂಬಿಕೆಯಾಗಿತ್ತು. ಈ ನೈತಿಕತೆ ದುರ್ಲಭವಾದುದು ಎನ್ನುವುದಕ್ಕೂ ಅಂಬೇಡ್ಕರ್ ಅವರ ಬದುಕಿನ ಅನುಭವಗಳೇ ನಿದರ್ಶನದಂತಿದ್ದವು. ಅವರು ತಮ್ಮ ಬಾಲ್ಯದ ಅನುಭವವೊಂದನ್ನು ಹೀಗೆ ದಾಖಲಿಸಿದ್ದಾರೆ:

"ಅದಾಗಲೇ ನನ್ನ ತಾಯಿ ತೀರಿಹೋಗಿದ್ದರು. ನಮ್ಮ ತಂದೆ ಕೋರೆಗಾಂವ್‌ನಲ್ಲಿ ಕೆಲಸ ಮಾಡುತ್ತಿದ್ದರು. ನಾವು ನಾಲ್ಕು ಜನ ಅಣ್ಣತಮ್ಮಂದಿರು ಸತಾರದ ಚಿಕ್ಕಮ್ಮನ ಮನೆಯಲ್ಲಿ ಇದ್ದೆವು. ಬೇಸಿಗೆ ರಜೆಗಾಗಿ ನಮ್ಮ ತಂದೆ ಕೋರೆಗಾಂವ್‌ಗೆ ಬರಲು ನಮಗೆ ಪತ್ರ ಬರೆದಿದ್ದರು. ನಾವು ಖುಷಿಯಿಂದಲೇ ಕೋರೆಗಾಂವ್‌ಗೆ ಹೊರಟಿದ್ದೆವು. ಚಿಕ್ಕಮ್ಮ ನಮ್ಮ ಪ್ರಯಾಣಕ್ಕೆ ಬಗೆ ಬಗೆಯ ತಿಂಡಿ ತಿನಿಸುಗಳನ್ನು ಮಾಡಿಕೊಟ್ಟಿದ್ದರು. ನಾವು ಬರುತ್ತಿರುವ ವಿಷಯವನ್ನು ಪತ್ರದ ಮೂಲಕ ತಂದೆಯವರಿಗೆ ತಿಳಿಸಿದ್ದರೂ, ಸಹಾಯಕನ ಮರೆವಿನಿಂದ ಅದು ನಮ್ಮ ತಂದೆಯ ಗಮನಕ್ಕೆ ಬಂದಿರಲಿಲ್ಲ. ಹಾಗಾಗಿ ಅವರು ಸ್ಟೇಷನ್ನಿಗೆ ಯಾರನ್ನೂ ಕಳಿಸಿರಲಿಲ್ಲ.

ನಮ್ಮ ರೈಲು ಮಾಸೂರು ತಲಪಿತ್ತು. ಅಲ್ಲಿಂದ ಕೋರೆಗಾಂವ್ ತಲಪಬೇಕಿತ್ತು. ನಾವು ಮಹರ್ ಜಾತಿಗೆ ಸೇರಿದವರು ಎಂದು ತಿಳಿದ ಕಾರಣ ನಮ್ಮನ್ನು ಎತ್ತಿನ ಗಾಡಿ ಹತ್ತಿಸಲು ಯಾರೂ ಒಪ್ಪಲಿಲ್ಲ. ಕೊನೆಗೆ ಒಬ್ಬ ಗಾಡಿಯವನು 'ನೀವೇ ಗಾಡಿ ಓಡಿಸಬೇಕು ಮತ್ತು ಎರಡು ಪಟ್ಟು ಬಾಡಿಗೆ ನೀಡಬೇಕು' ಎಂಬ ಷರತ್ತಿನೊಂದಿಗೆ ನಮ್ಮನ್ನು ಗಾಡಿ ಹತ್ತಲು ಬಿಟ್ಟಿದ್ದ.

ದಾರಿ ಮಧ್ಯದಲ್ಲಿ ಗಾಡಿಯವನು 'ಇಲ್ಲಿ ನೀರಿದೆ, ಊಟ ಮಾಡಿಕೊಳ್ಳಿ' ಅಂದ. ಹೊಟ್ಟೆ ಹಸಿದಿದ್ದ ನಾವು ಖುಷಿಯಿಂದ ಊಟ ಬಿಚ್ಚಿಕೊಂಡು ತಿನ್ನೋಣ ಎಂದು ಆತ ತೋರಿಸಿದ ನೀರಿನ ಹೊಂಡ ನೋಡಿದರೆ, ಕೆಟ್ಟ ವಾಸನೆ ಬರುತ್ತಿತ್ತು. ಪ್ರಾಣಿಗಳ ಮಲ ಮೂತ್ರಗಳಿಂದ ತುಂಬಿದ್ದ ಆ ನೀರು–ಕುಡಿಯಲು ಬಿಡಿ, ಮುಟ್ಟಲೂ ಯೋಗ್ಯವಾಗಿರಲಿಲ್ಲ. ನಾವು ಹಸಿದ ಹೊಟ್ಟೆಯಲ್ಲಿ ಹಾಗೆಯೇ ಪ್ರಯಾಣ ಮುಂದುವರಿಸಿದೆವು.

ರಾತ್ರಿ ತಂಗುದಾಣವೊಂದನ್ನು ತಲಪಿದೆವು. ಅಲ್ಲಿನ ಅಧಿಕಾರಿಯ ಬಳಿ ನಾವು ಮುಸ್ಲಿಂ ಎಂದು ಪರಿಚಯಿಸಿಕೊಂಡು ಕುಡಿಯಲು ಸ್ವಲ್ಪ ನೀರು ಕೊಡಿ ಎಂದು ಕೇಳಿಕೊಂಡೆವು. 'ಇಲ್ಲಿ ನೀರಿಲ್ಲ, ಎಲ್ಲಾದರೂ ಹುಡುಕಿಕೊಳ್ಳಿ' ಎಂದಾತ ಗದರಿದ್ದ. ಚೀಲದ ತುಂಬಾ ತರಹೇವಾರಿ ತಿಂಡಿಗಳು ಇದ್ದಾಗಿಯೂ ಏನನ್ನೂ ತಿನ್ನದೇ ಹಾಗೆಯೇ ಹಸಿದ ಹೊಟ್ಟೆಯಲ್ಲಿ ನಾಲ್ಕು ಜನ ಮಲಗಬೇಕಾಯಿತು. ಆಗ ನನಗೆ ಬರೀ ಒಂಬತ್ತು ವರ್ಷ ವಯಸ್ಸು!"

ಮೇಲಿನ ಘಟನೆಯನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಮ್ಮ 'ವೀಸಾಗಾಗಿ ಕಾಯುತ್ತಾ' ಕೃತಿಯಲ್ಲಿ ದಾಖಲಿಸಿದ್ದಾರೆ. ತಂದೆ ಬಾರದೆ ಭಯಗೊಂಡ, ಹಸಿವಿನಿಂದ ಕಂಗೆಟ್ಟ ಒಂಬತ್ತು, ಹತ್ತು ವರ್ಷದ ಮಕ್ಕಳೊಂದಿಗೆ ನಾಗರಿಕರು ವರ್ತಿಸಿದ ರೀತಿಯನ್ನು ನೋಡಿ, ಹಿಂದೂ ಧರ್ಮದ ಜನರಿಗೆ ತಮ್ಮನ್ನು 'ಸಮಾಜ' ಎಂದು ಕರೆಸಿಕೊಳ್ಳಲು ಇರಬೇಕಾದ 'ಕನಿಷ್ಠ ನೈತಿಕ ಪ್ರಜ್ಞೆ'ಯೂ ಇಲ್ಲವಾಗಿದೆ ಎಂದು ಅಂಬೇಡ್ಕರ್ ವಾದಿಸುತ್ತಾರೆ. ಅದೇ ಕೃತಿಯಲ್ಲಿ ತಮ್ಮದೇ ಬದುಕಿನ ಹಲವು ಘಟನೆಗಳನ್ನು ನೆನಪಿಸಿಕೊಳ್ಳುತ್ತಾ, ಜಾತಿ ಮತ್ತು ಅಸಮಾನತೆ ಎನ್ನುವುದು ಹೇಗೆ ವ್ಯಕ್ತಿಗತ ಅಪಮಾನವನ್ನು ದಾಟಿ ಸಾಮಾಜಿಕ ಮತ್ತು ಸಾಂಸ್ಥಿಕ ರೂಪವನ್ನು ಧರಿಸಿಕೊಂಡು ದೌರ್ಜನ್ಯವನ್ನು, ಅಪಮಾನವನ್ನು ಮುಖ್ಯವಾಗಿ ಪವಿತ್ರ ಮತ್ತು ಅಪವಿತ್ರ ಎನ್ನುವ ಸಂಗತಿಗಳನ್ನು ಸಹಜವಾಗಿಸುತ್ತದೆ ಎನ್ನುವುದನ್ನೂ ವಿಶ್ಲೇಷಿಸಿದ್ದಾರೆ.

ಬಾಬಾ ಸಾಹೇಬರ ಒಟ್ಟು ರಾಜಕೀಯದ ಮೂಲ ಸಂಕಥನ ಸಾಮಾಜಿಕ ನೈತಿಕತೆಯನ್ನು ಆಧರಿಸಿದೆ. ಅಂದರೆ, ಯಾವುದೇ ಮನುಷ್ಯರ ಗುಂಪು ಸಮಾಜವಾಗಿ ರೂಪುಗೊಳ್ಳಬೇಕಾದರೆ ಅದಕ್ಕೊಂದು 'ನ್ಯಾಯಯುತ ನೈತಿಕ ಚೌಕಟ್ಟು' ಇರಬೇಕಾಗುತ್ತದೆ. ಆದರೆ, ಭಾರತದಲ್ಲಿ ಇಲ್ಲಿನ ಜನರು ಹೇಗೆ ಬದುಕಬೇಕು ಎನ್ನುವುದನ್ನು ನೈತಿಕತೆಯ ಬದಲು ಜಾತಿಯ ಚೌಕಟ್ಟು ನಿರ್ಧರಿಸುತ್ತಿದೆ.

ಹಿಂದೂ ಧರ್ಮದ ಹಿರಿಮೆ ಹಾಗೂ ಸದಾಶಯಗಳ ಬಗ್ಗೆ ಉತ್ಸಾಹದಿಂದ ಮಾತನಾಡುವವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ, ಸಮಾಜದ ಕಟು ವಾಸ್ತವ ಬೇರೆಯದ್ದೇ ಆಗಿದೆ. ಹಿಂದೂ ಧರ್ಮ ಅಥವಾ ಸಮಾಜದಲ್ಲಿ ವ್ಯಕ್ತಿಯ ವೈಯಕ್ತಿಕ ಆಯ್ಕೆಗೆ ಅವಕಾಶಗಳು ಸೀಮಿತವಾಗಿವೆ. ವ್ಯಕ್ತಿಯ ಸಾಮರ್ಥ್ಯ ಮತ್ತು ಸಾಮಾಜಿಕ ಭ್ರಾತೃತ್ವವನ್ನು ವರ್ತಮಾನದಲ್ಲಿ ನಾವು ಕಾಣುತ್ತಿರುವ ಧರ್ಮ ಅಥವಾ ಧರ್ಮನಿಷ್ಠರು ನಿರಾಕರಿಸುತ್ತಿರುವ ಘಟನೆಗಳನ್ನು ನೋಡಿದರೆ, ಸಮಾಜ ನ್ಯಾಯಯುತವಾಗಿರಲು ಸಾಧ್ಯವಿದೆಯೆ ಎನ್ನುವ ಪ್ರಶ್ನೆ ಹುಟ್ಟುತ್ತದೆ. ಇಲ್ಲಿ ಎಲ್ಲರಿಗೂ ಅನ್ವಯಿಸುವ ಸಮಾನ ನೈತಿಕ ಕಾನೂನೇ ಇಲ್ಲವಾಗಿದೆ ಹಾಗೂ ಇಲ್ಲಿ ನೈತಿಕತೆ ಎನ್ನುವುದು ಜಾತಿಯಿಂದ ಜಾತಿಗೆ ಬದಲಾಗುತ್ತಿರುತ್ತದೆ. ಮೂಲತಃ ಈ ವ್ಯವಸ್ಥೆಯೇ ಹೀಗೆ ಇರುವುದರಿಂದ, ಪ್ರಜಾಪ್ರಭುತ್ವ ರಾಜಕಾರಣದಲ್ಲಿ ಇರಬೇಕಾದ 'ಸಾಮಾನ್ಯ ನಾಗರಿಕ ನೈತಿಕತೆ'ಯನ್ನು ಜಾತಿವ್ಯವಸ್ಥೆ ನಾಶ ಮಾಡಿದೆ.

ಜಾತೀಯತೆಯನ್ನು ಪೋಷಿಸುವ ಸಂಕುಚಿತ ಧರ್ಮವನ್ನು ಇಟ್ಟುಕೊಂಡು ನಾವು ಒಂದು ಮಾನವೀಯ ಸಮಾಜವಾಗಿರಲು ತಾರ್ಕಿಕವಾಗಿ ಅಸಾಧ್ಯ. ಒಂದು ಸಮಾಜವಾಗಲು ಕಷ್ಟ ಎಂದ ಮೇಲೆ, ರಾಷ್ಟ್ರವಾಗುವ ಪರಿಕಲ್ಪನೆಯು ವಾಸ್ತವವಲ್ಲ. ಏಕೆಂದರೆ, ಯಾವುದೇ ಒಂದು ಜನರ ಗುಂಪು ರಾಷ್ಟ್ರವಾಗಿ ರೂಪುಗೊಳ್ಳಬೇಕಾದರೆ, ಮೊದಲು ನೈತಿಕತೆಯನ್ನು ಆಧರಿಸಿದ ಸಮಾಜವಾಗಿ ರೂಪುಗೊಳ್ಳಬೇಕಾಗುತ್ತದೆ. ಭಾರತದಲ್ಲಿ ಅದು ಸಾಧ್ಯವಾಗುವುದು ಜಾತಿಯನ್ನು ಮತ್ತು ಅದನ್ನು ಪೋಷಿಸುವ ಸಂಕುಚಿತ ಧಾರ್ಮಿಕತೆಯ ವಿನಾಶದಿಂದ ಮಾತ್ರ ಎನ್ನುವ ತರ್ಕಬದ್ಧ ವಾದವನ್ನು ಅಂಬೇಡ್ಕರ್ ಮುಂದಿಟ್ಟಿದ್ದರು. ಆ ವಾದ ಈ ಹೊತ್ತಿಗೂ ಪ್ರಸ್ತುತವಾದುದು.

ಜಾತಿ ಆಧರಿಸಿದ ಸಮಾಜದಲ್ಲಿ ಬರೀ ರಾಜಕೀಯ ಪ್ರಜಾಪ್ರಭುತ್ವ ಜಾರಿಯಾದರೆ ಮೇಲ್ಜಾತಿಯವರೇ ರಾಜಕೀಯ ಸಂಸ್ಥೆಗಳಲ್ಲಿ ತುಂಬಿ ಹೋಗುತ್ತಾರೆ. ಕಾನೂನಿನ ಸಮಾನತೆಯು ಸಾಮಾಜಿಕ ಸಮಾನತೆಯಾಗಿ ಪರಿವರ್ತನೆ ಆಗುವುದಿಲ್ಲ; ಹಾಗಾಗಿ ಸಾಮಾಜಿಕ ಪ್ರಜಾಪ್ರಭುತ್ವವಿಲ್ಲದೆ ಜಾರಿಯಾಗುವ ರಾಜಕೀಯ ಪ್ರಜಾಪ್ರಭುತ್ವ ಅತ್ಯಂತ ಅಪಾಯಕಾರಿ ಎಂಬ ಎಚ್ಚರಿಕೆಯನ್ನು ಅಂಬೇಡ್ಕರ್ ಸಂವಿಧಾನ ಸಭೆಯಲ್ಲಿಯೇ ನೀಡಿದ್ದರು ಮತ್ತು ಅದನ್ನು ಮೀರಲು ಅನೈತಿಕ ಜಾತಿ–ಸಮಾಜಕ್ಕೆ ಪರ್ಯಾಯವಾಗಿ ಸಾಂವಿಧಾನಿಕ ನೈತಿಕತೆಯನ್ನು ಪ್ರತಿಪಾದಿಸಿದ್ದರು.

ನಮ್ಮನ್ನು ಆಳುವ ಸರ್ಕಾರಗಳು ನಮ್ಮ ಸಂವಿಧಾನ ಪ್ರತಿಪಾದಿಸುವ ಸ್ವಾತಂತ್ರ್ಯ, ನ್ಯಾಯ, ಭ್ರಾತೃತ್ವ ಮತ್ತು ವ್ಯಕ್ತಿ ಗೌರವದಂತಹ ನೈತಿಕ ಮೌಲ್ಯಗಳನ್ನು ಎಷ್ಟು ಸಾಧ್ಯವೋ ಅಷ್ಟು ವೇಗವಾಗಿ ನಮ್ಮ ಸಾಮಾಜಿಕ ಮೌಲ್ಯಗಳಾಗಿ ಸ್ಥಾಪಿಸಲು ಪ್ರಯತ್ನಿಸಬೇಕು ಎಂಬ ಕಣ್ಣೋಟವನ್ನು ಬಾಬಾ ಸಾಹೇಬರು ನೀಡಿದ್ದರು.

ಇತ್ತೀಚೆಗಷ್ಟೇ ರಾಜ್ಯಸಭೆಯಲ್ಲಿ ಎಡಪಕ್ಷದ ಸಂಸದರು ಕೇಳಿರುವ ಪ್ರಶ್ನೆಗೆ ಸರ್ಕಾರವೇ ನೀಡಿರುವ ಮಾಹಿತಿಯ ಪ್ರಕಾರ, ಈ ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಹುದ್ದೆಗಳಲ್ಲಿ ಕ್ರಮವಾಗಿ ಶೇ 92, ಶೇ 90 ಹಾಗೂ ಶೇ 82ರಷ್ಟು ಮಂದಿ ಸಾಮಾನ್ಯ ವರ್ಗದವರೇ ಇದ್ದಾರೆ. ದೇಶದ ಬಹುಸಂಖ್ಯೆಯ ಹಿಂದುಳಿದ ಮತ್ತು ದಲಿತರ ಪ್ರಾತಿನಿಧ್ಯ ಒಂದಂಕಿಯನ್ನೂ ದಾಟಿಲ್ಲ ಎನ್ನುವ ಕಟುಸತ್ಯವೇ ಬಾಬಾ ಸಾಹೇಬರು ನೀಡಿದ ಎಚ್ಚರಿಕೆಯನ್ನು ನೆನಪಿಸುತ್ತಿದೆ.

ಜಾತಿಯಂತಹ ಶ್ರೇಣೀಕೃತ ಅನೈತಿಕ ವ್ಯವಸ್ಥೆಯೊಂದು ದೇಶದ ಜನರ ಬದುಕಿನ ಕಣ್ಣೋಟವಾದಾಗ ಏನಾಗುತ್ತದೆ ಎಂಬುದಕ್ಕೆ ನಮಗೆ 1980ರ ಕಾಲದಲ್ಲಿ ಮಂಡಲ್ ವರದಿಗೆ ಎದುರಾದ ಪ್ರತಿರೋಧ ಮತ್ತು ಇತ್ತೀಚೆಗೆ, ಯುಜಿಸಿ ನಿಯಮಗಳ ಕುರಿತು ಮೇಲ್ವರ್ಗದವರು ವ್ಯಕ್ತಪಡಿಸಿದ ಪ್ರತಿರೋಧದ ಸ್ವರೂಪ ಉತ್ತರವಾಗಿ ಕಾಣುತ್ತಿವೆ. ಈ ಜಾತೀಯ ಅಸಹನೆ ಎಷ್ಟು ಮುಂದಕ್ಕೆ ಹೋಗಿದೆ ಎಂದರೆ, ದೇಶದ ಪ್ರಖ್ಯಾತ ಇತಿಹಾಸ ತಜ್ಞ ಇರ್ಫಾನ್ ಹಬೀಬ್ ಅವರು ದೆಹಲಿ ವಿವಿಯಲ್ಲಿ ಮಾತನಾಡುವಾಗ ಅವರ ಮೇಲೆ ಕೊಳಚೆ ನೀರು ಎರಚಲಾಗಿತ್ತು.

ಇಲ್ಲೊಂದು ಸಮಾನ ಅಂಶವಿದೆ. 1909ರಲ್ಲಿ ಕುಡಿಯಲು ನೀರು ನಿರಾಕರಿಸಿದಾಗ ಅಂಬೇಡ್ಕರ್ ಅವರಿಗೆ ಒಂಬತ್ತು ವರ್ಷ ವಯಸ್ಸು. 2026ರಲ್ಲಿ ಹಬೀಬರ ಮೇಲೆ ನೀರು ಎರಚಿದಾಗ ಅವರಿಗೆ ತೊಂಬತ್ತು ವರ್ಷ ವಯಸ್ಸು! ಈ ಎರಡೂ ಘಟನೆಗಳಲ್ಲಿ ಕ್ರೌರ್ಯ ಎಸಗಿದ ಮನಃಸ್ಥಿತಿ ಒಂದೇ ಆಗಿದೆ. ಜಾತಿ ಅಥವಾ ಧಾರ್ಮಿಕ ಕ್ರೌರ್ಯಗಳು ತುಂಬಿದ ಮನಸ್ಸುಗಳಿಗೆ ಒಂಬತ್ತು ವರ್ಷದ ಮಗುವಾದರೂ ಒಂದೇ, ತೊಂಬತ್ತು ವರ್ಷದ ವೃದ್ಧರಾದರೂ ಅಷ್ಟೇ, ಯಾವ ವ್ಯತ್ಯಾಸವೂ ಇರುವುದಿಲ್ಲ ಎನ್ನುವುದನ್ನು ಇತಿಹಾಸ ಮತ್ತು ವರ್ತಮಾನದ ಘಟನೆಗಳು ನಿರೂಪಿಸುತ್ತಿವೆ.

ನಮ್ಮ ನಡುವಿನ ಖ್ಯಾತ ರಾಜಕೀಯ ಚಿಂತಕ ವಲೇರಿಯನ್ ರೊಡ್ರಿಗಸ್ ಅವರು, 'ನಾವು ಅಂಬೇಡ್ಕರ್ ಅವರನ್ನು ಸಾಂವಿಧಾನಿಕತೆಯ ಮೂಲಕ, ಜಾತಿ–ಸಮಾಜದ ನೈತಿಕ ಪರಿವರ್ತನೆಯ ಮೂಲಕ ಸಾಮಾಜಿಕ ನ್ಯಾಯ ಸ್ಥಾಪನೆಯ ರಾಜಕಾರಣವನ್ನು ಮುಂದಿಟ್ಟ ಪ್ರಜಾಪ್ರಭುತ್ವವಾದಿ ಎಂಬುದನ್ನು ಗುರ್ತಿಸಬೇಕಿದೆ. ಮುಖ್ಯವಾಗಿ, ಅಂಬೇಡ್ಕರ್ ಅವರ ರಾಜಕೀಯವು ಬರೀ ಅಸ್ಮಿತೆಯ ರಾಜಕೀಯವಲ್ಲ. ಅದು ಅವರ ರಾಜಕೀಯ, ಭಾರತೀಯ ಸಮಾಜ ಮತ್ತು ಇಲ್ಲಿನ ಪ್ರಜಾಪ್ರಭುತ್ವದ ನೈತಿಕ ಪುನರ್ ನಿರ್ಮಾಣದ ಕುರಿತ ಸುದೀರ್ಘ ಯೋಜನೆಯಾಗಿದೆ ಎಂಬ ಸತ್ಯವನ್ನು ನಾವು ಕಾಣಬೇಕಿದೆ' ಎಂದು ಹೇಳಿದ್ದಾರೆ. ಈ ಸತ್ಯ ಎಷ್ಟು ಬೇಗ ಕಾಣುತ್ತೇವೆ ಎನ್ನುವುದರಲ್ಲಿ ನಮ್ಮ ಹಾಗೂ ದೇಶದ ಹಿತವಿದೆ.

ವಾಚಕರ ವಾಣಿ

'ಹುಣಸೆ ಅಭಿವೃದ್ಧಿ ಮಂಡಳಿ' ಸ್ಥಾಪಿಸಿ

ತುಮಕೂರು ಜಿಲ್ಲೆಯ ಬಹುತೇಕ ರೈತರಿಗೆ ಹುಣಸೆ ಬೆಳೆಯೇ ಜೀವನಾಧಾರ. 6,800ಕ್ಕೂ ಹೆಚ್ಚು ಹೆಕ್ಟೇರ್‌ನಲ್ಲಿ ಹುಣಸೆ ಮರಗಳಿವೆ. ಈ ಬಾರಿ ಉತ್ತಮ ಫಸಲು ಬಂದಿದೆ. ಕಡಿಮೆ ನೀರಿರುವ ಸಂದರ್ಭದಲ್ಲೂ ಇದರ ನಿರ್ವಹಣೆ ಸುಲಭ. ಆದರೆ, ಹುಣಸೆ ಬೆಳೆಯುವವರು ಆರ್ಥಿಕವಾಗಿ ಸದೃಢರಾಗಲು ಸಾಧ್ಯವಾಗುತ್ತಿಲ್ಲ. ಕಾರ್ಮಿಕರ ಕೊರತೆಯಿಂದ ಬೆಳೆಯುವುದಕ್ಕೆ ಆಸಕ್ತಿ ಕಡಿಮೆಯಾಗುತ್ತಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಜಿಲ್ಲೆಯಲ್ಲಿ ಏಳು ಸಾವಿರಕ್ಕೂ ಹೆಚ್ಚು ಹುಣಸೆ ಮರಗಳನ್ನು ರೈತರು ಕಡಿದುಹಾಕಿರುವುದೇ ಇದಕ್ಕೆ ಸಾಕ್ಷಿ. ಹುಣಸೆಯ ಮೌಲ್ಯವರ್ಧನೆಗೆ ಒತ್ತು ನೀಡಿದರೆ ರೈತರ ಜೇಬು ತುಂಬಲಿದೆ. ಇದಕ್ಕಾಗಿ 'ಹುಣಸೆ ಅಭಿವೃದ್ಧಿ ಮಂಡಳಿ' ಸ್ಥಾಪಿಸಬೇಕಿದೆ. ಈ ಬಾರಿಯ ಬಜೆಟ್‌ನಲ್ಲಿ ಈ ಕುರಿತಂತೆ ಸರ್ಕಾರ ಪ್ರಸ್ತಾಪಿಸಿಲ್ಲ. ಬಜೆಟ್ ಮೇಲಿನ ಚರ್ಚೆಯಲ್ಲಾದರೂ ಮಂಡಳಿ ಸ್ಥಾಪಿಸುವ ಬಗ್ಗೆ ಘೋಷಿಸಲಿ.

ಮಂಜುನಾಥ್ ಅಮಲಗೊಂದಿ, ಶಿರಾ

ಗೃಹಲಕ್ಷ್ಮಿ ಹಣ: ವಿವೇಚನೆಯಿಂದ ಬಳಸಿ

ಗದಗ ತಾಲ್ಲೂಕಿನ ತಿಮ್ಮಾಪುರದ 800ಕ್ಕೂ ಹೆಚ್ಚು ಮಹಿಳೆಯರು ತಮ್ಮ ಒಂದು ತಿಂಗಳ ಗೃಹಲಕ್ಷ್ಮಿ ಯೋಜನೆಯ ಹಣವನ್ನು ದೇಗುಲ ನಿರ್ಮಾಣಕ್ಕೆ ನೀಡಿರುವುದು ವರದಿ ಆಗಿದೆ. ಈ ಘಟನೆಯಿಂದ ಉತ್ತೇಜಿತರಾಗಿ ಒತ್ತಾಯಪೂರ್ವಕವಾಗಿ ದೇಗುಲಗಳ ನಿರ್ಮಾಣಕ್ಕೆ ಗೃಹಲಕ್ಷ್ಮಿ ಹಣದ ವಸೂಲಿಬಾಜಿಯೂ ಹೆಚ್ಚಾಗುವ ಸಾಧ್ಯತೆಯಿದೆ. ರಾಜ್ಯ ಸರ್ಕಾರವು ಮಹಿಳೆಯರ ಸಬಲೀಕರಣದ ದೃಷ್ಟಿಯಿಂದ ಈ ಯೋಜನೆಯಡಿ ಹಣ ನೀಡುತ್ತಿದೆ. ಫಲಾನುಭವಿಗಳು ಸರ್ಕಾರದ ಉದ್ದೇಶ ಅರಿತು ಹಣವನ್ನು ವಿವೇಚನೆಯಿಂದ ಬಳಸಲಿ.

ಅಶೋಕ ಎನ್.ಎಚ್., ಕೋಲಾರ

ವಿರುದ್ಧ ನಡಿಗೆ: ಉಪಯೋಗ ಇಲ್ಲ

ಹೆಣ್ಣು–ಗಂಡು ಇಬ್ಬರೂ ಸಮರೂ ಅಲ್ಲ; ಅಸಮರೂ ಅಲ್ಲ. ಹೆಣ್ಣಿನ ಒಳಗೆ ಗಂಡು ಎಂಬ ಭಾವವೂ, ಗಂಡಿನೊಳಗೆ ಹೆಣ್ಣೆಂಬ ಭಾವವೂ ನಿಸರ್ಗದತ್ತವಾಗಿದೆ. ದೇಹ ರಚನೆಯು ಇಬ್ಬರ ವರವೂ ಅಲ್ಲ, ಶಾಪವೂ ಅಲ್ಲ. ಯಾರ ಅಸ್ತಿತ್ವವೂ ಇಲ್ಲಿ ಯಾರ ಮೇಲೆಯೂ ನಿಂತಿಲ್ಲ. ಹೆಣ್ಣು ಗಂಡಸಿನ ಪರಿಚಾರಿಕೆ ಅಲ್ಲ. ಗಂಡು ಹೆಣ್ಣಿನ ಸೇವಕನೂ ಅಲ್ಲ. ಪ್ರಕೃತಿಯ ಎದುರು ಇಬ್ಬರೂ ಶರಣಾಗಲೇಬೇಕು ಎಂದ ಮೇಲೆ ಇಲ್ಲಿ 'ಯಜಮಾನ' ಪ್ರಕೃತಿಯೇ ಹೊರತು ಗಂಡಸು ಅಥವಾ ಹೆಂಗಸಲ್ಲ. ಗಂಡು–ಹೆಣ್ಣು ಪ್ರಕೃತಿಯ ಅವಳಿ ಕೂಸು! ಇಬ್ಬರೊಳಗೂ ಅಸಹಜತೆ, ಅಹಂಕಾರ, ದುರ್ಬಲತೆ, ಆಧಿಪತ್ಯ ಸಾಧಿಸುವ ಗುಣಗಳಿವೆ. ಗಂಡು–ಹೆಣ್ಣಿನ ಸಂಬಂಧದ ನಡುವಿನ ಈ ಅನಾರೋಗ್ಯಕರ ಸಂಗತಿಗಳನ್ನು ಇಬ್ಬರೂ 'ತಿಳಿದೇ' ಸರಿಪಡಿಸಿಕೊಂಡು ಹೋಗಬೇಕೇ ಹೊರತು ಪರಸ್ಪರ 'ತುಳಿದು' ವಿರುದ್ಧ ಮುಖದಲ್ಲಿ ಸಾಗಿದರೆ ಯಾರಿಗೂ ಲಾಭವಿಲ್ಲ.

ಸುಶ್ಮಿತಾ ವೈ., ಹೊಸನಗರ

ವಲಸೆ ನಿಯಂತ್ರಣಕ್ಕೆ ಗ್ಯಾರಂಟಿ ಬೇಡವೆ?

ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳು ಅಭಿವೃದ್ಧಿಯಲ್ಲಿ ಹಿಂದುಳಿದಿವೆ. ಈ ಭಾಗದ ಜನರು ಇಂದಿಗೂ ಉದ್ಯೋಗ ಅರಸಿ ಗುಳೆ ಹೋಗುತ್ತಾರೆ. ಸರ್ಕಾರ ಹೆಸರಿಗಷ್ಟೆ 'ಕಲ್ಯಾಣ ಕರ್ನಾಟಕ' ಎಂದು ಹೆಸರಿಟ್ಟಿದೆ. ಈ ಜಿಲ್ಲೆಗಳ ಜನರ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ರೂಪಿಸುವಲ್ಲಿ ನಿರ್ಲಕ್ಷ್ಯವಹಿಸಿರುವುದು ಗುಟ್ಟೇನಲ್ಲ. ದೊಡ್ಡಮಟ್ಟದ ಕೈಗಾರಿಕೆಗಳನ್ನು ಸ್ಥಾಪಿಸಿ ಜನರಿಗೆ ಸ್ಥಳೀಯವಾಗಿಯೇ ಉದ್ಯೋಗದ ಅವಕಾಶ ಕಲ್ಪಿಸುವ ಕೆಲಸವಾಗುತ್ತಿಲ್ಲ. ಈ ಆಸೆಗಣ್ಣಿನಿಂದಲೇ ಪ್ರತಿ ಬಾರಿಯ ಬಜೆಟ್ ಅನ್ನು ಈ ಭಾಗದ ಜನರು ಎದುರು ನೋಡುತ್ತಾರೆ. ನಿರಾಶೆ ಕಟ್ಟಿಟ್ಟ ಬುತ್ತಿಯಾಗಿದೆ. ಈ ಬಾರಿಯೂ ಅದೇ ಸ್ಥಿತಿ ಮುಂದುವರಿದಿದೆ.

ಚನ್ನಪ್ಪ ಯಾದವ್, ಗುರುಮಿಠಕಲ್

ದೇಶಕ್ಕೆ ಯುವಶಕ್ತಿಯ ಸಹಭಾಗಿತ್ವ ಬೇಕು

'ಯುವಪೀಳಿಗೆಗೆ ಕಿವುಡೇಕೆ?' ಲೇಖನವು (ಲೇ: ಚಂದ್ರಕಾಂತ ವಡ್ಡು, ಪ್ರ.ವಾ., ಮಾ. 6) ವಾಸ್ತವತೆಯಿಂದ ಕೂಡಿದೆ. ಹಳೆ ಬೇರು ಹೊಸ ಚಿಗುರು ಮರ ಸೊಬಗು ಎಂಬ ಯುಕ್ತಿಯನ್ನು ಮರೆಯಬಾರದು. ಹಿರಿ ತಲೆಮಾರಿಗೆ ಹೊಸ ತಲೆಮಾರಿನ ಬದಲಾವಣೆ ಬಳಸಿಕೊಳ್ಳದೇ ಹೋದರೆ ಸಾಮರಸ್ಯ ಮೂಡಲು ಸಾಧ್ಯವಾಗುವುದಿಲ್ಲ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಔದ್ಯೋಗಿಕ ಕ್ಷೇತ್ರದಲ್ಲಿ ಯುವಪೀಳಿಗೆಯನ್ನು ಬಳಸಿಕೊಂಡಾಗ ಮಾತ್ರ ದೇಶದ ಪ್ರಗತಿ ಸಾಧ್ಯ. ಜಗತ್ತಿನ ಅತಿದೊಡ್ಡ ಯುವ ಸಮುದಾಯ ಹೊಂದಿರುವ ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಯುವಶಕ್ತಿ ನಿರ್ಲಕ್ಷ್ಯಕ್ಕೆ ಒಳಗಾಗದೇ ಬಳಕೆಯಾಗಬೇಕು. ಕಿರಿಯರ ಅಭಿಪ್ರಾಯಕ್ಕೆ ಕಿವಿಯಾಗಬೇಕು.

ಅಶೋಕ ಗೌಡ, ಶಿರಸಿ

ರಾಜ್ಯದ ಪ್ರಗತಿಗೆ ಬಜೆಟ್ ಸಾಲುವುದೆ?

ಈ ಬಾರಿ ಕರ್ನಾಟಕದ ಬಜೆಟ್ ಗಾತ್ರ 4.48 ಲಕ್ಷ ಕೋಟಿ. ಇದು ರಾಜ್ಯದ ಅಭಿವೃದ್ಧಿಗೆ ಸಾಲುವುದಿಲ್ಲ. ಕರ್ನಾಟಕಕ್ಕಿಂತ ಕಡಿಮೆ ತೆರಿಗೆ ಸಂಗ್ರಹಿಸುವ ಉತ್ತರಪ್ರದೇಶ ₹9 ಲಕ್ಷ ಕೋಟಿ ಬಜೆಟ್ ಮಂಡಿಸಿದೆ. ಏಕೆಂದರೆ ಆ ರಾಜ್ಯಕ್ಕೆ ದೊಡ್ಡ ಮೊತ್ತದ ಕೇಂದ್ರದ ತೆರಿಗೆ ಪಾಲು ಹಾಗೂ ಅನುದಾನ ಹೋಗುತ್ತದೆ. ವಿಕಸಿತ ಭಾರತ ಸಾಧ್ಯ ಆಗಬೇಕಾದರೆ ದೇಶದ ಜಿಡಿಪಿಗೆ ಹೆಚ್ಚಿನ ಕೊಡುಗೆ ಕೊಡುವ ಕರ್ನಾಟಕದಂತಹ ರಾಜ್ಯಗಳು ಹೆಚ್ಚಿನ ಹಣಕಾಸು ಹೊಂದಿರಬೇಕು. ಆದರೆ, ಕೇಂದ್ರದಿಂದ ರಾಜ್ಯಗಳಿಗೆ ಅನುದಾನದ ಹಂಚಿಕೆ ನ್ಯಾಯಬದ್ಧವಾಗಿ ಇಲ್ಲ, ಸಮಾನತೆಯ ತತ್ತ್ವದಿಂದಲೂ ಕೂಡಿಲ್ಲ. ಹಾಗಾಗಿ, ರಾಜ್ಯಗಳಿಗೆ ತಮ್ಮದೇ ಆದ ಆದಾಯ ತೆರಿಗೆ, ಕಾರ್ಪೊರೇಟ್ ತೆರಿಗೆ ಇತ್ಯಾದಿ ವಿಧಿಸಲು ಕೇಂದ್ರವು ಅವಕಾಶ ನೀಡಬೇಕು. ಇಲ್ಲವಾದರೆ ಕೇಂದ್ರ ಪ್ರಾಯೋಜಿತ ಯೋಜನೆಗಳ ಅನುದಾನವನ್ನು ಸಂಪೂರ್ಣವಾಗಿ ಭರಿಸಬೇಕಿದೆ.

ದೇವಿದಾಸ ಪ್ರಭು, ಭಟ್ಕಳ

ಚುರುಮುರಿ

ಸಾಲದ ಹೊರೆ

• ಸುಮಂಗಲಾ

'ಏಳು, ಕಾಫಿ ಕುಡಿ' ಎಂದು ನನ್ನ ಎಬ್ಬಿಸಿದ ಬೆಕ್ಕಣ್ಣ, ಮಹಿಳಾ ದಿನಾಚರಣೆಯ ಶುಭ ಕೋರಿತು.

ಇವತ್ತಾದರೂ 'ಬೆಡ್ ಕಾಫಿ'ಯ ಅದೃಷ್ಟ ದೊರೆಯಿತಲ್ಲ ಎಂಬ ಖುಷಿಯಿಂದ 'ಕಾಫಿ ಕಪ್ ಕೊಡು' ಎಂದೆ.

'ದಿನಾ ನೀವು ಹೆಣ್‌ಮಕ್ಕಳು ಮನೆಯವರಿಗೆಲ್ಲ ಮಾಡಿಕೊಟ್ಟು, ಆಮೇಲೆ ಕುಡಿತೀರಿ. ಇವತ್ತು ನಿಮ್ಮದೇ ದಿನಾಚರಣೆ. ಅದಕ್ಕೇ ಮಾಡಿದ ಕೂಡಲೇ ನೀವೇ ಮೊದಲು ಕುಡೀರಿ... ನಿಮ್ಮ ಕಪ್ ನಿಮ್ಮದೇ ಇವತ್ತು!' ಎಂದಿತು.

'ಹೋಗಲೇ... ನಾವು ಗಂಡ್‌ಮಕ್ಕಳ ಹಂಗೇ ಮನುಷ್ಯರು, ಸಮಾನವ್ಯಕ್ತಿಗಳು ಅನ್ನೋದನ್ನು ಮದ್ಲು ತಿಳಕೋರಿ' ಎಂದು ಬೈದು, ಪೇಪರಿನಲ್ಲಿ ಬಜೆಟ್ ಮುಖ್ಯಾಂಶಗಳನ್ನು ನೋಡತೊಡಗಿದೆ.

'ಸಿದ್ದು ಅಂಕಲ್ಲು 11ಜಿ ಕೊಟ್ಟಾರಂತಲ್ಲ... ಅದ್ರಾಗೆ ಡಬ್ಲ್ಯು ಅಂದ್ರ ವುಮನ್ ಅಂತ ಏನೇನು?' ಬೆಕ್ಕಣ್ಣ ಕೇಳಿತು.

'ಮೊದಲನೇ ಜಿ ಅಂದ್ರ ಗ್ಯಾರಂಟಿ... ಗ್ಯಾರಂಟಿವಳಗೆ ಗೃಹಲಕ್ಷ್ಮಿ, ಶಕ್ತಿ ಯೋಜನೆ ಮುಂದುವರಿಸ್ಯಾರೆ ಅಷ್ಟೆ' ಎಂದೆ.

'ಈ ಬಜೆಟ್ ಕರ್ಣಕಠೋರ ಅಂತ್ಹೇಳಿ ಕುಮಾರಣ್ಣ ಕಿವಿ ಮುಚ್ಚಿಕೊಂಡಾರೆ. ಅಶೋಕಣ್ಣ ಇದು ಖಾಲಿ ಚೊಂಬು ಅಂದಾರೆ. ವಿಪಕ್ಷಗಳಿಗೆ ಭಯಂಕರ ನಿರಾಸೆಯಾಗೈತಿ' ಎಂದು ಬೆಕ್ಕಣ್ಣ ಲೊಚಗುಟ್ಟಿತು.

'ನಿರ್ಮಲಕ್ಕ ಕೇಂದ್ರ ಬಜೆಟ್ ಮಂಡಿಸಿದಾಗ್ಲೂ ವಿಪಕ್ಷಗಳಿಗೆ ಭಾರೀ ನಿರಾಸೆಯಾಗಿತ್ತು. ಅದು ಎಲ್ಲಾ ವಿಪಕ್ಷಗಳ ವಾಡಿಕೆ'.

'ಸಿದ್ದು ಅಂಕಲ್ಲು ಗ್ಯಾರಂಟಿ ಯೋಜನೆಗಳಿಗೆ ಭಾಳ ಸಾಲ ಮಾಡ್ಯಾರೆ. ರಾಜ್ಯದ ಸಾಲ ಎಂಟು ಲಕ್ಷ ಕೋಟಿಗೆ ಏರೈತಿ'.

'ಕೇಂದ್ರದ ಸಾಲ ಕಡಿಮಿ ಏನಿಲ್ಲ! ನಿರ್ಮಲಕ್ಕನ ಬಜೆಟ್ಟಿನಲ್ಲಿ ₹215 ಲಕ್ಷ ಕೋಟಿ ಸಾಲ ತೋರಿಸ್ಯಾರೆ. ರಾಜ್ಯದ ಸಾಲ ಆರ್ಥಿಕ ಶಿಸ್ತಿನ ಶೇ 25ರ ಒಳಗೆ ಇದ್ದರೆ ಕೇಂದ್ರದ್ದು ಶೇ 55ರಷ್ಟು ಅಂತೆ' ಎಂದೆ.

'ಅಂದ್ರ ಶ್ರೀಸಾಮಾನ್ಯರ ತೆಲಿ ಮ್ಯಾಲೆ ರಾಜ್ಯದ್ದು, ಕೇಂದ್ರದ್ದು ಎರಡೂ ಸೇರಿ ಅಂದಾಜು ಎಷ್ಟು ಸಾಲ ಐತಿ?' ಎಂದು ಬೆಕ್ಕಣ್ಣ ಕೇಳಿದಾಗ ತಲೆ ಕೆರೆದುಕೊಂಡೆ.

ಸಂಗತ

'ಭವಿಷ್ಯ' ವಹಿವಾಟು ಕಾನೂನು ವ್ಯಾಪ್ತಿಗೆ ಬರಲಿ

ಜ್ಯೋತಿಷಿಗಳ ಚಟುವಟಿಕೆಗಳು ದಂಧೆಯ ಸ್ವರೂಪ ಪಡೆದುಕೊಂಡಿದ್ದು, ಜನರನ್ನು ಪ್ರಭಾವಿಸುತ್ತಿವೆ. ಅವುಗಳ ನಿಯಂತ್ರಣಕ್ಕೆ ಪರಿಣಾಮಕಾರಿ ಕಾನೂನು ಅಗತ್ಯ.

• ರಾಘವೇಂದ್ರ ಕೆ. ತೊಗರ್ಸಿ

ಅಲ್ಪಾಯುಷಿ ಎಂದು ಜ್ಯೋತಿಷಿಯೊಬ್ಬರು ಹೇಳಿದ ಮಾತನ್ನು ಗಂಭೀರವಾಗಿ ಪರಿಗಣಿಸಿದ ಯುವತಿಯೊಬ್ಬರು ಭಯದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿ ಬೆಂಗಳೂರಿನಲ್ಲಿ ಇತ್ತೀಚೆಗಷ್ಟೇ ವರದಿಯಾಗಿದೆ. ನತದೃಷ್ಟ ಯುವತಿ ವೃತ್ತಿಯಿಂದ ಸಾಫ್ಟ್‌ವೇರ್ ಎಂಜಿನಿಯರ್. ಹತ್ತು ವರ್ಷಗಳ ಹಿಂದೆ ವೈಕುಂಠ ಏಕಾದಶಿಯ ದಿನ, ಬೆಂಗಳೂರಿನ ಮಠದ ಬಾವಿಗೆ ಮಂಡ್ಯ ಮೂಲದ ಮಹಿಳೆಯೊಬ್ಬರು ಹಾರಿ ಜೀವ ಕಳೆದುಕೊಂಡಿದ್ದರು.

ಕೆಲವು ವರ್ಷಗಳ ಹಿಂದೆ, 'ಯುಗಾದಿ–ದೀಪಾವಳಿಯ ಮರುದಿನ ಮಾಂಸಾಹಾರ ಸೇವನೆ ಮಾಡಬಾರದು. ಮಾಡಿದರೆ ಜೀವನವೆಲ್ಲ ತೊಡಕಿಗೆ ಸಿಲುಕಿಕೊಳ್ಳುತ್ತದೆ' ಎಂದು ಕಿರುತೆರೆ ಜ್ಯೋತಿಷಿಯೊಬ್ಬರು ಹೇಳಿದ್ದರು. ಮತ್ತೊಬ್ಬರು 'ಕುಂಭ ರಾಶಿಯ ಮಹಿಳೆಗೆ ಗಂಡನ ಸಹೋದರನಿಂದ ಅತ್ಯಾಚಾರ ಸಾಧ್ಯತೆ ಇದೆ ಎಂದೂ, ಮಹಡಿ ಮೆಟ್ಟಿಲ ಕೆಳಗೆ ದಂಪತಿ ಮಲಗಿದರೆ ಸಂತಾನಭಾಗ್ಯ ಇದೆ ಎಂದೂ ಹೇಳಿದ್ದರು. ಈ ಘಟನೆಗಳನ್ನು ಖಂಡಿಸಿ ಪ್ರತಿಭಟನೆಗಳು ನಡೆದಿದ್ದವು.

ಇತ್ತೀಚೆಗೆ ಜ್ಯೋತಿಷಿಯೊಬ್ಬರು ವಿವಾಹಿತೆಯ ಜೊತೆ ಅನೈತಿಕ ಸಂಬಂಧ ಬೆಳೆಸಿ ಕೊಲೆಯ ಆರೋಪ ಎದುರಿಸುತ್ತಿದ್ದಾರೆ. ಅವರೂ ಕಿರುತೆರೆಯ ಕೊಡುಗೆ. 2012ರ ಡಿಸೆಂಬರ್ 21ರಂದು ಪ್ರಳಯ ಸಂಭವಿಸಲಿದೆ ಎಂದು ಭೀತಿಯ ಬೀಜವನ್ನು ಬಿತ್ತಿದ ಜ್ಯೋತಿಷಿಗಳು–ಖಾವಿಧಾರಿಗಳನ್ನೂ ನಾವು ನೋಡಿದ್ದೇವೆ. ಹೀಗೆ ಜನರನ್ನು ಮೌಢ್ಯಕ್ಕೆ ತಳ್ಳಿ, ತಮ್ಮ ಹಿತಾಸಕ್ತಿ ಸಾಧಿಸಿಕೊಳ್ಳುವ ಘಟನೆಗಳು ಮೇಲಿಂದ ಮೇಲೆ ನಡೆಯುತ್ತಿವೆ. ಅಂತಹ ಸ್ವಾಮೀಜಿಗಳಿಗೆ ರಾಜಕೀಯ ಬೆಂಬಲವೂ ಸುಲಭಕ್ಕೆ ಸಿಗುತ್ತದೆ. ಪ್ರಸ್ತುತ ಪೋಕ್ಸೊ ಪ್ರಕರಣ ಎದುರಿಸುತ್ತಿರುವ ತರುಣ ಗುರುವೊಬ್ಬರಿಗೆ, 'ನಿಮ್ಮ ಪಾದ ಸೇವೆ ಮಾಡುವೆ. ನನ್ನ ಬಗ್ಗೆ ಹಳ್ಳಿಯಲ್ಲಿ ಹೇಳಿ' ಎಂದು ಹಿರಿಯ ರಾಜಕಾರಣಿ ಒಬ್ಬರು ಅಂಗಲಾಚಿದ ಆಡಿಯೊ ಬಹಿರಂಗವಾಗಿತ್ತು.

ಜ್ಯೋತಿಷವನ್ನು ವಿಜ್ಞಾನ, ಕಾಲಜ್ಞಾನ ಎಂದು ಪ್ರತಿಪಾದಿಸುವವರು ಇದ್ದಾರೆ. ಅದು ವಿಜ್ಞಾನವೋ ಅಲ್ಲವೋ ಎನ್ನುವುದು ಚರ್ಚೆಯ ಸಂಗತಿಯಷ್ಟೇ. ಆದರೆ, ವೈದ್ಯಕೀಯ ವಿಜ್ಞಾನ, ಔಷಧ ವಿಜ್ಞಾನವನ್ನು ಕಾನೂನು ನಿಯಂತ್ರಿಸುತ್ತದೆ. ಚಿಕಿತ್ಸೆಯಲ್ಲಿ ಲೋಪ ಉಂಟಾದಾಗ ಪ್ರಕರಣ ದಾಖಲಿಸಬಹುದು. ತಪ್ಪು ಔಷಧಗಳಿಗೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿವೆ. ತರ್ಕಕ್ಕೆ ಅವಕಾಶವೇ ಇಲ್ಲದಂತೆ ಜಗತ್ತು ವಿಜ್ಞಾನ ಎಂದು ಒಪ್ಪಿಕೊಂಡಿರುವ ಜ್ಞಾನಶಾಸ್ತ್ರಗಳೇ ಕಾನೂನಿನ ನಿರ್ಬಂಧಕ್ಕೆ ಒಳಪಟ್ಟಿರುವಾಗ, ಜ್ಯೋತಿಷದ ಅಂಗಡಿಗಳನ್ನು ನಿಯಂತ್ರಿಸುವ ಕಾನೂನುಗಳು ಏಕಿಲ್ಲ? ಮೂಢನಂಬಿಕೆ ಹಾಗೂ ಶೋಷಣೆಯ ಸರಣಿ ಪ್ರಕರಣಗಳು ಜ್ಯೋತಿಷವನ್ನು ಕಾನೂನಿನ ಅಡಿ ತರುವ ಅಗತ್ಯವನ್ನು ಮತ್ತೆ ಮತ್ತೆ ಹೇಳುವಂತಿವೆ.



ಜ್ಯೋತಿಷ ಈಗ ವಹಿವಾಟಿನ ಸ್ವರೂಪ ಪಡೆದುಕೊಂಡಿದೆ. ಕೋಟ್ಯಂತರ ರೂಪಾಯಿ ವ್ಯವಹಾರ ನಡೆಯುವ ಈ ಕ್ಷೇತ್ರದ ನಿಯಂತ್ರಣಕ್ಕೆ ಸೂಕ್ತ ಕಾನೂನೇ ಇಲ್ಲ. ವಂಚನೆಗೆ ಒಳಗಾದ ಗ್ರಾಹಕನಿಗೆ, ಗ್ರಾಹಕ ಕಾನೂನಿನ ನೆರವೂ ಸಾಧ್ಯವಾಗುವುದಿಲ್ಲ. ಏಕೆಂದರೆ, ಜ್ಯೋತಿಷ ಉದ್ಯಮದ ರೂವಾರಿಗಳು ಬಹುತೇಕ ನೋಂದಾಯಿತ ವ್ಯಾಪಾರಿಗಳೇ ಅಲ್ಲ. ಇಲ್ಲಿನ ಎಲ್ಲ ವ್ಯವಹಾರಗಳು ನಂಬಿಕೆಯ ಮೇಲೆ ನಿಂತಿರುತ್ತವೆ. ಹಾಗಾಗಿ ನಿರಂತರ ಅವಾಂತರಗಳಿಗೆ ವರ್ತಮಾನ ಸಾಕ್ಷಿಯಾಗುತ್ತಿದೆ.

'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಶೀರ್ಷಿಕೆಯ ಬರಹದಲ್ಲಿ ಕುವೆಂಪು ಅವರು ಹೇಳಿರುವುದು ಹೀಗೆ: 'ಕೆಲವು ತಿಂಗಳ ಹಿಂದೆ ಪತ್ರಿಕೆಯೊಂದರಲ್ಲಿ, ಯಾವುದೋ ದೇವತೆ ಯಾವುದೋ ತೋಟದಲ್ಲಿ ಕಾಣಿಸಿಕೊಂಡಂತೆಯೂ, ಆ ದೇವತೆ ಎಲ್ಲರೂ ಇಂತಿಷ್ಟು ದಿನಗಳ ಒಳಗಾಗಿ ಉಗಾದಿ ಹಬ್ಬವನ್ನು ಮಾಡದಿದ್ದರೆ ಮನೆ ಮನೆಗೂ ಒಂದೊಂದು ಜೀವವನ್ನು ಅಪಹರಿಸುತ್ತೇನೆ ಎಂದು ಹೇಳಿದ ಸುದ್ದಿ ಪ್ರಕಟವಾಗಿತ್ತು. ಮಾಡಬೇಕಾದ ನೈವೇದ್ಯಗಳ ವಿವರವೂ ಪ್ರಮಾಣವೂ ಕೂಡ ಅಚ್ಚಾಗಿತ್ತು. ಅನೇಕರು ಹೆದರಿಯೇ ಹಬ್ಬ ಮಾಡಿಕೊಂಡು ತಿಂದರು. ಹಬ್ಬ ಮಾಡಿಕೊಂಡು ತಿಂದುದರಿಂದ ಅಪಾಯವೇನಿಲ್ಲ. ಆದರೆ ಅದು ದುಷ್ಪರಿಣಾಮಕಾರಿಯಾದುದಲ್ಲವೇ?' ಕುವೆಂಪು ಅವರು ಎತ್ತುವ ಈ ಪ್ರಶ್ನೆ ಈಗಲೂ ಪ್ರಸ್ತುತವಾದುದು.

ವೈಚಾರಿಕ ವಿವೇಕದ ಮೇರು ನಿದರ್ಶನವಾದ ಬಸವಣ್ಣನನ್ನು ಈ ನಾಡಿನ ಸಾಂಸ್ಕೃತಿಕ ನಾಯಕನನ್ನಾಗಿ ಅಂಗೀಕರಿಸಿದ್ದೇವೆ. ಆದರೆ, ಆ ವೈಚಾರಿಕತೆ ಸಮಾಜದಲ್ಲಿ ಕಾಣಿಸುತ್ತಿಲ್ಲ. ಮೂಢನಂಬಿಕೆಗಳನ್ನು ಬೆಂಬಲಿಸದಿರುವ ಬಗ್ಗೆ ದೃಶ್ಯ ಮಾಧ್ಯಮಗಳು ಸ್ವಯಂ ನೈತಿಕ ನಿಯಂತ್ರಣ ಹಾಕಿಕೊಳ್ಳುವುದು ಅಗತ್ಯ. ಅದು ಸಾಧ್ಯವಾಗದೆ ಹೋದಾಗ, ಸರ್ಕಾರವೇ ಸೂಕ್ತ ಮಾರ್ಗದರ್ಶನ ನೀಡಬೇಕಿದೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ 'ಬೆತ್ತಲೆಸೇವೆ'ಯ ಮೌಢ್ಯಕ್ಕೆ ಪ್ರೊ. ಬಿ. ಕೃಷ್ಣಪ್ಪ ಅವರ ನೇತೃತ್ವದ ಹೋರಾಟದಿಂದ ವಿಮುಕ್ತಿ ಸಿಕ್ಕಿತ್ತು. 'ಮಡೆ ಸ್ನಾನ'ದಂತಹ ಆಚರಣೆಗೆ ನಿರ್ಬಂಧ ಇದ್ದರೂ, ಅಂತಹ ಅನೇಕ ಆಚರಣೆಗಳು ಈಗಲೂ ನಡೆಯುತ್ತಿವೆ. ಪ್ರಗತಿಪರ ವಿಚಾರಗಳಿಗೆ ಸರ್ಕಾರ ಸ್ಪಂದಿಸಬೇಕಾಗಿದೆ.

ಹೊಸ ಹೊಸ ರೂಪದಲ್ಲಿ ಚಾಲ್ತಿಯಲ್ಲಿರುವ ಅತಾರ್ಕಿಕ, ಅವೈಚಾರಿಕ, ಅವೈಜ್ಞಾನಿಕ ಆಚರಣೆಗಳು ಹಾಗೂ ಸಂಪ್ರದಾಯದ ಹೆಸರಿನ ಮೌಢ್ಯವನ್ನು ನಿಯಂತ್ರಿಸುವ ಅಗತ್ಯವಿದೆ. ನಂಬಿಕೆಯ ವಿಷಯ ಮುಂದುಮಾಡಿ 'ಮುಗ್ಧ ಗ್ರಾಹಕ' ಮೂರ್ಖ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕಿದೆ. ಇಲ್ಲದಿದ್ದರೆ, ಕೆಲವು ವರ್ಷಗಳ ಹಿಂದೆ ರಾಣೆಬೆನ್ನೂರು ತಾಲ್ಲೂಕಿನ ಹಳ್ಳಿಯೊಂದರಲ್ಲಿ ಗೃಹಪ್ರವೇಶ ನಿಮಿತ್ತ ನರ ಬಲಿ ನೀಡಿದ, 26 ವರ್ಷದ ಯುವತಿ ಅಲ್ಪಾಯುಷ್ಯಕ್ಕೆ ಹೆದರಿ ಪ್ರಾಣ ಕಳೆದುಕೊಂಡ ರೀತಿಯ ಘಟನೆಗಳು ಪುನರಾವರ್ತನೆ ಆಗುತ್ತಲೇ ಇರುತ್ತವೆ. ಇಂತಹ ಘಟನೆಗಳನ್ನು ತಡೆಯುವುದು ಸರ್ಕಾರ ಹಾಗೂ ಎಲ್ಲ ಪ್ರಜ್ಞಾವಂತರ ಕರ್ತವ್ಯ ಆಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

3 ಕೋಟಿ ನೇಪಾಳದ ಜನಸಂಖ್ಯೆ

1.9 ಕೋಟಿ ಮತದಾರರು

80 ಲಕ್ಷ ಈ ಚುನಾವಣೆಗೂ ಮುನ್ನ ಮತದಾರರ ಪಟ್ಟಿಗೆ ಸೇರ್ಪಡೆಗೊಂಡಿದ್ದ ಯುವ ಮತದಾರರು

60% ಮಾರ್ಚ್ 5ರ ಚುನಾವಣೆಯಲ್ಲಿ ದಾಖಲಾದ ಮತದಾನದ ಪ್ರಮಾಣ

275 'ಪ್ರತಿನಿಧಿ ಸಭಾ'ದ (ಸಂಸತ್ತಿನ ಕೆಳ ಮನೆ) ಸದಸ್ಯ ಬಲ

138 ಬಹುಮತಕ್ಕೆ ಬೇಕಾದ ಸ್ಥಾನಗಳು

ಪ್ರಧಾನಿ ಹುದ್ದೆ ಏರಲು ಸಜ್ಜಾದ ಯುವ ನಾಯಕ ಬಾಲೇಂದ್ರ ಶಾ

ನೇಪಾಳದಲ್ಲಿ ಯುವ ಶಕೆ

ನೇಪಾಳದಲ್ಲಿ ಮಾರ್ಚ್ 5ರಂದು ನಡೆದ ಸಾರ್ವತ್ರಿಕ ಚುನಾವಣೆಯು ಅಲ್ಲಿನ ರಾಜಕೀಯದಲ್ಲಿ ಹೊಸ ಪಲ್ಲಟವನ್ನು ತಂದಿದೆ. ಅಲ್ಲಿನ ಮತದಾರರು ಹಳೆಯ ಪಕ್ಷಗಳನ್ನು ತಿರಸ್ಕರಿಸಿದ್ದಾರೆ. ನಾಲ್ಕು ವರ್ಷಗಳ ಹಿಂದೆ ಸ್ಥಾಪನೆಯಾದ ರಾಷ್ಟ್ರೀಯ ಸ್ವತಂತ್ರ ಪಾರ್ಟಿಯನ್ನು (ಆರ್‌ಎಸ್‌ಪಿ) ಬೆಂಬಲಿಸಿದ್ದಾರೆ. ಈ ಪಕ್ಷದ ನಾಯಕ, 35 ವರ್ಷ ವಯಸ್ಸಿನ ಬಾಲೇಂದ್ರ ಶಾ ಅವರು ಪ್ರಧಾನಿ ಹುದ್ದೆಗೇರುವುದು ಖಚಿತವಾಗಿದೆ. ರಾಜಕೀಯ ಪಕ್ಷಗಳ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ನಿರುದ್ಯೋಗ ಮುಂತಾದ ಗಂಭೀರ ಸಮಸ್ಯೆಗಳಿಂದ ಬೇಸತ್ತು ಕಳೆದ ವರ್ಷ ದಂಗೆ ಎದ್ದು ಸರ್ಕಾರದ ಸದ್ದಡಗಿಸಿದ್ದ ನೇಪಾಳದ 'ಜೆನ್ ಝೀ'ಗಳ ಆಶಯದಂತೆ ಜನರು ಈ ಚುನಾವಣೆಯಲ್ಲಿ ಹೊಸ ರಕ್ತಕ್ಕೆ, ಹೊಸ ರಾಜಕೀಯ ಪಕ್ಷಕ್ಕೆ, ಹೊಸ ಯೋಚನೆಗಳಿಗೆ ಮತ ಹಾಕಿದ್ದಾರೆ. ಚುನಾವಣಾ ಫಲಿತಾಂಶವು ಭಾರತದ ಪುಟ್ಟ ನೆರೆಯ ರಾಷ್ಟ್ರದ ಆಡಳಿತದಲ್ಲಿ ಸ್ಥಿರತೆ ತರುವ ನಿರೀಕ್ಷೆ ಹುಟ್ಟುಹಾಕಿದೆ

ಪ್ರಜಾವಾಣಿ ವಾರ್ತೆ

2025ರ ಸೆಪ್ಟೆಂಬರ್ 9. ಹಿಮಾಲಯದ ಪುಟ್ಟ ರಾಷ್ಟ್ರ ನೇಪಾಳದ ಸಚಿವಾಲಯಗಳ ಕಟ್ಟಡದ ತುದಿಯಲ್ಲಿದ್ದ ಸರಳುಗಳಲ್ಲಿ ಮೂವರು ಯುವಕರು ನಿಂತುಕೊಂಡು ರಾಷ್ಟ್ರಧ್ವಜವನ್ನು ಬೀಸುತ್ತಾ ಸಂಭ್ರಮಿಸಿದ್ದರು. ಅಂದು ಅಸ್ತಿತ್ವದಲ್ಲಿದ್ದ ಸರ್ಕಾರವನ್ನು ಬಲವಂತದಿಂದ ಪತನಗೊಳಿಸಿದ್ದಕ್ಕೆ ಅವರಿಗಾದ ಸಂತೋಷ ಅದು. ಮಾರನೇ ದಿನ ಬಹುತೇಕ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಅದೇ ಫೋಟೊ ರಾರಾಜಿಸಿತ್ತು. ಸಾಮಾಜಿಕ ಜಾಲತಾಣಗಳ ಮೇಲೆ ಸರ್ಕಾರ ನಿರ್ಬಂಧ ವಿಧಿಸಿದ್ದನ್ನೇ ನೆಪವಾಗಿಟ್ಟುಕೊಂಡು 'ಜೆನ್–ಝೀ'ಗಳು ಬೀದಿಗಿಳಿದು ಆಡಳಿತದ ವಿರುದ್ಧ ದಂಗೆ ಎದ್ದು, ಕೆ.ಪಿ. ಶರ್ಮಾ ಓಲಿ ನೇತೃತ್ವದ ಮೈತ್ರಿ ಸರ್ಕಾರವನ್ನು ಪತನಗೊಳಿಸಿ, ಶರ್ಮಾ ಅವರನ್ನು ಪದಚ್ಯುತಿಗೊಳಿಸಿದ್ದು ಈಗ ಇತಿಹಾಸ.

ಸರ್ಕಾರದ ಸದ್ದಡಗಿಸಿದ, 79 ಜನರನ್ನು ಬಲಿ ಪಡೆದ ಆ 'ಯುವ ಕ್ರಾಂತಿ' ನಡೆದು ಏಳು ತಿಂಗಳುಗಳು ಕಳೆದಿವೆ. ಅಂದು ಯುವ ಜನಾಂಗ ಯಾವ ಉದ್ದೇಶ ಇಟ್ಟುಕೊಂಡು ಬೀದಿಗಿಳಿದಿದ್ದರೋ, ಅದೀಗ ನಿಜವಾಗುತ್ತಿರುವಂತೆ ಕಾಣುತ್ತಿದೆ. ಮಾರ್ಚ್ 5ರಂದು ನಡೆದ ಸಾರ್ವತ್ರಿಕ ಚುನಾವಣೆಯು ದೇಶದ ರಾಜಕೀಯ, ಆಡಳಿತದಲ್ಲಿ ಮಹತ್ವದ ಪಲ್ಲಟಕ್ಕೆ ದಾರಿ ಮಾಡಿಕೊಟ್ಟಿದೆ. ಈ ಚುನಾವಣೆಯಲ್ಲಿ ಮತದಾರರು ನೇಪಾಳದ ಹಳೆಯ ಪಕ್ಷಗಳನ್ನು (ನೇಪಾಳ ಕಾಂಗ್ರೆಸ್, ನೇಪಾಳ ಕಮ್ಯುನಿಸ್ಟ್ ಪಕ್ಷದ (ಸಿಪಿಎನ್–ಯುಎಂಎಲ್) ಅಧಿಕಾರದಿಂದ ದೂರ ಇಟ್ಟಿದ್ದಾರೆ. ನಾಲ್ಕು ವರ್ಷಗಳ ಹಿಂದೆಯಷ್ಟೇ ಸ್ಥಾಪನೆಗೊಂಡಿದ್ದ ರಾಷ್ಟ್ರೀಯ ಸ್ವತಂತ್ರ ಪಾರ್ಟಿಗೆ (ಆರ್‌ಎಸ್‌ಪಿ) ಜನರು ಬಹುಪರಾಕ್ ಹೇಳಿದ್ದಾರೆ.

ಆರ್‌ಎಸ್‌ಪಿಯು ಸ್ಪಷ್ಟ ಬಹುಮತ ಪಡೆಯುವುದು ಖಾತ್ರಿಯಾಗಿದ್ದು, ಇದರ ನಾಯಕ, 35 ವರ್ಷ ವಯಸ್ಸಿನ ಬಾಲೇಂದ್ರ ಶಾ ಅಲಿಯಾಸ್ ಬಾಲನ್ ಶಾ ಅವರು ಪ್ರಧಾನಿ ಹುದ್ದೆಗೆ ಏರುವುದು ಖಚಿತವಾಗಿದೆ. ಆರ್‌ಎಸ್‌ಪಿ ಅಭ್ಯರ್ಥಿಯಾಗಿ ಝೂಪ–5 ಕ್ಷೇತ್ರದಿಂದ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ವಿರುದ್ಧ ಸ್ಪರ್ಧಿಸಿದ್ದ ಶಾ ಅವರು ಓಲಿ ಅವರನ್ನು ಭಾರಿ ಅಂತರದಿಂದ (49,614 ಮತಗಳು) ಮಣಿಸಿದ್ದಾರೆ. ಇದರೊಂದಿಗೆ ನೇಪಾಳದ ರಾಜಕೀಯದಲ್ಲಿ 'ಯುವ ಶಕೆ' ಆರಂಭವಾಗುವುದು ಸನ್ನಿಹಿತವಾಗಿದೆ. ಚುನಾವಣಾ ಫಲಿತಾಂಶವು ದೇಶದ ರಾಜಕೀಯ ಮತ್ತು ಆಡಳಿತದಲ್ಲಿ ಯುವ ರಕ್ತಕ್ಕೆ ಅವಕಾಶ ನೀಡಿದ್ದು, ಹೊಸ ಆಲೋಚನೆಗಳಿಗೂ ದಾರಿ ಮಾಡಿಕೊಟ್ಟಿದೆ. ರಾಜಕೀಯ ಅಸ್ಥಿರತೆಯಿಂದ ತತ್ತರಿಸಿದ್ದ ದೇಶದ ಆಡಳಿತದಲ್ಲಿ ಸ್ಥಿರತೆಯನ್ನು ತರುವ ನಿರೀಕ್ಷೆಯನ್ನೂ ಹುಟ್ಟುಹಾಕಿದೆ.

ಬಾಲೇಂದ್ರ ಶಾ

ಯಾರಿದು ಬಾಲೇಂದ್ರ ಶಾ?

ಬಾಲನ್ ಎಂದೇ ಖ್ಯಾತರಾಗಿರುವ ಬಾಲೇಂದ್ರ ಶಾ 2013ರವರೆಗೆ ಮುಖ್ಯವಾಹಿನಿಯಲ್ಲಿ ಇರಲಿಲ್ಲ. ಆದರೆ, ರ್‍ಯಾಪರ್ ಆಗಿದ್ದ ಅವರ ಒಂದು ಹಾಡು (ಸಡಕ್ ಬಾಲಕ್) ರಾತ್ರಿ ಬೆಳಗಾಗುವುದರೊಳಗೆ ಅವರನ್ನು ಸೆಲೆಬ್ರೆಟಿಯನ್ನಾಗಿ ಮಾಡಿತ್ತು. ಬೆಂಗಳೂರಿನ ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸ್ಟ್ರಕ್ಚರಲ್ ಎಂಜಿನಿಯರಿಂಗ್ ಓದಿದ್ದ ಅವರು 2022ರಲ್ಲಿ ಸ್ವತಂತ್ರವಾಗಿ ಕಾಠ್ಮಂಡು ಮೇಯರ್ ಹುದ್ದೆಗೆ ಸ್ಪರ್ಧಿಸಿ ಗೆಲ್ಲುವುದರೊಂದಿಗೆ ಅಲ್ಲಿನ ರಾಜಕೀಯ ಪಕ್ಷಗಳಿಗೆ ಸಡ್ಡು ಹೊಡೆದಿದ್ದರು.

ಕಳೆದ ವರ್ಷದ ಯುವಜನರ ದಂಗೆಯನ್ನು ಬೆಂಬಲಿಸಿದ್ದರು. ಪ್ರಧಾನಿ ಓಲಿ ಅವರನ್ನು 'ಭಯೋತ್ಪಾದಕ' ಎಂದೂ ಜರೆದಿದ್ದರು. ದಂಗೆಯ ಸಂದರ್ಭದಲ್ಲಿ ಮಧ್ಯಂತರ ಸರ್ಕಾರ ರಚನೆಯಾಗುವಾಗಲೇ ದೇಶದ ಯುವಜನರು ಬಾಲನ್ ಅವರು ಪ್ರಧಾನಿಯಾಗಬೇಕು ಎಂದು ಆಗ್ರಹಿಸಿದ್ದರು. ಆದರೆ, ಈ ಪ್ರಸ್ತಾವವನ್ನು ನಿರಾಕರಿಸಿದ್ದ ಶಾ, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಶೀಲಾ ಕಾರ್ಕಿ ಅವರನ್ನು ಬೆಂಬಲಿಸಿದ್ದರು.

ಅಮೆರಿಕ, ಭಾರತ, ಚೀನಾ ವಿರೋಧಿ ನಿಲುವುಗಳನ್ನು ಹೊಂದಿರುವ ಅವರು, ರವಿ ಲಮಿಛಾನೆ ಅವರು 2022ರಲ್ಲಿ ಸ್ಥಾಪಿಸಿದ್ದ ರಾಷ್ಟ್ರೀಯ ಸ್ವತಂತ್ರ ಪಾರ್ಟಿಯನ್ನೂ ಟೀಕಿಸಿದ್ದರು. ಆದರೆ, ಕಳೆದ ವರ್ಷದ ಡಿಸೆಂಬರ್‌ನಲ್ಲಿ ಆರ್‌ಎಸ್‌ಪಿಗೆ ಸೇರ್ಪಡೆಗೊಂಡಿದ್ದರು. ಜನವರಿಯಲ್ಲಿ ಮೇಯರ್ ಹುದ್ದೆಗೆ ರಾಜೀನಾಮೆ ನೀಡಿದ್ದರು. ಮುಖ್ಯವಾಹಿನಿ ಮಾಧ್ಯಮಗಳಿಂದ ಅಂತರ ಕಾಯ್ದುಕೊಂಡು ಬಂದಿರುವ ಅವರು ಸಾಮಾಜಿಕ ಜಾಲತಾಣಗಳ ಮೂಲಕ ನೇಪಾಳದ ಕೋಟ್ಯಂತರ ಯುವ ಜನರನ್ನು ತಲುಪಿದ್ದಾರೆ. ದೇಶದ ಬಗ್ಗೆ, ಆಡಳಿತದ ಬಗ್ಗೆ ಯುವಜನರಲ್ಲಿ ಹೊಸ ಕನಸುಗಳನ್ನು ಬಿತ್ತುವುದರ ಮೂಲಕ ಈಗ ಪ್ರಧಾನಿ ಹುದ್ದೆಯನ್ನು ಏರಲು ಸಜ್ಜಾಗಿದ್ದಾರೆ.

ಗೆಲುವಿಗೆ ಕಾರಣಗಳೇನು?

- 12 ಲಕ್ಷ ಉದ್ಯೋಗ ಸೃಷ್ಟಿಯ ಭರವಸೆ
- ಐದು ವರ್ಷಗಳ ಒಳಗಾಗಿ ನೇಪಾಳಿಗರ ತಲಾ ಆದಾಯವನ್ನು 1,447 ಡಾಲರ್‌ನಿಂದ 3,000 ಡಾಲರ್‌ಗೆ ಹೆಚ್ಚಿಸುವ ವಾಗ್ದಾನ
- ದೇಶದ ಆರ್ಥಿಕತೆಯನ್ನು 10 ಸಾವಿರ ಕೋಟಿ ಡಾಲರ್‌ಗೆ ಏರಿಸುವ ಗುರಿ
- ದೇಶದ ಎಲ್ಲ ನಾಗರಿಕರಿಗೂ ಆರೋಗ್ಯವಿಮೆಯಂತಹ ಯೋಜನೆಗಳ ಘೋಷಣೆ

ಮೈತ್ರಿ, ಅಸ್ಥಿರತೆ, ಜನರ ಆಕ್ರೋಶ

2008ರಲ್ಲಿ ನೇಪಾಳದಲ್ಲಿ ರಾಜಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂತು. ಆರಂಭದಿಂದಲೂ ಆಡಳಿತದಲ್ಲಿ ಸ್ಥಿರತೆ ಎಂಬುದು ಇರಲಿಲ್ಲ. ನೇಪಾಳಿ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳು ಪರಸ್ಪರ ಮೈತ್ರಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದವು. ಈ ಪಕ್ಷಗಳ ನೇತೃತ್ವ ವಹಿಸಿದ್ದವರೆಲ್ಲರೂ ಹಿರಿಯ ರಾಜಕಾರಣಿಗಳು. ಭ್ರಷ್ಟಾಚಾರ, ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಮಕ್ಕಳು, ಕುಟುಂಬದ ಸದಸ್ಯರಿಗೆ ಅಧಿಕಾರ ನೀಡುವುದು ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ 40ರಷ್ಟು ಇರುವ 35 ವರ್ಷದೊಳಗಿನ ಯುವಕರಿಗೆ ಪಥ್ಯವಾಗಿರಲಿಲ್ಲ.

ಇದರೊಂದಿಗೆ, ಆಡಳಿತ ಪಕ್ಷಗಳ ಹಗರಣಗಳು, ಬಡತನ ಹೆಚ್ಚಳ, ದೇಶದ ಅರ್ಥವ್ಯವಸ್ಥೆ ಹದಗೆಡುತ್ತಿದ್ದುದು, ನಿರುದ್ಯೋಗ ಸಮಸ್ಯೆ ಇವೆಲ್ಲವೂ ಯುವ ಸಮುದಾಯದ ಆಕ್ರೋಶಕ್ಕೆ ಕಾರಣವಾಗಿತ್ತು. ಇದರ ವಿರುದ್ಧ ಧ್ವನಿ ಎತ್ತಲು ಅವರು ಬಳಸಿಕೊಂಡಿದ್ದು ಸಾಮಾಜಿಕ ಮಾಧ್ಯಮಗಳನ್ನು. ಇದು ಆಡಳಿತಗಾರರ ಕಣ್ಣು ಕೆಂಪಾಗಿಸಿತ್ತು. ಓಲಿ ಸರ್ಕಾರ ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸಲು ಮುಂದಾಯಿತು. ಇದೊಂದೇ ನೆಪ, ಜೆನ್–ಝೀಗಳಿಗೆ 2025ರ ಸೆಪ್ಟೆಂಬರ್ 8ರಂದು ಬೀದಿಗೆ ಇಳಿಯಲು ಸಾಕಾಯಿತು. ಯುವ ಜನರ ಎರಡು ದಿನಗಳ ದಂಗೆ ಸರ್ಕಾರವೇ ಮಂಡಿಯೂರುವಂತೆ ಮಾಡಿತ್ತು.

ನೇಪಾಳದ ಸಂಸತ್ತಿಗೆ ನಡೆಯುವ ಚುನಾವಣೆ ಕೊಂಚ ಭಿನ್ನ. ಸಂಸತ್ತಿನ ಕೆಳಮನೆಯಾಗಿರುವ ಜನಪ್ರತಿನಿಧಿ ಸಭೆಗೆ ಈ ಚುನಾವಣೆ ನಡೆಯುತ್ತದೆ. ಇದರ ಒಟ್ಟು ಸ್ಥಾನ ಬಲ 275. ಈ ಪೈಕಿ 165 ಸ್ಥಾನಗಳಿಗೆ ಜನರೇ ನೇರವಾಗಿ ಸಂಸದರನ್ನು ಆಯ್ಕೆ ಮಾಡುತ್ತಾರೆ. ಉಳಿದ 110 ಸ್ಥಾನಗಳಿಗೆ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಪಡೆದ ಮತಗಳ ಪ್ರಮಾಣದ ಅನುಸಾರ ಸ್ಥಾನಗಳನ್ನು ಹಂಚಲಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಎರಡು ಮತಪತ್ರಗಳನ್ನು ನೀಡಲಾಗುತ್ತದೆ. ಒಂದು ಮತಪತ್ರವು ಜನಪ್ರತಿನಿಧಿಯ ಆಯ್ಕೆಗೆ ಮೀಸಲಾಗಿದ್ದರೆ, ಇನ್ನೊಂದರಲ್ಲಿ ಯಾವ ಪಕ್ಷಕ್ಕೆ ಮತ ಎಂಬುದನ್ನು ನಮೂದಿಸಬೇಕಾಗುತ್ತದೆ. ಒಟ್ಟಾರೆ 138 ಸ್ಥಾನಗಳನ್ನು ಗೆದ್ದ ಪಕ್ಷ ಅಧಿಕಾರಕ್ಕೆ ಬರುತ್ತದೆ. ಈ ಬಾರಿಯ ಚುನಾವಣೆಯಲ್ಲಿ ಈ ಎರಡರಲ್ಲೂ ಎಸ್‌ಆರ್‌ಪಿ ಮುನ್ನಡೆ ಕಾಯ್ದುಕೊಂಡಿದೆ.

ಆಧಾರ: ಪಿಟಿಐ, ಬಿಬಿಸಿ, ಮಾಧ್ಯಮ ವರದಿಗಳು

ಸುಧಾರಿಸುವುದೇ ಸಂಬಂಧ?

ಭಾರತ ಮತ್ತು ನೇಪಾಳ 1,751 ಕಿ.ಮೀನಷ್ಟು ಉದ್ದದ ಗಡಿ ಹಂಚಿಕೊಂಡಿವೆ. ಐತಿಹಾಸಿಕವಾಗಿ ಎರಡೂ ರಾಷ್ಟ್ರಗಳು ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿವೆ.

ಆದರೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ಅಲ್ಲಿ ಚೀನಾದ ಪ್ರಭಾವ ಹೆಚ್ಚುತ್ತಿದೆ. ಅಲ್ಲಿನ ನಾಯಕರು, ಭಾರತದ ವಿರುದ್ಧವಾಗಿ ಮತ್ತು ಚೀನಾದ ಪರವಾಗಿ ಮಾತನಾಡಿದ್ದಾರೆ. ಗಡಿ ವಿಚಾರವಾಗಿಯೂ ಉಭಯ ದೇಶಗಳ ನಡುವೆ ಬಿಕ್ಕಟ್ಟು ಇದೆ. ಉತ್ತರಾಖಂಡದ ಕಲಾಪಾನಿ, ಲಿಪುಲೇಖ್, ಲಿಂಪ್ಯಾಧುರಾ ಪ್ರದೇಶಗಳು ತನಗೆ ಸೇರಿದ್ದೆಂದು ನೇಪಾಳ ಹೇಳುತ್ತಾ ಬಂದಿದೆ. 2020ರಲ್ಲಿ ಅದು ತನ್ನ ಪರಿಷ್ಕೃತ ಭೂಪಟವನ್ನು ಬಿಡುಗಡೆ ಮಾಡಿದ್ದು ಈ ಪ್ರದೇಶಗಳನ್ನು ಸೇರಿಸಿಕೊಂಡಿದೆ. ನೇಪಾಳದ ಆಂತರಿಕ ವಿಚಾರದಲ್ಲಿ ಭಾರತ ಮೂಗು ತೂರಿಸುತ್ತಿದೆ ಎಂಬ ಅಭಿಪ್ರಾಯ ಅಲ್ಲಿನವರಿಗಿದೆ.

ಈಗ ಪ್ರಧಾನಿಯಾಗಲು ಹೊರಟಿರುವ ಬಾಲೇಂದ್ರ ಶಾ ಅವರು ಭಾರತ ವಿರೋಧಿ ನಿಲುವನ್ನು ಹೊಂದಿದ್ದಾರೆ. 'ನೇಪಾಳ ಮೊದಲು' ಎಂಬ ಪರಿಕಲ್ಪನೆಯನ್ನು ಪ್ರತಿಪಾದಿಸುತ್ತಿರುವ ಅವರು 2023ರಲ್ಲಿ 'ಗ್ರೇಟರ್ ನೇಪಾಳ'ದ ಭೂಪಟವನ್ನು ಪ್ರದರ್ಶಿಸಿದ್ದರು. ಅದರಲ್ಲಿ ಭಾರತದ ಭೂಭಾಗವೂ ಸೇರಿತ್ತು. 'ಸೀತೆಯನ್ನು ಭಾರತದ ಮಗಳು' ಎಂದು ಪ್ರತಿಪಾದಿಸಿದ್ದ ಬಾಲಿವುಡ್ ಸಿನಿಮಾವೊಂದಕ್ಕೆ ನೇಪಾಳದಲ್ಲಿ ನಿರ್ಬಂಧ ವಿಧಿಸಬೇಕು ಎಂದೂ ಅವರು ಆಗ್ರಹಿಸಿದ್ದರು. ದಂಗೆಯ ನಂತರವೂ ಶಾ ಭಾರತದ ವಿರುದ್ಧ ಮಾತನಾಡಿದ್ದಾರೆ. ಹೀಗಾಗಿ, ಮುಂದೆ ಭಾರತ–ನೇಪಾಳ ಸಂಬಂಧ ಹೇಗಿರಲಿದೆ ಎಂಬ ಕುತೂಹಲವೂ ಇದೆ.

ಮಮ್ದಾನಿ ಮನೆ ಎದುರು ಉದ್ವಿಗ್ನ

ನ್ಯೂಯಾರ್ಕ್ (ಎಪಿ/ಎಎಫ್‌ಪಿ): 'ಮುಸ್ಲಿಮರು ನ್ಯೂಯಾರ್ಕ್ ಮೇಲೆ ಹಿಡಿತ ಸಾಧಿಸುವುದನ್ನು ತಡೆಯಿರಿ' ಎಂದು ಆಗ್ರಹಿಸಿ ನ್ಯೂಯಾರ್ಕ್‌ನ ಮೇಯರ್ ಜೋಹ್ರಾನ್ ಮಮ್ದಾನಿ ಅವರ ನಿವಾಸದ ಎದುರು ಇಸ್ಲಾಂ ವಿರೋಧಿ ಪ್ರತಿಭಟನಕಾರರು ಶನಿವಾರ ಪ್ರತಿಭಟನೆ ನಡೆಸಿದ್ದರು. ಇದೇ ವೇಳೆ ಇಸ್ಲಾಂ ವಿರೋಧಿ ಪ್ರತಿಭಟನೆಗೆ ಪ್ರತಿಯಾಗಿ ನಗರದ ಕೆಲವರು ಮೆರವಣಿಗೆ ನಡೆಸಿದರು. ಇದರಿಂದ ನಗರದಲ್ಲಿ ಕೆಲ ಕಾಲ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು.

ಮೆರವಣಿಗೆಯಲ್ಲಿ ಭಾಗವಹಿಸಿದ್ದ ಪ್ರತಿಭಟನಕಾರರೊಬ್ಬರು ಇಸ್ಲಾಂ ವಿರೋಧಿ ಪ್ರತಿಭಟನಕಾರರ ಮೇಲೆ ಸ್ಫೋಟಕ ವಸ್ತುವೊಂದನ್ನು ಎಸೆದ ಘಟನೆ ನಡೆದಿದೆ. ಇದಕ್ಕೂ ಮೊದಲು ಇಸ್ಲಾಂ ವಿರೋಧಿ ಪ್ರತಿಭಟನಕಾರರು ಮೆರವಣಿಗೆಯಲ್ಲಿ ಭಾಗವಹಿಸಿದ್ದವರ ಮೇಲೆ ಪೆಪ್ಪರ್ ಸ್ಪ್ರೇ ಬಳಸಿದ್ದರು.

'ಘಟನೆ ಬಗ್ಗೆ ತನಿಖೆ ನಡೆಯುತ್ತಿದೆ. ಇರಾನ್‌ನಲ್ಲಿನ ಯುದ್ಧದ ಸಂಬಂಧ ಈ ಪ್ರತಿಭಟನೆ ನಡೆದಿದೆಯೇ ಎಂಬ ಬಗ್ಗೆ ಯಾವ ಮಾಹಿತಿಯೂ ಇಲ್ಲ' ಎಂದು ಇಲ್ಲಿನ ಕಮಿಷನರ್ ಜೆಸಿಕಾ ಟಿಚ್ ಮಾಹಿತಿ ನೀಡಿದರು.

'ಆರು ಮಂದಿಯನ್ನು ಮತ್ತು ಸ್ಫೋಟಕ ಇದ್ದ ವಸ್ತು ಬಳಸಿದ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ. 20 ಪ್ರತಿಭಟನಕಾರರಿದ್ದರು ಮತ್ತು ಮೆರವಣಿಗೆಯಲ್ಲಿ 125 ಮಂದಿ ಇದ್ದರು. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ. ಶನಿವಾರ ಮಮ್ದಾನಿ ಮನೆಯಲ್ಲಿರಲಿಲ್ಲ' ಎಂದರು.

'ನಾವು ಪ್ರಜಾಸತ್ತಾತ್ಮಕವಾಗಿ ಮೇಯರ್ ಅನ್ನು ಆಯ್ಕೆ ಮಾಡಿದ್ದೇವೆ. ನಮ್ಮ ನಗರದಲ್ಲಿ ದ್ವೇಷಕ್ಕೆ ಜಾಗವಿಲ್ಲ ಎಂಬುದನ್ನು ತೋರಿಸಲೇಬೇಕು. ಲ್ಯಾಂಗ್ ಒಬ್ಬ ಮೂರ್ಖ' ಎಂದು ಪ್ರತಿಭಟನೆ ವಿರೋಧಿಸಿ ನಡೆಸಲಾಗುತ್ತಿದ್ದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಮಿಯಾ ಎಂಬುವರು ಅಭಿಪ್ರಾಯಪಟ್ಟರು.

ಇಸ್ಲಾಮೀಕರಣಕ್ಕೆ ವಿರೋಧ

ಬಲಪಂಥೀಯ ವಿಚಾರಗಳ ಕುರಿತು ವಿಡಿಯೊ ಮಾಡುವ ಜಾಕ್ ಲ್ಯಾಂಗ್ ಎಂಬ ಇನ್‌ಫ್ಲುಯೆನ್ಸರ್ ಇಸ್ಲಾಂ ವಿರೋಧಿ ಪ್ರತಿಭಟನೆಯನ್ನು ಆಯೋಜಿಸಿದ್ದರು. 'ನಗರವು 'ಇಸ್ಲಾಮೀಕರಣ' ಗೊಂಡಿದೆ. ಸಾರ್ವಜನಿಕ ಸ್ಥಳಗಳಲ್ಲಿ ಮುಸ್ಲಿಮರಿಗೆ ಪ್ರಾರ್ಥನೆಗೆ ಅವಕಾಶ ನೀಡುವುದನ್ನು ನಿಲ್ಲಿಸಬೇಕು' ಎಂದು ಲ್ಯಾಂಗ್ ಪ್ರತಿಭಟನೆಯ ವೇಳೆ ಹೇಳಿದರು.

ಮೊಬೈಲ್ ಡಿಬಾರ್ ಆದೇಶಕ್ಕೆ ಅಸ್ತು

ಒಂದನೇ ಪುಟದಿಂದ...

2024–25ನೇ ಸಾಲಿನ ಸಿಬಿಎಸ್‌ಇ 12ನೇ ತರಗತಿಯ ದೈಹಿಕ ಶಿಕ್ಷಣ, ಭೌತ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ವಿಷಯಗಳ ಪರೀಕ್ಷೆ 2025ರ ಫೆ. 17ರಿಂದ ಮಾರ್ಚ್ 3ರವರೆಗೆ ನಡೆದಿತ್ತು. ಮೊದಲ ದಿನ ನಡೆದಿದ್ದ 'ದೈಹಿಕ ಶಿಕ್ಷಣ ಪರೀಕ್ಷೆ'ಗೆ ವಿದ್ಯಾರ್ಥಿ ತಡವಾಗಿ ಬಂದಿದ್ದ. ವಿಳಂಬಕ್ಕೆ, ಬೆಂಗಳೂರು ದಕ್ಷಿಣ ಭಾಗದಲ್ಲಿರುವ ಪರೀಕ್ಷಾ ಕೇಂದ್ರಕ್ಕೂ ತನ್ನ ಮನೆಗೂ 23 ಕಿ.ಮೀ ಅಂತರ ಇದೆ ಎಂದು ಕಾರಣ ನೀಡಿದ್ದ.

ವಿದ್ಯಾರ್ಥಿ ಪರೀಕ್ಷೆ ಬರೆಯಲು ಆರಂಭಿಸಿದ 25 ನಿಮಿಷಗಳ ನಂತರ ಕೊಠಡಿಯ 'ಪರೀಕ್ಷಾ ನಿರೀಕ್ಷಕ' ವಿದ್ಯಾರ್ಥಿಯ ಜೇಬಿನಲ್ಲಿ ಮೊಬೈಲ್ ಫೋನ್ ಇರುವುದನ್ನು ಗಮನಿಸಿ ಅದನ್ನು ತಮ್ಮ ವಶಕ್ಕೆ ಪಡೆದಿದ್ದರು. ನಂತರ ವಿದ್ಯಾರ್ಥಿಗೆ ಬೇರೆ ನಮೂನೆಯ ಪ್ರಶ್ನೆ ಪತ್ರಿಕೆ ನೀಡಿ ಉತ್ತರ ಬರೆಯಲು ಸೂಚಿಸಲಾಗಿತ್ತು. ಈ ಕಾರಣದಿಂದ, ಸಿಬಿಎಸ್‌ಇ ಪರೀಕ್ಷಾ ನಿಯಂತ್ರಣ ಕೇಂದ್ರವು ವಿದ್ಯಾರ್ಥಿಯನ್ನು ಆ ಶೈಕ್ಷಣಿಕ ಮತ್ತು ಮುಂದಿನ ಒಂದು ವರ್ಷ ಪರೀಕ್ಷೆ ಬರೆಯದಂತೆ ಡಿಬಾರ್ ಮಾಡಿ ಆದೇಶಿಸಿತ್ತು.

ಡಿಬಾರ್ ಆದೇಶವನ್ನು ವಿದ್ಯಾರ್ಥಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದ. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, 'ಸಿಬಿಎಸ್‌ಇ ಆದೇಶ ಅನ್ಯಾಯದ ಕ್ರಮ ಮತ್ತು ದುರುದ್ದೇಶಪೂರಿತ ನಡೆ. ವಿಚಾರಣೆ ವೇಳೆ ವಿದ್ಯಾರ್ಥಿಯ ಬಳಿಯಿದ್ದ ಮೊಬೈಲ್ ಫೋನ್‌ನಲ್ಲಿ ಯಾವುದೇ ನಕಲು ಸಾಮಗ್ರಿ ಇರಲಿಲ್ಲ ಮತ್ತು ಆತ ಮೊಬೈಲ್‌ನಿಂದ ಏನನ್ನೂ ನಕಲು ಮಾಡಿಲ್ಲ ಎಂಬುದು ಈಗಾಗಲೇ ದೃಢಪಟ್ಟಿದೆ. ಹೀಗಿರುವಾಗ, ವಿದ್ಯಾರ್ಥಿ ಸಹಜವಾಗಿಯೇ ಸಂದೇಹದ ಲಾಭ ಪಡೆಯಲು ಅರ್ಹವಾಗಿದ್ದಾನೆ' ಎಂಬ ಅಭಿಪ್ರಾಯದಲ್ಲಿ ಸಿಬಿಎಸ್‌ಇ ಹೊರಡಿಸಿದ್ದ ಡಿಬಾರ್ ಆದೇಶವನ್ನು ರದ್ದುಪಡಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಸಿಬಿಎಸ್‌ಇ ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿ ವಿಚಾರಣೆ ನಡೆಸಿರುವ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ, ಏಕಸದಸ್ಯ ನ್ಯಾಯಪೀಠದ ಆದೇಶವನ್ನು ರದ್ದುಪಡಿಸಿದೆ.

ಶೇ 92ರಷ್ಟು ಅಂಕ ಪಡೆದ ಸಾಧಕ

ಸಿಬಿಎಸ್‌ಇ ರಚಿಸಿದ್ದ ಸಮಿತಿ ನಡೆಸಿದ ವಿಚಾರಣೆ ವೇಳೆ, 'ವಿದ್ಯಾರ್ಥಿ ಬಳಿಯಿದ್ದ ಮೊಬೈಲ್ ಫೋನ್‌ನಲ್ಲಿ ಯಾವುದೇ ನಕಲು ಸಾಮಗ್ರಿಗಳಿರಲಿಲ್ಲ ಅಥವಾ ವಿದ್ಯಾರ್ಥಿ ಮೊಬೈಲ್ ಫೋನ್‌ನಿಂದ ಏನನ್ನೂ ನಕಲು ಮಾಡಿಲ್ಲ' ಎಂದು ಕಂಡುಬಂದಿತ್ತು. ಆದಾಗ್ಯೂ, ಸಿಬಿಎಸ್‌ಇ, ಪರೀಕ್ಷಾ ಬೈ–ಲಾಗಳಿಗೆ ಅನುಗುಣವಾಗಿ ತಾನು ರೂಪಿಸಿರುವ, 'ಅನುಚಿತ ಸಾಧನ ಬಳಕೆ' (ಯುಎಫ್‌ಎಂ) ಮಾರ್ಗಸೂಚಿ ಅನ್ವಯ ವಿದ್ಯಾರ್ಥಿಯನ್ನು ಡಿಬಾರ್ ಮಾಡಿ ಆದೇಶಿಸಿತ್ತು. ವಿಶೇಷವೆಂದರೆ ಈ ವಿದ್ಯಾರ್ಥಿ 10ನೇ ತರಗತಿಯಲ್ಲಿ ಶೇ 92ರಷ್ಟು ಅಂಕ ಪಡೆದಿದ್ದಾನೆ. ಅಂತೆಯೇ, 2025ರಲ್ಲಿ ಬರೆದಿದ್ದ ಜೆಇಇ-ಅಡ್ವಾನ್ಸ್ಡ್ ಪರೀಕ್ಷೆಯಲ್ಲೂ ಯಶಸ್ವಿಯಾಗಿದ್ದಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಿಳೆಯೊಬ್ಬರು ತಮ್ಮ ಫ್ಲ್ಯಾಟ್‌ನಲ್ಲಿ ಕುಳಿತು, ನೇರಪ್ರಸಾರದಲ್ಲಿ ಮಾತನಾಡುತ್ತಿರುವಾಗ ಅವರ ಮನೆ ಇರುವ ಅಪಾರ್ಟ್‌ಮೆಂಟ್ ಮೇಲೆ ಕ್ಷಿಪಣಿ ದಾಳಿ ನಡೆಸಿದ ವಿಡಿಯೊ ಒಂದನ್ನು ಹಲವು ಇಂಗ್ಲಿಷ್ ಮಾಧ್ಯಮಗಳು ಪ್ರಸಾರ ಮಾಡಿವೆ ಹಾಗೂ ಜಾಲತಾಣಗಳ ಬಳಕೆದಾರರು ಇತ್ತೀಚೆಗೆ ಹಂಚಿಕೊಂಡಿದ್ದಾರೆ. ಅದು ದುಬೈ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿರುವ ವಿಡಿಯೊ ಎಂದು ಪ್ರತಿಪಾದಿಸಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ತುಣುಕಿನ ಕೀಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ಸರ್ಚ್ ವಿಧಾನದಲ್ಲಿ ಹುಡುಕಿದಾಗ ವಿದೇಶದಲ್ಲಿ ಕೆಲಸ ಮಾಡುವ ಫಿಲಿಪ್ಪೀನ್ಸ್‌ನ ಕಾರ್ಮಿಕ ಮಹಿಳೆ ಎಲ್ಡಿನ್ ಕ್ಯಾಂಡಿಡೊ ಲ್ಯಾಕ್ಸ್ ಎಂಬವರ ಯೂಟ್ಯೂಬ್ ಚಾನೆಲ್‌ನಲ್ಲಿ ಇದೇ ವಿಡಿಯೊ 2020ರ ಆಗಸ್ಟ್ 6ರಂದು ಪೋಸ್ಟ್ ಮಾಡಿರುವುದು ಕಂಡು ಬಂತು. ಅದು ಲೆಬನಾನ್‌ನ ಬೈರೂತ್ ಮೇಲೆ ನಡೆದ ದಾಳಿಯ ಸಂದರ್ಭದ ವಿಡಿಯೊ. 'ನಾನು ನೇರಪ್ರಸಾರ ಮಾಡುತ್ತಿರುವಾಗ ನಡೆದ ಸ್ಫೋಟ' ಎಂದು ಲ್ಯಾಕ್ಸ್ ಬರೆದುಕೊಂಡಿದ್ದಾರೆ. ಅಲ್ಲದೇ, ಇದೇ 3ರಂದು ಲ್ಯಾಕ್ಸ್ ಅವರು ಫೇಸ್‌ಬುಕ್ ಪುಟದಲ್ಲಿ ಸ್ಪಷ್ಟನೆ ನೀಡಿದ್ದು 'ಇದು ದುಬೈ ವಿಡಿಯೊ ಅಲ್ಲ. 2020ರ ಲೆಬನಾನ್‌ನದ್ದು' ಎಂದು ಹೇಳಿದ್ದಾರೆ. ಹಳೆಯ ವಿಡಿಯೊವನ್ನು ಈಗ ದುಬೈ ಮೇಲೆ ಇರಾನ್ ಕ್ಷಿಪಣಿ ದಾಳಿ ಮಾಡಿದ ವಿಡಿಯೊ ಎಂದು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಸ್ತ್ರೀ ಎಂದರೆ ಅಷ್ಟೇ ಸಾಕೆ?

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ಜಾಹೀರಾತು-1. ಎರಡು ರೂಪಾಯಿಯ ಕಾಫಿ ಪುಡಿ ಸ್ಯಾಷೆಯೊಂದನ್ನು ತಂದು 'ಪ್ರಿಯಾ, ಓಡಿ ಬಾ' ಎಂದು ತನ್ನ ಮಡದಿಯನ್ನು ಕರೆದು ತೋರಿಸುತ್ತಾನೆ. ಅವಳು ಪ್ರಿಯಕರ ಕರೆದಷ್ಟೇ ವೇಗವಾಗಿ ಬಂದು ನೋಡಿ ಹೇಳುತ್ತಾಳೆ: 'ಪ್ರಶಾಂತ್, ಬೇಗ ಹೋಗಿ ಕಾಫಿ ಮಾಡಿ ಕೊಂಡು ಬಾ'. ಅವನು ಅಡುಗೆ ಮನೆಗೆ ಹೋಗಿ ಕಾಫಿ ಮಾಡಿ ಎರಡೂ ಕೈಯಲ್ಲಿ ಕಾಫಿ ತುಂಬಿದ ಕಪ್‌ಗಳನ್ನು ಹಿಡಿದುಕೊಂಡು ನಲಿಯುತ್ತಾ ಬಂದು ತನ್ನ ನಲ್ಲೆಗೆ ಕೊಟ್ಟು ತಾನೂ ಕುಡಿಯುತ್ತಾನೆ.

ಜಾಹೀರಾತು:2. ಹುಡುಗಿಯೊಬ್ಬಳು ಕ್ರಿಕೆಟ್ ಆಡಲು ಹುಡುಗರೊಂದಿಗೆ ಬಂದಿದ್ದಾಳೆ. ಹುಡುಗ ಮಾಡಿದ ವೇಗದ ಬೌಲಿಂಗ್ ಎದುರಿಸಲು ಹುಡುಗಿ ತಡವರಿಸಿದಾಗ ಫೀಲ್ಡಿಂಗ್ ಮಾಡುತ್ತಿದ್ದ ಇನ್ನೊಬ್ಬ ಆ ಹುಡುಗನಿಗೆ, 'ಅವಳು ಹುಡುಗಿ ಕಣೋ, ತುಸು ನಿಧಾನವಾಗಿ ಬೌಲ್ ಮಾಡು' ಅನ್ನುತ್ತಾನೆ. ಹುಡುಗಿ ತನಗೆ ಅಂತಹ ರಿಯಾಯಿತಿ ಏನೂ ಬೇಕಿಲ್ಲ ಅಂತ ಅವನಿಗೆ ಉತ್ತರಿಸಲು ಹೋದಾಗ ಧೋನಿ ಬಂದು 'ಅವರಿಗೆ ಬಾಯಿಂದ ಅಲ್ಲ, ಬ್ಯಾಟಿಂದ ಉತ್ತರ ಕೊಡಬೇಕು' ಎನ್ನುತ್ತಾನೆ. ನಂತರ ಹುಡುಗಿಯ ಬ್ಯಾಟ್‌ಗೆ ಸಿಕ್ಕ ಚೆಂಡು ಬೌಂಡರಿ ದಾಟಿ ಸ್ಕೋರ್ ಬೋರ್ಡ್‌ನಲ್ಲಿದ್ದ BATSMAN ಎಂಬ ಅಕ್ಷರಗಳಿಗೆ ಬಡಿದು ಅದರಲ್ಲಿದ್ದ MAN ಅಕ್ಷರಗಳು ಕಳಚುತ್ತವೆ.

ವ್ಯಾಪಾರಿ ದೃಷ್ಟಿಯ ಸೃಷ್ಟಿಗಳಾಗಿದ್ದರೂ ಈ ಎರಡು ಜಾಹೀರಾತುಗಳು ಕಾಲಕಾಲಕ್ಕೆ ಬದಲಾಗಬೇಕಾದ ಸಾಮಾಜಿಕ ಮನೋಧರ್ಮವನ್ನು, ಸಮಾಜದ ಗತಿಗೆ ತನ್ನನ್ನು ಹೊಂದಿಸಿಕೊಳ್ಳಲು ಗಂಡು ಸಜ್ಜಾಗಬೇಕಾದ ಅನಿವಾರ್ಯವನ್ನು ಹೇಳುತ್ತವೆ. ಹೆಣ್ಣು ಅಡಿಗೆ ಮನೆಗೆ ಸೀಮಿತವೆಂದು ಭಾವಿಸಿ ಹಾಗೆಯೇ ನಡೆಸಿಕೊಂಡ ಗಂಡಸಿನ ಅಹಂಕಾರ, ಕಳೆದ ಎರಡು ಮೂರು ದಶಕಗಳಲ್ಲಿ ಸ್ವಲ್ಪಮಟ್ಟಿಗಾದರೂ ಕರಗಿದಂತೆ ಕಾಣುತ್ತಿದೆ. ಮನೆಯಲ್ಲಿದ್ದೂ, ಮನೆಯಿಂದ ಹೊರಗೆ ಹೋಗಿ ದುಡಿಯುತ್ತಿರುವ ಮಹಿಳೆಯರ ವರಮಾನ ಅನೇಕ ಗಂಡಸರ ನೆಮ್ಮದಿಗೆ ಕಾರಣವಾದಂತೆ ಕೆಲವರ ಅಶಾಂತಿಗೂ ಆಹಾರವಾದಂತಿದೆ. ಗಂಡಿನ ರೂಢಿಗತ ವರ್ತನೆಯಲ್ಲಿನ ಒರಟುತನ ಬದಲಾಗಲು ಕಾನೂನಿನ ಭಯ ಮತ್ತು ಕೆಲವೊಮ್ಮೆ ಸ್ವಯಂ ತಿಳಿವಳಿಕೆಯೂ ಕಾರಣವಾಗಿದೆ. ಇದು ಮಹಿಳಾ ಸಮುದಾಯ ತಣ್ಣಗೆ ಪರಂಪರೆಯೊಂದಿಗೆ ವರ್ತಮಾನವನ್ನು ನಿರ್ಭೀತವಾಗಿ ಮುಖಾಮುಖಿಯಾಗಿಸುತ್ತಿರುವ ಸಂದರ್ಭ. ಚರಿತ್ರೆಯ ಭ್ರಮಿತ ಧಾರ್ಮಿಕ ವಿಕಾರಗಳನ್ನು ಹಸಿಹಸಿಯಾಗಿ ಸುರಿದು ಪ್ರತೀಕಾರದ ಮಾತನಾಡುವ ಅವಿವೇಕದ ನಡುವೆ ಹೆಣ್ಣು ವಿವೇಕದ ಸಾಕ್ಷಿಯಾಗಿ ಎದುರಾಗಿದ್ದಾಳೆ.

ಪರಸ್ಪರ ಕ್ಷಮೆ ಪ್ರೀತಿ ಗೌರವಗಳೇ ಹೆಣ್ಣು ಗಂಡಿನ ಘನತೆಯನ್ನು ಎತ್ತಿ ಹಿಡಿಯುವ ಶಕ್ತಿಗಳಾಗಿವೆ. ಅವರ ನಡುವಿನ ಬಾಂಧವ್ಯಕ್ಕೆ ಅವೇ ಸ್ನೇಹ ಸೇತು. ಪ್ರತಿಷ್ಠೆ ಮತ್ತು ಸಣ್ಣತನಗಳು ಇಬ್ಬರ ನಡುವಿನ ಆರ್ದ್ರತೆಗೆ ಅಡ್ಡಿಯಾಗಿವೆ. ಬಾಳಿನ ಸೊಗಸನ್ನು ಅರಿಯುವಲ್ಲಿನ ತೊಡಕುಗಳಾಗಿವೆ. ಗಂಡಿನ ದುಡುಕುತನವನ್ನು ಕ್ಷಮಿಸಿ ಕಾಂತಾಸಮ್ಮಿತ ಗುಣದಿಂದ ಅವನೊಳಗಿನ ಕುರುಡು ರಕ್ಕಸನನ್ನು ಅಡಗಿಸುವುದು ಹೆಣ್ಣಿಗೆ ಕಷ್ಟವಲ್ಲ. ತಪ್ಪು ಎಂದು ಕಂಡಾಗ ಅವನನ್ನು ಪ್ರೀತಿಯಿಂದ ತಬ್ಬಿ ಎದೆಗೆ ತುಂಬಿಕೊಂಡು ತಾಯ್ತನ ತೋರಿದರೆ ಎಂತಹ ಕಲ್ಲೂ ಕರಗುತ್ತದೆ. ಹೆಣ್ಣಿನ ಔದಾರ್ಯವನ್ನು ಅರಿಯುವಲ್ಲಿ ಗಂಡು ಹಿಂದೆ ಬಿದ್ದರೆ ದುರಂತ ಶತಸಿದ್ಧ. ಶತಮಾನಗಳ ಕಾಲದ ಅವಮಾನ, ಅನುಮಾನಗಳ ಕುಲುಮೆಯಲ್ಲಿ ಬಸವಳಿದ ಹೆಣ್ಣಿನ ಗೆಲುವಿಗೆ ಮರೆಯಲ್ಲಿದ್ದು ಸಂಭ್ರಮಿಸುವುದು, ಮುಕ್ತವಾಗಿ ಅಭಿನಂದಿಸುವುದು, ಒಂಟಿತನದಲ್ಲಿ ಅವಳೊಂದಿಗೆ ಜೊತೆಯಾಗಿ ಸಾಗುವುದು ಗಂಡಿನ ಹೆಮ್ಮೆಯಾಗಬೇಕು.

ಧರ್ಮಮೂಲ ಸಾಮಾಜಿಕ ಬಂಧನಗಳನ್ನು ಹೆಣ್ಣನ್ನು ಆಳಲು ಬೇಕಾದ ಸಾಧನಗಳಂತೆ ಬಳಸಿಕೊಳ್ಳುವ ಗಂಡು ಕುಲಕ್ಕೆ ತಾಯಾಗಿ, ಮಡದಿಯಾಗಿ, ಮಗಳಾಗಿ ತೋರುವ ಬೆಚ್ಚನೆಯ ಮಮತೆ ಅವನ ಅಸ್ತಿತ್ವಕ್ಕೆ ಸಾಕ್ಷಿ. ಆಕೆಯ ಮೇಲೆ ದೈಹಿಕ ಮಾನಸಿಕ ದೌರ್ಜನ್ಯ ನಡೆಸಲು ಗಂಡಸಿಗೆ ಅಧಿಕಾರ ಕೊಡುವ ಧಾರ್ಮಿಕ ಪ್ರಭುತ್ವ ಮತ್ತು ಅದನ್ನು ಪ್ರಶ್ನಿಸಿ ಖಂಡಿಸದ ಜಾಗತಿಕ ಮೌನ ಅಸಹ್ಯಕರವಾಗಿದೆ. ಧಾರ್ಮಿಕರು ಅಂತ ಅನಿಸಿಕೊಂಡವರು ಯುದ್ಧೋನ್ಮಾದ ತುಂಬಿ ತುಳುಕುವ ಅಸ್ವಸ್ಥ ಮನಃಸ್ಥಿತಿಯ ವ್ಯಕ್ತಿಯೊಬ್ಬನನ್ನು ಸುತ್ತುವರಿದು ಅವನ ಶ್ರೇಯೋಭಿವೃದ್ಧಿಗೆ ಪ್ರಾರ್ಥಿಸುವ ಮಟ್ಟದ ನೈತಿಕ ಅಧಃಪತನವನ್ನು ಕಾಣುತ್ತಿದ್ದೇವೆ. ಇಂತಹ ಒಣ ಧಾರ್ಮಿಕ ಡಾಂಭಿಕರು ಉದುರಿಸುವ, ಪುಸ್ತಕಗಳ ಸಾಲುಗಳಲ್ಲಿ ಅಡಗಿರುವ ಮಾತೆ, ಶಕ್ತಿ ದೇವತೆ, ಗಂಧವತಿಯಂತಹ ನುಡಿಮುತ್ತುಗಳು ಆಕರ್ಷಕವೇನೋ ಹೌದು. ಆದರೆ ವಾಸ್ತವ ಬೇರೆಯೇ ಇದೆ. ಈ ಯಾವ ಬಗೆಯ ಬಂಧನಗಳೂ ಆಕೆಯ ಅಂತಃಕರಣದ ಆರ್ದ್ರತೆಯನ್ನು ಒಂಚೂರೂ ಬತ್ತಿಸಿಲ್ಲ. ಆದರೂ ಕಟ್ಟಕಡೆಗೊಮ್ಮೆ ಉಳಿಯುವ ಪ್ರಶ್ನೆ 'ಆಕೆಗೆ ಸ್ತ್ರೀ ಎಂದರೆ ಅಷ್ಟೇ ಸಾಕೆ?' ❖

ಗುಂಡಣ್ಣ

ಪದಬಂಧ 6338

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಜಯವಿದ್ದರೂ ಇದು ಸೋಲು! (4)
3.ಸಂಸಾರಬಂಧನಕ್ಕೆ ಒಳಗಾದವನು (2)
5.ಈಕೆ ಲಗ್ನವಾಗುತ್ತಿರುವವಳು (5)
7.ಪದಾತಿ ಸೈನ್ಯ (3)
8.ನೆಲೆಗೊಳಿಸುವುದನ್ನು ಹೀಗೂ ಹೇಳಬಹುದು (5)
11.ಸತಿ ನೀಡಿರುವ ಒಪ್ಪಿಗೆ (3)
12.ಒಂದನ್ನೊಂದು ಅಗಲದೇ ಇರುವಿಕೆ (5)
14.ಬಿದಿರಿನಿಂದ ಹೆಣೆದ ಬುಟ್ಟಿ (2)
15.ಕೂಡುವ ಲೆಕ್ಕವಿದು (4)

ಮೇಲಿಂದ ಕೆಳಕ್ಕೆ

1.ರಾಜನ ಗೃಹವಿದು (4)
2.ಜನ್ಮವಿಲ್ಲಿ ವಿರಳವಾಗಿ ಬಂದಿದೆ (3)
4.ಅಪರೂಪವಾದುದನ್ನು ಹೀಗೆನ್ನಿ (3)
6.ಈಕೆ ಪತಿವ್ರತೆ (3)
7.ರತಿಪತಿಯಿಂದ ಮೂಡಿರುವ ಆಸೆ (3)
8.ಗತಿಯಲ್ಲಿ ಕೊನೆಗೊಂಡಿರುವ ಏಳಿಗೆ (3)
9.ಪದ ಹೇಳಿ ಪಡೆದ ಡಿಗ್ರಿ (3)
10.ನೆನಪಿನಲ್ಲಿಟ್ಟುಕೊಳ್ಳುವಿಕೆ (4)
11.ಸರಕ್ಕನೆ ತಂದಿರುವ ಸಾಮಾನು (3)
13.ಈತ ನಾವೆಯನ್ನು ನಡೆಸುವವನು (3)



6337ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹಸ್ತಸಾಮುದ್ರಿಕ 4.ರಥೋತ್ಸವ 5.ರಸಭಂಗ 7.ಕತ್ತರಿ 10.ಕುರುಕ 11.ಅತಿರೇಕ 13.ಬಾಲರವಿ 15.ಪ್ರಣಯಕಲಹ

ಮೇಲಿಂದ ಕೆಳಕ್ಕೆ: 1.ಹಗುರ 2.ಕೆರ 3.ನವರಂಗ 6.ಭಂಡಬಾಳು 7.ಕನಕ 8.ರಿಯಾಯಿತಿ 9.ಕಾರುಬಾರು 12.ಕಲಹ 14.ವಿಪ್ರ

ಸುಡೊಕು 6722

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			3		8			2
	7	1		6		3	8	
9					2			6
							6	
	2	6	9	4	7			
	4				1		7	5
			1		9	8		
8		7					9	
1	9		8		6	4		3

6721 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಮಾರ್ಚ್ 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಷಷ್ಠಿ ಗಂ. 23-28 ನಕ್ಷತ್ರ: ವಿಶಾಖ ಗಂ. 16-12 ಯೋಗ: ವ್ಯಾಘಾತ ಗಂ. 7-36 ಕರಣ: ಗರ ಗಂ 10-17 ಕುಂಭ ಮಾಸದ 25 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-45 ಸೂರ್ಯಾಸ್ತ : 06-37, ಮುಸ್ಲಿಂ ದಿನಾಂಕ : 19 ರಂಜಾನ್, ಅದೃಷ್ಟ ಸಂಖ್ಯೆ : 7, 1

ಮೇಷ: ಯಾವುದೇ ವಾದ ವಿವಾದಗಳು ನಡೆದರೂ ಕಾರ್ಯಸಾಧನೆಗೆ ಅಡ್ಡಿಯಾಗಲಾರದು. ದ್ವಂದ್ವ ರೀತಿಯ ಆಲೋಚನೆಗಳಿಂದ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬವು ಮುಂದುವರಿಯುವುದು.

ವೃಷಭ: ದೂರ ದೃಷ್ಟಿ ಇಟ್ಟುಕೊಂಡು ಪ್ರಪಂಚದ ಓಟಕ್ಕೆ ಸರಿಯಾಗಿ ಕಾರ್ಯಪ್ರವೃತ್ತರಾಗುವುದು ಉತ್ತಮ. ಸಾಲದ ರೂಪದಲ್ಲಿ ಯಾರಿಗೂ ಹಣ ನೀಡಬೇಡಿ. ಅತಿಥಿಗಳ ಆಗಮನ ಸಂತಸ ತಂದೀತು.

ಮಿಥುನ: ಹೊಸ ಹೂಡಿಕೆ ಮತ್ತು ಒಪ್ಪಂದ ನಿಶ್ಚಿತ ಹಂತ ತಲುಪಿದ್ದಕ್ಕೆ ಸಂತೃಪ್ತಿಯ ಭಾವವಿರುವುದು. ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು. ಅತಿಥಿ ಸತ್ಕಾರದಂಥ ಕಾರ್ಯವನ್ನು ಕೈಗೊಳ್ಳಬಹುದು.

ಕರ್ಕಾಟಕ: ವಿಜಯ ನಿಮ್ಮದೇ ಆದ್ದರಿಂದ ನೂತನ ಚರ ಅಥವಾ ಸ್ಥಿರ ಆಸ್ತಿ ಸಂಪಾದಿಸುವ ಬಗ್ಗೆ ಪ್ರಯತ್ನವಿರಲಿ. ವಿದ್ಯುತ್ ಇಲಾಖೆ ಸಿಬ್ಬಂದಿಗೆ ತುರ್ತು ಕೆಲಸಗಳ ನಿರ್ವಹಣೆ ಹೆಚ್ಚಾಗಲಿದೆ.

ಸಿಂಹ: ನೂತನವಾಗಿ ಪರಿಚಯವಾದ ರಾಜಕೀಯ ವ್ಯಕ್ತಿಯೊಂದಿಗೆ ಸಂಬಂಧವು ಉತ್ತಮಗೊಳ್ಳುವುದು. ಗುರುಗಳ ಮಾರ್ಗದರ್ಶನದ ಮಹತ್ವ ತಿಳಿಯುವುದು. ಒದಗಿಬರುವ ಅವಕಾಶಗಳು ಅನುಕೂಲವಾಗಿರುವುದು.

ಕನ್ಯಾ: ಉನ್ನತ ವ್ಯಾಸಂಗ ಮಾಡುತ್ತಿರುವವರಿಗೆ ಉದ್ಯೋಗದ ಬಗ್ಗೆ ಆಸಕ್ತಿ ಹೆಚ್ಚುವುದು, ಆದರೆ ವಿದ್ಯಾಭ್ಯಾಸ ನಿಲ್ಲಿಸುವುದು ಸರಿಯಲ್ಲ. ವೃತ್ತಿಯಲ್ಲಿ ಸಮಸ್ಯೆಗಳು ಬಂದರೂ ಧೈರ್ಯದಿಂದ ಎದುರಿಸಲು ಹಿಂಜರಿಕೆ ಬೇಡ.

ತುಲಾ: ಜವಾಬ್ದಾರಿಯುತ ಹುದ್ದೆಯನ್ನು ಅಲಂಕರಿಸಲು ಅವಕಾಶ ಇದ್ದರೂ ಸಾಮರ್ಥ್ಯದ ಕೊರತೆ ಕಾಣುವುದು. ಉದ್ಯೋಗದ ಕಾರಣ ಪರಸ್ಥಳದಲ್ಲಿ ವಾಸ ಮಾಡುವ ಅನಿವಾರ್ಯತೆ ಬರಬಹುದು.

ವೃಶ್ಚಿಕ: ಹಣದ ವಿಚಾರದಲ್ಲಿ ಸರಿಯಾಗಿ ಲೆಕ್ಕ ಪತ್ರವನ್ನು ಕಾಪಾಡುವುದು ಅಗತ್ಯ. ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಂದರ್ಶನಕ್ಕಾಗಿ ಪೂರ್ವ ತಯಾರಿ ಮಾಡಿಕೊಳ್ಳಿರಿ. ವೃತ್ತಿಯಲ್ಲಿ ಎಚ್ಚರವಹಿಸುವುದು ಲೇಸು.

ಧನು: ಜೀವನದಲ್ಲಿ ಉನ್ನತವಾದ ಸ್ಥಾನ ಅಲಂಕರಿಸಬೇಕು ಎಂಬ ಉತ್ಕಟ ಅಭಿಲಾಷೆ ಕಾಣುವುದು. ಕೈಗಾರಿಕೆ ಹಾಗೂ ವಾಣಿಜ್ಯ ಉದ್ಯಮದ ಸುಧಾರಣೆಗೆ ಸಾಕಷ್ಟು ಅವಕಾಶಗಳು ಒದಗಿ ಬರಲಿವೆ.

ಮಕರ: ಸ್ವಾರ್ಥದ ಕೆಲವು ನಿರ್ಧಾರದ ಫಲವಾಗಿ ಆತ್ಮೀಯರು ದೂರಾಗಲಿದ್ದಾರೆ. ಮನರಂಜನೆಗಾಗಿ ಹಣ ವ್ಯಯ ಮಾಡುವುದು ಸರಿಯಲ್ಲ. ಮನಸ್ಸಿನ ಅಸ್ಥಿರತೆ ಅಧ್ಯಾತ್ಮ ಚಿಂತನೆಗೆ ತೊಂದರೆ ಮಾಡಲಿದೆ.

ಕುಂಭ: ನೆಮ್ಮದಿಗಾಗಿ ಜಗವನ್ನು ಬೆಳಗುವ ಸೂರ್ಯನಾರಾಯಣನನ್ನು ನಮಸ್ಕರಿಸಿ, ಪ್ರಾರ್ಥಿಸಿ. ಕಾನೂನು ಕಾಯಿದೆ ವಿಚಾರದಲ್ಲಿ ಹೋರಾಟ ನಡೆಸಿದರೆ ಜಯ ಸಿಗಲಿದೆ. ಆರೋಗ್ಯದ ಬಗ್ಗೆ ಕಾಳಜಿ ತೋರಿ.

ಮೀನ: ದಾಂಪತ್ಯದಲ್ಲಿ ವಿಚಾರಗಳನ್ನು ಹಂಚಿಕೊಳ್ಳುವುದು ಸಮಸ್ಯೆ ಬಾರದಂತೆ ಕಾಪಾಡುತ್ತದೆ. ಕುಟುಂಬದಲ್ಲಿ ನೆಮ್ಮದಿ ಕಾಪಾಡಿಕೊಳ್ಳಲು ಹೆಂಡತಿಯ ಮಾತುಗಳಿಗೆ ಆದ್ಯತೆ ನೀಡಿರಿ.

‘ನೂತನ ಪರಮೋಚ್ಚ ನಾಯಕನ ಆಯ್ಕೆ’

ಇರಾನ್: ಒಮ್ಮತಕ್ಕೆ ಬಂದ ತಜ್ಞರ ಮಂಡಳಿ; ಶೀಘ್ರದಲ್ಲೇ ಹೆಸರು ಘೋಷಣೆ ಸಾಧ್ಯತೆ

ದುಬೈ/ಟೆಹರಾನ್ (ಎಪಿ/ಎಎಫ್‌ಪಿ): ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಹತರಾದ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯ ಆಯ್ಕೆ ವಿಚಾರದಲ್ಲಿ 88 ಸದಸ್ಯರ ತಜ್ಞರ ಮಂಡಳಿ ಅಂತಿಮ ತೀರ್ಮಾನಕ್ಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ. ಆದರೆ ನೂತನ ನಾಯಕನ ಹೆಸರನ್ನು ಇನ್ನೂ ಘೋಷಿಸಿಲ್ಲ.

‘ಇರಾನ್‌ನ ಹೊಸ ಪರಮೋಚ್ಚ ನಾಯಕನ ಆಯ್ಕೆಗೆ ಮತದಾನ ನಡೆದಿದ್ದು, ನಾಯಕನನ್ನು ಆಯ್ಕೆ ಮಾಡಲಾಗಿದೆ’ ಎಂದು ಮಂಡಳಿಯ ಸದಸ್ಯರಲ್ಲೊಬ್ಬರಾದ ಅಹ್ಮದ್ ಅಲಮೊಲ್ಹೊದಾ ಹೇಳಿರುವುದಾಗಿ ‘ಇರಾನ್ ಮೆಹ್ರ್’ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಆಯತೊಲ್ಲಾ ಅಲಿ ಖಮೇನಿ ಅವರ ಪುತ್ರ ಮೊಜ್ತಾಬಾ ಖಮೇನಿ (57) ಅವರು ನೂತನ ನಾಯಕರಾಗುವ ಎಂಬ ಸುಳಿವನ್ನು ಮಂಡಳಿಯ ಇನ್ನೊಬ್ಬ ಸದಸ್ಯರು ನೀಡಿದ್ದಾರೆ.

ತೈಲ ಸಂಗ್ರಹಾಗಾರ ಗುರಿ: ಸಂಘರ್ಷವು ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿದ್ದು, ಇಸ್ರೇಲ್ ಸೇನೆಯು ಟೆಹರಾನ್‌ನ ತೈಲ ಸಂಗ್ರಹಣಾ ಸೌಲಭ್ಯಗಳನ್ನು ಗುರಿಯಾಗಿಸಿ ಶನಿವಾರ ರಾತ್ರಿ ದಾಳಿ ನಡೆಸಿದೆ. ದಕ್ಷಿಣ ಲೆಬನಾನ್ ಮತ್ತು ಬೈರೂತ್ ಮೇಲಿನ ದಾಳಿಯನ್ನೂ ಮುಂದುವರಿಸಿದೆ.

ಮುಂದಿನ ಹಂತದ ಮಿಲಿಟರಿ ಕಾರ್ಯಾಚರಣೆಗಳಲ್ಲಿ ‘ಇನ್ನಷ್ಟು ಅಚ್ಚರಿ’ಗಳನ್ನು ನೀಡುವುದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ.

ಮತ್ತೊಂದೆಡೆ, ಇರಾನ್ ಸೇನೆಯು ಬಹರೇನ್‌ನಲ್ಲಿರುವ ಉಪ್ಪುನೀರಿನ ಸಂಸ್ಕರಣಾ ಘಟಕವನ್ನು ತನ್ನ ಗುರಿಯಾಗಿಸಿದೆ. ಅಮೆರಿಕದ ವಾಯು ದಾಳಿಯಿಂದ ಕ್ವೆಶ್ಮ್ ದ್ವೀಪದಲ್ಲಿರುವ ಉಪ್ಪುನೀರಿನ ಸಂಸ್ಕರಣಾ ಘಟಕಕ್ಕೆ ಹಾನಿಯಾಗಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ.

ಟೆಹರಾನ್‌ನ ತೈಲ ಸಂಗ್ರಹಾಗಾರದ ಮೇಲೆ ಬಾಂಬ್ ದಾಳಿ ನಡೆದ ಬೆನ್ನಲ್ಲೇ ಭಾರಿ ಬೆಂಕಿ ಹಾಗೂ ದಟ್ಟ ಹೊಗೆ ಎದ್ದಿದೆ. ಬೆಂಕಿಯ ಜ್ವಾಲೆಗಳು ಮುಗಿಲೆತ್ತರಕ್ಕೆ ಏರುತ್ತಿರುವ ಮತ್ತು ಟೆಹರಾನ್‌ನ ಆಗಸ ಹೊಗೆಯಿಂದ ಆವೃತವಾಗಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಟೆಹರಾನ್ ಮತ್ತು ಅಲ್ಬೊರ್ಜ್‌ನಲ್ಲಿರುವ ನಾಲ್ಕು ತೈಲ ಸಂಗ್ರಹಾಗಾರಗಳು ಮತ್ತು ಒಂದು ತೈಲ ಉತ್ಪಾದನಾ ಕೇಂದ್ರವು ಹಾನಿಗೊಳಗಾಗಿದೆ. ಈ ಕೇಂದ್ರದಲ್ಲಿದ್ದ ನಾಲ್ವರು ಟ್ಯಾಂಕರ್ ಚಾಲಕರು ಮೃತಪಟ್ಟಿದ್ದಾರೆ ಎಂದು ಫಾರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಇಸ್ರೇಲ್ ನಡೆಸಿದ ದಾಳಿಯಲ್ಲಿ ಟೆಹರಾನ್‌ನ ತೈಲ ಸಂಗ್ರಹಾಗಾರದಿಂದ ಬೆಂಕಿ,ದಟ್ಟ ಹೊಗೆ ಎದ್ದಿರುವ ದೃಶ್ಯ —ಎಎಫ್‌ಪಿ ಚಿತ್ರ

394 ಸಾವು

ಬೈರೂತ್: ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಗೆ ಕಳೆದ ಒಂದು ವಾರದಲ್ಲಿ 83 ಮಕ್ಕಳು ಮತ್ತು 42 ಮಹಿಳೆಯರು ಸೇರಿದಂತೆ 394 ಮಂದಿ ಬಲಿಯಾಗಿದ್ದಾರೆ ಎಂದು ಆರೋಗ್ಯ ಸಚಿವ ರಕನ್ ನಾಸೆರುದ್ದೀನ್ ತಿಳಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆ ತಂಡದ 9 ಮಂದಿ ಮೃತರಲ್ಲಿ ಸೇರಿದ್ದಾರೆ. ವೈದ್ಯಕೀಯ ಸೇವೆಯಲ್ಲಿ ತೊಡಗಿದ್ದ ತಂಡದ ಮೇಲೂ ದಾಳಿ ನಡೆದಿದೆ.

ಕೊಲ್ಲಿ ರಾಷ್ಟ್ರಗಳ ಮೇಲೆ ಮುಂದುವರಿದ ದಾಳಿ

ಕೊಲ್ಲಿ ರಾಷ್ಟ್ರಗಳಲ್ಲಿರುವ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ‘ಇರಾನ್’ ಸೇನೆ ಕ್ಷಿಪಣಿ ಹಾಗೂ ಡ್ರೋನ್ ದಾಳಿ ಮುಂದುವರಿಸಿದೆ. ಸೌದಿ ಅರೇಬಿಯಾ, ಯುಎಇ, ಕತಾರ್, ಕುವೈತ್ ಮತ್ತು ಬಹರೇನ್‌ನಲ್ಲಿ ಹೊಸ ದಾಳಿಗಳು ವರದಿಯಾಗಿವೆ.

ಕುವೈತ್‌ನಲ್ಲಿ ಇಬ್ಬರು ಗಡಿ ಭದ್ರತಾ ಯೋಧರು ಮೃತಪಟ್ಟಿರುವುದಾಗಿ ಒಳಾಡಳಿತ ಸಚಿವಾಲಯ ತಿಳಿಸಿದೆ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಇಂಧನ ಟ್ಯಾಂಕ್ ಗುರಿಯಾಗಿಸಿ ಡ್ರೋನ್ ದಾಳಿ ನಡೆದಿದೆ ಎಂದು ಸೇನೆ ತಿಳಿಸಿದೆ.

‘ಇರಾನ್ ಹಾರಿಸಿದ 15 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಸೌದಿ ಅರೇಬಿಯಾದ ರಕ್ಷಣಾ ಸಚಿವಾಲಯ ತಿಳಿಸಿದೆ. ರಾಜಧಾನಿ ರಿಯಾದ್‌ನಲ್ಲಿರುವ ರಾಯಭಾರ ಕಚೇರಿಗಳನ್ನು ಗುರಿಯಾಗಿಸುವ ಪ್ರಯತ್ನವೂ ನಡೆದಿದೆ.

ಕ್ಷಿಪಣಿಯ ಅವಶೇಷ ಬಿದ್ದು ಮೂರು ಮಂದಿ ಗಾಯಗೊಂಡಿರುವುದಾಗಿ ಬಹರೇನ್ ತಿಳಿಸಿದೆ.

ನಮ್ಮ ಮೇಲೆ ದಾಳಿ ನಡೆದಾಗ, ಪ್ರತಿಕ್ರಿಯಿಸುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಅವರು ದಾಳಿಯನ್ನು ಹೆಚ್ಚಿಸಿದಂತೆಲ್ಲಾ, ನಮ್ಮ ತಿರುಗೇಟು ಸ್ವಾಭಾವಿಕವಾಗಿಯೇ ಬಲವಾಗಿರುತ್ತದೆ
ಮಸೂದ್ ಪೆಜೆಶ್ಕಿಯಾನ್, ಇರಾನ್ ಅಧ್ಯಕ್ಷ

ಇರಾನ್ ಜತೆ ಮಾತುಕತೆಗೆ ನಮಗೆ ಆಸಕ್ತಿ ಇಲ್ಲ. ಅಲ್ಲಿನ ಎಲ್ಲ ಸಂಭಾವ್ಯ ನಾಯಕರನ್ನು ಹತ್ಯೆಗೈಯುವುದು ಮತ್ತು ಮಿಲಿಟರಿಯನ್ನು ಸಂಪೂರ್ಣ ನಾಶಪಡಿಸುವುದೇ ನಮ್ಮ ಗುರಿ
ಡೊನಾಲ್ಡ್ ಟ್ರಂಪ್, ಅಮೆರಿಕದ ಅಧ್ಯಕ್ಷ

ಇಸ್ರೇಲ್‌ನ ಇಬ್ಬರು ಯೋಧರು ಬಲಿ

ದಕ್ಷಿಣ ಲೆಬನಾನ್‌ನಲ್ಲಿ ಕಾರ್ಯಾಚರಣೆ ವೇಳೆ ತನ್ನ ಇಬ್ಬರು ಯೋಧರು ಮೃತಪಟ್ಟಿರುವುದಾಗಿ ಇಸ್ರೇಲ್ ಹೇಳಿದೆ. ಇಸ್ರೇಲ್‌ನ ಕೇಂದ್ರ ಭಾಗವನ್ನು ಗುರಿಯಾಗಿಸಿ ಇರಾನ್ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಆರು ಮಂದಿ ಗಾಯಗೊಂಡಿದ್ದಾರೆ. ಟೆಲ್ ಅವೀವ್‌ನಲ್ಲಿ ಸ್ಫೋಟದ ಸದ್ದು ಕೇಳಿಬಂದಿವೆ.

ಕೃಷಿ ರಫ್ತಿಗೆ ಯುದ್ಧದ ಕರಿಮೋಡ

• ಜ್ಞಾನೇಂದ್ರ ಕೇಸರಿ

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿ ಸಮರವು ದೀರ್ಘ ಅವಧಿಗೆ ಮುಂದುವರಿದರೆ ಭಾರತದ ರೈತರ ಹಿತಕ್ಕೆ ಧಕ್ಕೆ ಆಗಬಹುದು ಎಂದು ಮಾರುಕಟ್ಟೆ ತಜ್ಞರು ಎಚ್ಚರಿಸಿದ್ದಾರೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಕೃಷಿ ಉತ್ಪನ್ನಗಳು ಪಶ್ಚಿಮ ಏಷ್ಯಾದ ದೇಶಗಳಿಗೆ ದೊಡ್ಡ ಪ್ರಮಾಣದಲ್ಲಿ ರಫ್ತಾಗುತ್ತವೆ.

2025ರಲ್ಲಿ ದೇಶದ ಒಟ್ಟು ಕೃಷಿ ಉತ್ಪನ್ನಗಳ ರಫ್ತಿನಲ್ಲಿ ಐದನೆಯ ಒಂದಕ್ಕಿಂತ ಹೆಚ್ಚಿನ ಪಾಲು ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ರವಾನೆ ಆಗಿದೆ. ಧಾನ್ಯಗಳು, ಹಣ್ಣುಗಳು, ತರಕಾರಿಗಳು, ಸಂಬಾರ ಪದಾರ್ಥಗಳು ಹೆಚ್ಚಿನ ಪ್ರಮಾಣದಲ್ಲಿ ಕೊಲ್ಲಿ ರಾಷ್ಟ್ರಗಳಿಗೆ ರವಾನೆ ಆಗಿವೆ.

ಭಾರತದಿಂದ ರಫ್ತಾಗುವ ಅಕ್ಕಿಯಲ್ಲಿ ಶೇ 36.7ರಷ್ಟು ಪಾಲು ಕೊಲ್ಲಿ ರಾಷ್ಟ್ರಗಳಿಗೆ ಸಾಗಣೆ ಆಗುತ್ತದೆ. ಅಕ್ಕಿ ರಫ್ತಿಗೆ ಆಗುವ ಅಡಚಣೆಯು ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಆಂಧ್ರಪ್ರದೇಶ ಮತ್ತು ತೆಲಂಗಾಣದ ರೈತರಿಗೆ ಹೆಚ್ಚಿನ ತೊಂದರೆ ಉಂಟುಮಾಡಲಿದೆ.

‘ಹೊರ್ಮುಜ್ ಜಲಸಂಧಿಯ ಸುತ್ತಮುತ್ತ ಅಸ್ಥಿರತೆ ಹೆಚ್ಚು ಕಾಲ ಉಳಿದರೆ ಭಾರತದ ಕೃಷಿ ಅರ್ಥವ್ಯವಸ್ಥೆಗೆ ಧಕ್ಕೆ ಆಗುತ್ತದೆ. ಅಂದರೆ ಭಾರತದ ರಫ್ತುದಾರರು ಆ ಭಾಗದ ದೇಶಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬೇಕಾಗುತ್ತದೆ’ ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ. ಭಾರತದ ಸಂಬಾರ ಪದಾರ್ಥಗಳ ರಫ್ತು ಕೂಡ ಕೊಲ್ಲಿ ರಾಷ್ಟ್ರಗಳಲ್ಲಿನ ಬೇಡಿಕೆಯೊಂದಿಗೆ ಬಲವಾದ ನಂಟು ಹೊಂದಿದೆ. ಜಾಯಿಕಾಯಿ, ಏಲಕ್ಕಿ ಹೆಚ್ಚಿನ ಪ್ರಮಾಣದಲ್ಲಿ ಈ ಭಾಗದ ದೇಶಗಳಿಗೆ ರಫ್ತಾಗುತ್ತದೆ.

ಆರ್‌ಎಸ್‌ಪಿಗೆ ಚಾರಿತ್ರಿಕ ಗೆಲುವು

ನೇಪಾಳ: ಪ್ರಧಾನಿ ಹುದ್ದೆಗೇರಲಿರುವ ಬಾಲೇಂದ್ರ ಶಾ

ಕಾಠ್ಮಂಡು (ಪಿಟಿಐ): ನೇಪಾಳದಲ್ಲಿ 2025ರ ‘ಜೆನ್ ಝೀ’ ಕ್ರಾಂತಿಯ ನಂತರ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಬಾಲೇಂದ್ರ ಶಾ ಅವರ ರಾಷ್ಟ್ರೀಯ ಸ್ವತಂತ್ರ ಪಕ್ಷವು (ಆರ್‌ಎಸ್‌ಪಿ) ಅಭೂತಪೂರ್ವ ಗೆಲುವು ದಾಖಲಿಸಿದೆ.

ರ‍್ಯಾಪರ್ ಕ್ಷೇತ್ರ ತೊರೆದು ರಾಜಕಾರಣ ಪ್ರವೇಶಿಸಿದ್ದ, ‘ಬಾಲನ್’ ಎಂದೇ ಜನಪ್ರಿಯರಾಗಿರುವ 35 ವರ್ಷದ ಈ ಯುವ ರಾಜಕಾರಣಿಯು, ಹಿಮಾಲಯ ತಪ್ಪಲಿನ ರಾಷ್ಟ್ರವಾದ ನೇಪಾಳದ ಮುಂದಿನ ಪ್ರಧಾನಿ ಗಾದಿಗೆ ಏರುವುದು ಬಹುತೇಕ ಖಚಿತವಾಗಿದೆ.

ನೇಪಾಳದಲ್ಲಿ ನಾಲ್ಕು ಬಾರಿ ಪ್ರಧಾನಿಯಾಗಿದ್ದ, ಅಲ್ಲಿನ ಪರಂಪರಾಗತ ಪಕ್ಷ ಎಂದೇ ಹೆಸರಾದ ಕಮ್ಯುನಿಸ್ಟ್ ಪಕ್ಷದ (ಸಿಪಿಎನ್-ಯುಎಂಎಲ್) ಅಧ್ಯಕ್ಷರಾಗಿದ್ದ ಕೆ.ಪಿ.ಶರ್ಮಾ ಓಲಿ ಅವರನ್ನು 50 ಸಾವಿರ ಮತಗಳ ಭಾರಿ ಅಂತರದಿಂದ ಬಾಲೇಂದ್ರ ಶಾ ಸೋಲಿಸಿದ್ದಾರೆ.

ಝಾಪ–5 ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಾಲೆನ್ ಒಟ್ಟು 68,348 ಮತಗಳನ್ನು ಪಡೆದರೆ, 74 ವರ್ಷದ ಓಲಿ 18,734 ಮತಗಳನ್ನು ಪಡೆದಿದ್ದಾರೆ.

ರವಿ ಲಮಿಚಾನೆ ಅವರು 2022ರಲ್ಲಿ ‘ಆರ್‌ಎಸ್‌ಪಿ’ ಸ್ಥಾಪಿಸಿದ್ದರು. ಸಾರ್ವತ್ರಿಕ ಚುನಾವಣೆಯಲ್ಲಿ ಒಟ್ಟು 138 ಕ್ಷೇತ್ರಗಳ ಪೈಕಿ 107ರಲ್ಲಿ ‘ಆರ್‌ಎಸ್‌ಪಿ’ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಕಾಠ್ಮಂಡು ಕಣಿವೆಯ ಮೂರು ಜಿಲ್ಲೆಗಳ ಎಲ್ಲ 15 ಕ್ಷೇತ್ರಗಳನ್ನೂ ಆರ್‌ಎಸ್‌ಪಿ ಗೆದ್ದುಕೊಂಡಿದೆ. ನೇಪಾಳಿ ಕಾಂಗ್ರೆಸ್ ಪಕ್ಷವು (ಎನ್‌ಸಿ) 17 ಸ್ಥಾನಗಳನ್ನು ಗೆದ್ದುಕೊಂಡು ಎರಡನೆಯ ಸ್ಥಾನದಲ್ಲಿದೆ.

ನೇಪಾಳದ ಸಾರ್ವತ್ರಿಕ ಚುನಾವಣೆಯಲ್ಲಿ ಝಾಪಾ–5 ಕ್ಷೇತ್ರದಿಂದ ಸ್ಪರ್ಧಿಸಿ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲಿ ವಿರುದ್ಧ ಗೆಲುವು ದಾಖಲಿಸಿದ್ದ ಬಾಲೇಂದ್ರ ಶಾ, ಚುನಾವಣಾ ಆಯೋಗ ನೀಡಿದ ಪ್ರಮಾಣ ಪತ್ರದೊಂದಿಗೆ ಗೆಲುವಿನ ಸಂಕೇತ ಪ್ರದರ್ಶಿಸಿದರು —ಪಿಟಿಐ ಚಿತ್ರ

ಕಿರಿಯ ವ್ಯಕ್ತಿ, ಮೊದಲ ಮಾಧೇಶಿ ಪ್ರಧಾನಿ

‘ಜೆನ್ ಝೀ’ ಕ್ರಾಂತಿಯ ಮೂಲಕ ರಾಜಕೀಯ ಸ್ಥಿತ್ಯಂತರಕ್ಕೆ ಕಾರಣವಾದ ನೇಪಾಳದ ಅಲ್ಲಿನ ಪ್ರಬಲ ಪಕ್ಷಗಳ ವಿರುದ್ಧ ಸ್ಪರ್ಧಿಸಿದ್ದ, ರಾಜಕೀಯವಾಗಿ ತೀರಾ ದುರ್ಬಲವಾಗಿದ್ದ ‘ಆರ್‌ಎಸ್‌ಪಿ’ಗೆ ಭಾರಿ ಜನಮನ್ನಣೆ ಲಭಿಸಿರುವುದು ಚುನಾವಣಾ ಫಲಿತಾಂಶದಲ್ಲಿ ಸ್ಪಷ್ಟವಾಗಿ ಕಂಡುಬಂದಿದೆ.

ಬಾಲೇಂದ್ರ ಶಾ ಪ್ರಧಾನಿಯಾದರೆ ನೇಪಾಳದ ಮೊದಲ ‘ಮಾಧೇಶಿ’ (ದಕ್ಷಿಣ ನೇಪಾಳದ ಸ್ಥಳೀಯ ಸಮುದಾಯ) ಪ್ರಧಾನಿ ಮತ್ತು ಅಲ್ಲಿನ ಸಂಸತ್ತಿನ ಇತಿಹಾಸದಲ್ಲೇ ಈ ಸ್ಥಾನ ಅಲಂಕರಿಸುತ್ತಿರುವ ಅತ್ಯಂತ ಕಿರಿಯ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಲಿದ್ದಾರೆ.

‘ಜೆನ್ ಝೀ’ ಹೋರಾಟ ನಿರ್ಣಾಯಕ

‘ಜೆನ್ ಝೀ’ ಹೋರಾಟವು ಸಾಮಾಜಿಕ ಜಾಲತಾಣಗಳ ನಿರ್ಬಂಧದಿಂದ ಪ್ರೇರಿತವಾಗಿದ್ದರೂ, ಈ ಜನಾಕ್ರೋಶದ ಹಿಂದೆ ಓಲಿ ಸರ್ಕಾರದ ದುರಾಡಳಿತ, ಭ್ರಷ್ಟಾಚಾರ, ಆರ್ಥಿಕ ಅಸ್ಥಿರತೆ ಪ್ರಮುಖವಾಗಿತ್ತು. ‘ಆರ್‌ಎಸ್‌ಪಿ’ ಗೆಲುವಿನ ಹಿಂದೆ ಈ ಅಂಶಗಳೇ ಪ್ರಮುಖ ಪಾತ್ರ ವಹಿಸಿವೆ ಎನ್ನಲಾಗುತ್ತಿದೆ.

ನೇಪಾಳ ಸಾರ್ವತ್ರಿಕ ಚುನಾವಣೆ ಫಲಿತಾಂಶ

165 ಸ್ಥಾನಗಳಲ್ಲಿ 164 ಸ್ಥಾನಗಳ ಫಲಿತಾಂಶ ಪ್ರಕಟವಾಗಿದ್ದು 124 ಸ್ಥಾನಗಳಲ್ಲಿ ಆರ್‌ಎಸ್‌ಪಿ ಗೆಲುವು ಸಾಧಿಸಿದೆ



ನೇಪಾಳದ ಪ್ರಜಾಪ್ರಭುತ್ವದ ಪಯಣದಲ್ಲಿ ಈ ಐತಿಹಾಸಿಕ ಮೈಲಿಗಲ್ಲು ಹೆಮ್ಮೆಯ ಕ್ಷಣವಾಗಿದೆ. ರಾಜಕೀಯ ಅಸ್ಥಿರತೆ ಎದುರಿಸಿದ್ದ ಅಲ್ಲಿ ಸ್ಥಿರ ಸರ್ಕಾರ ರಚನೆಯಾಗುವ ವಿಶ್ವಾಸವನ್ನು ಭಾರತ ಹೊಂದಿದೆ.
ನರೇಂದ್ರ ಮೋದಿ, ಭಾರತದ ಪ್ರಧಾನಿ

ಬಾಲೆನ್ ಬಾಬು ನಿಮಗೆ ಹೃದಯಪೂರ್ವಕ ಅಭಿನಂದನೆಗಳು. ಮುಂದಿನ 5 ವರ್ಷದ ಆಡಳಿತ ಸಮಸ್ಯೆಗಳಿಂದ ಮುಕ್ತವಾಗಿರಲಿ
ಕೆ.ಪಿ.ಶರ್ಮಾ ಓಲಿ, ಮಾಜಿ ಪ್ರಧಾನಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀ ಎನ್.ನಾರಾಯಣ ರಾವ್
(ದಿವಂಗತ॥ ಪಾರ್ವತಿ ಬಾಯಿ ಯವರ ಪತಿ)
ನಿಧನ: 9.3.1976
50ನೇ ವರ್ಷದ ಸವಿನೆನಪುಗಳೊಂದಿಗೆ
ತಮ್ಮ ನೆನಪು ನಮ್ಮ ಹೃದಯದಲ್ಲಿ ಹಸಿರಾಗಿದೆ. ತಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ ಎಂದು ಬಯಸುತ್ತೇವೆ.
ಸದಾ ಸ್ಮರಿಸುವ ಮಗ, ಹಾಗೂ ಸೊಸೆಯಂದಿರು ಮತ್ತು ಮೊಮ್ಮಕ್ಕಳು

ತೈಲ: ಹೆಚ್ಚುವರಿ ಖರೀದಿಗೆ ಮಾತುಕತೆ

ನವದೆಹಲಿ (ಪಿಟಿಐ): ಅಮೆರಿಕ, ರಷ್ಯಾ ಮತ್ತು ಪಶ್ಚಿಮ ಆಫ್ರಿಕಾದಿಂದ ಹೆಚ್ಚುವರಿಯಾಗಿ ಕಚ್ಚಾ ತೈಲ ಖರೀದಿ ಮಾಡಲು ಭಾರತದ ಕಂಪನಿಗಳು ಮಾತುಕತೆಗೆ ಮುಂದಾಗಿವೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ದೀರ್ಘ ಅವಧಿಗೆ ಮುಂದುವರಿದರೆ, ಅದರಿಂದ ಉಂಟಾಗುವ ತೈಲ ಕೊರತೆಯನ್ನು ಸರಿದೂಗಿಸಿಕೊಳ್ಳಲು ಈ ಹೆಜ್ಜೆ ಇರಿಸಲಾಗಿದೆ.

ತೈಲ ಸಂಸ್ಕರಣಾ ಘಟಕಗಳು ತಮ್ಮಲ್ಲಿನ ನಿರ್ವಹಣಾ ಕೆಲಸಗಳನ್ನು ಮುಂದಕ್ಕೆ ಹಾಕಿವೆ, ಮಿಗತೆ ತೈಲ ಸಂಗ್ರಹವನ್ನು ಹೊಂದಲು ಕೆಲಸ ಮಾಡುತ್ತಿವೆ ಎಂದು ಗೊತ್ತಾಗಿದೆ.

ಭಾರತವು ಫೆಬ್ರುವರಿಯಲ್ಲಿ ಆಮದು ಮಾಡಿಕೊಂಡ ಕಚ್ಚಾ ತೈಲದಲ್ಲಿ ಸರಿಸುಮಾರು ಅರ್ಧದಷ್ಟು ಹೊರ್ಮುಜ್ ಜಲಸಂಧಿಯ ಮೂಲಕ ಬಂದಿದೆ. ಸಮರದ ಕಾರಣದಿಂದಾಗಿ ಈ ಜಲಸಂಧಿಯು ಬಹುತೇಕ ಬಂದ್ ಆಗಿದೆ.

‘ಹೊರ್ಮುಜ್ ಜಲಸಂಧಿಯನ್ನು ಬಳಕೆ ಮಾಡದ ಹಡಗುಗಳು ಮೊದಲಿನಂತೆಯೇ ಕಚ್ಚಾ ತೈಲ ಸಾಗಣೆ ಮಾಡುತ್ತಿವೆ. ಸಂಘರ್ಷಕ್ಕೆ ತುತ್ತಾಗದೆ ಇರುವ ಕಡೆಗಳಿಂದ ತೈಲ ತರಿಸಿಕೊಳ್ಳುವ ಪ್ರಮಾಣವನ್ನು ನಾವು ಹೆಚ್ಚು ಮಾಡಿದ್ದೇವೆ’ ಎಂದು ಪೆಟ್ರೋಲಿಯಂ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಷ್ಯಾದ ರೊಸ್ನೆಫ್ಟ್ ಮತ್ತು ಲುಕಾಯಿಲ್ ಕಂಪನಿಗಳ ಮೇಲೆ ಅಮೆರಿಕವು ಕಳೆದ ವರ್ಷ ನಿರ್ಬಂಧ ವಿಧಿಸಿದ ನಂತರದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್, ಹಿಂದುಸ್ಥಾನ್ ಪೆಟ್ರೋಲಿಯಂ, ಎಚ್‌ಪಿಸಿಎಲ್–ಮಿತ್ತಲ್ ಎನರ್ಜಿ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ನಿಲ್ಲಿಸಿದವು. ಅವು ಈಗ ಮತ್ತೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು ಆರಂಭಿಸಿವೆ ಎಂದು ಮೂಲಗಳು ಹೇಳಿವೆ.

ಬೆಲೆ ಏರಿಕೆ: ತಜ್ಞರ ಕಳವಳ

ಭಾರತವು ಕಚ್ಚಾ ತೈಲವನ್ನು ಅಗತ್ಯ ಪ್ರಮಾಣದಲ್ಲಿ ಪರ್ಯಾಯ ಮೂಲಗಳಿಂದ ಆಮದು ಮಾಡಿಕೊಳ್ಳುವಲ್ಲಿ ಯಶಸ್ಸು ಕಂಡರೂ, ಬೆಲೆ ಏರಿಕೆಯು ಸಮಸ್ಯೆ ಸೃಷ್ಟಿಸಬಹುದು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ದಾಳಿ ಆರಂಭಿಸುವ ಮೊದಲು ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 70 ಡಾಲರ್ ಆಗಿತ್ತು. ಅದು ಈಗ 92 ಡಾಲರ್‌ಗಿಂತ ಹೆಚ್ಚಾಗಿದೆ. ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಬೆಲೆಯು ಇದೇ ಅವಧಿಯಲ್ಲಿ ಎರಡು ಪಟ್ಟಿಗಿಂತ ಹೆಚ್ಚಾಗಿದೆ.

ಬೆಲೆ ಏರಿಕೆಯ ಕಾರಣದಿಂದಾಗಿ ಭಾರತದ ಆಮದು ವೆಚ್ಚವು ಜಾಸ್ತಿ ಆಗುತ್ತದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಪಶ್ಚಿಮ ಏಷ್ಯಾ ಹೊರತುಪಡಿಸಿ ಬೇರೆ ಕಡೆಗಳಿಂದ ತೈಲ, ಅನಿಲ ತರಿಸಿಕೊಳ್ಳುವಾಗ ಸಾಗಣೆ ವೆಚ್ಚ ಹೆಚ್ಚಿರುತ್ತದೆ ಎಂದು ಅವರು ಹೇಳಿದ್ದಾರೆ. ಅಲ್ಲದೆ, ವಿಮಾ ಪ್ರೀಮಿಯಂ ಮೊತ್ತ ಕೂಡ ಜಾಸ್ತಿ ಆಗಿದೆ.

ಕಚ್ಚಾ ತೈಲ ಬೆಲೆ ಏರಿಕೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡಿದಲ್ಲಿ, ಬ್ಯಾರೆಲ್‌ಗೆ ಪ್ರತಿ 10 ಡಾಲರ್ ಬೆಲೆ ಏರಿಕೆಯು ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಪ್ರಮಾಣದಲ್ಲಿ ಶೇ 0.20ರಿಂದ ಶೇ 0.25ರವರೆಗೆ ಹೆಚ್ಚಳಕ್ಕೆ ಕಾರಣವಾಗುತ್ತದೆ. ಬೆಲೆ ಏರಿಕೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡದೆ, ತೆರಿಗೆ ಇಳಿಕೆ ಮಾಡಿ ಬೆಲೆ ಸ್ಥಿರತೆ ಕಾಯ್ದುಕೊಂಡರೆ ವಿತ್ತೀಯ ಕೊರತೆ ಜಾಸ್ತಿ ಆಗುತ್ತದೆ.

ಶಿಷ್ಟಾಚಾರ ಉಲ್ಲಂಘನೆ: ವಿವರಣೆ ಕೇಳಿದ ಕೇಂದ್ರ

ಒಂದನೇ ಪುಟದಿಂದ...

ಆದರೆ, ಭದ್ರತೆ ಹಾಗೂ ಇತರೆ ಸಂಚಾರ ಕಾರಣ ನೀಡಿದ ಜಿಲ್ಲಾಡಳಿತವು ಸಮ್ಮೇಳನದ ಜಾಗವನ್ನು ಬಗಡೋಗರ ವಿಮಾನ ನಿಲ್ದಾಣದ ಬಳಿಯ ಗೋಸಾಯಿಪುರಕ್ಕೆ ಸ್ಥಳಾಂತರಿಸಿತು. ಶನಿವಾರ ಮಧ್ಯಾಹ್ನದ ವೇಳೆ ರಾಷ್ಟ್ರಪತಿ ಅವರು ಸಮ್ಮೇಳನ ನಡೆಯುವ ಸ್ಥಳಕ್ಕೆ ಬಂದಿಳಿದಾಗ ಕಾರ್ಯಕ್ರಮದಲ್ಲಿ ಕೆಲವೇ ಕೆಲವು ಜನರಿದ್ದರು.

ರಾಷ್ಟ್ರಪತಿ ಮುರ್ಮು ಅವರನ್ನು ಬಿಜೆಪಿಯು ನಿಜವಾಗಿಯೂ ಗೌರವಿಸುತ್ತಿದ್ದರೆ, ಮುರ್ಮು ಅವರನ್ನು ನೂತನ ಸಂಸತ್ತಿನ ಉದ್ಘಾಟನೆ ಕಾರ್ಯಕ್ರಮಕ್ಕೆ ಹಾಗೂ ರಾಮ ಮಂದಿರ ಉದ್ಘಾಟನೆಗೆ ಆಹ್ವಾನಿಸಬೇಕಿತ್ತು
ಅಭಿಷೇಕ್ ಬ್ಯಾನರ್ಜಿ, ಟಿಎಂಸಿ ಸಂಸದ

‘ರಾಷ್ಟ್ರಪತಿಗೆ ಅಗೌರವ: ಕಳವಳಕಾರಿ’

ಇಂದು ದೇಶವು ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುತ್ತಿದೆ. ಇದರ ಮುನ್ನಾ ದಿನವೇ ಟಿಎಂಸಿ ಸರ್ಕಾರವು ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಅತೀವ ಅಗೌರವ ತೋರಿಸಿದೆ. ಮಹಿಳೆಯೊಬ್ಬರನ್ನು, ಬುಡಕಟ್ಟು ಸಮುದಾಯವನ್ನು, ರಾಷ್ಟ್ರಪತಿ ಅವರನ್ನು ಅವಮಾನಿಸಿದ್ದಕ್ಕಾಗಿ ಪಶ್ಚಿಮ ಬಂಗಾಳದ ಜಾಗೃತ ಜನರು ಟಿಎಂಸಿ ಅನ್ನು ಎಂದಿಗೂ ಕ್ಷಮಿಸುವುದಿಲ್ಲ.
ನರೇಂದ್ರ ಮೋದಿ, ಪ್ರಧಾನಿ
(ದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾಡಿದ ಭಾಷಣದ ತುಣುಕು)

‘ರಾಷ್ಟ್ರಪತಿ ಭೇಟಿಯ ಮಾಹಿತಿ ನೀಡಿರಲಿಲ್ಲ’

ಒಂದನೇ ಪುಟದಿಂದ...

ದೋಣಿ ಮಾರ್ಗದಲ್ಲಿ ಕಸ ತುಂಬಿಕೊಂಡಿತ್ತು, ಶೌಚಾಲಯದಲ್ಲಿ ನೀರಿನ ಕೊರತೆ ಸೇರಿ ಗ್ರೀನ್ ರೂಮ್‌ನಲ್ಲಿನ ಅವ್ಯವಸ್ಥೆ ಆರೋಪದ ಕುರಿತು ಪ್ರತಿಕ್ರಿಯಿಸಿದ ಮಮತಾ, ‘ಎಲ್ಲ ಅವ್ಯವಸ್ಥೆಗಳಿಗೂ ಸಮ್ಮೇಳನ ಆಯೋಜಕರು ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವೇ ಹೊಣೆ. ಕಾರ್ಯಕ್ರಮದ ಸ್ಥಳವನ್ನು ನಾವಲ್ಲ ನೀವೇ ಗುರುತಿಸಿದ್ದು’ ಎಂದರು.

‘ಜೆನ್ ಝೀ’ ಪ್ರತಿಭಟನೆ: ವರದಿ ಸಲ್ಲಿಕೆ

ಕಾಠ್ಮಂಡು (ಪಿಟಿಐ): ಕಳೆದ ಸೆಪ್ಟೆಂಬರ್‌ನಲ್ಲಿ ನೇಪಾಳದಲ್ಲಿ ನಡೆದ ‘ಜೆನ್ ಝೀ’ ಪ್ರತಿಭಟನೆಯ ಸಮಯದಲ್ಲಿ ನಡೆದ ಘಟನೆಗಳ ಕುರಿತು ತನಿಖೆ ನಡೆಸಲು ರಚಿಸಲಾಗಿರುವ ಉನ್ನತ ಮಟ್ಟದ ಸಮಿತಿಯು, ಮಧ್ಯಂತರ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು.

ಪ್ರಧಾನಿ ಸುಶೀಲಾ ಕಾರ್ಕಿ ಅವರಿಗೆ, ಅವರ ಕಚೇರಿಯಲ್ಲಿ ವರದಿಯನ್ನು ಸಲ್ಲಿಸಲಾಯಿತು. ಸೆ.8,9ರಂದು ನಡೆದ ತೀವ್ರ ಪ್ರತಿಭಟನೆಯಲ್ಲಿ 76 ಮಂದಿ ಸಾವಿಗೀಡಾಗಿದ್ದರು. ಪ್ರತಿಭಟನೆ ವೇಳೆ ನಡೆದ ಹತ್ಯೆಗಳು ಕುರಿತು ತನಿಖೆ ನಡೆಸಲು ಸುಪ್ರೀಂನ ನಿವೃತ್ತ ನ್ಯಾಯಮೂರ್ತಿ ಗೌರಿ ಬಹದ್ದೂರ್ ಕಾರ್ಕಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹460
	12 ಕ್ಕೆ	₹72
ಮೈಸೂರು:	100 ಕ್ಕೆ	₹460

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹633-761
ದ್ವಿತಳಿ (ಬಿ.ವಿ)	₹356-883

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೋರಿಯರ್ ಸೌಲಭ್ಯವಿದೆ. 9964322833.

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ. ಬೆಂಗಳೂರು-76 ಸಂಬಳ: 17,000/- ರಿಂದ 25,000/- ತಕ್ಷಣ ಸಂಪರ್ಕಿಸಿ: 9008835841, 9148525233

ಸರ್ಕಾರಿ ಇಲಾಖೆ ಗುತ್ತಿಗೆಗೆ, ಡಿಇಓ, ITI, 7th, PUC ಸಂಬಳ 25000 - 50000 ಉಚಿತ ವಸತಿಯೂಟವಿರುತ್ತದೆ. ಕರ್ನಾಟಕ ಉದ್ಯೋಗ (ಸರ್ಕಾರಿ ನೋಂದಾಯಿತ) ಸಂಪರ್ಕಿಸಿ: 080-29909699, 9606155699.

ಪ್ರವಾಸ

Travel

23-3-2026 ಆಗ್ರಾ, ದೆಹಲಿ, ಅಮೃತ್ ಸರ್, ವೈಷ್ಣೋದೇವಿ, ಹರಿದ್ವಾರ, 13-4-2026 ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ, ಬೈದ್ಯನಾಥ್, 17-4-2026 ಭುವನೇಶ್ವರ್, ಕೊಲ್ಕಾತ್ತ, 26-4-2026, 10-5-2026 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9845035349, 9482435755

ಶ್ರೀ ಮಹದೇಶ್ವರ ಟೂರ್ಸ್ & ಟ್ರಾವೆಲ್ಸ್ 14 ದಿನಗಳ ಚಾರ್ಧಮ್ ಯಾತ್ರೆ, 10 ದಿನಗಳ ಅಮರನಾಥ ಯಾತ್ರೆ, 10 ದಿನಗಳ ಕಾಶಿ ಯಾತ್ರೆ, 12 ದಿನಗಳ ನೇಪಾಳ ಪ್ರವಾಸ ಸಂಪರ್ಕಿಸಿ: 9611801143/ 8088559962

ಬಿಎನ್‌ಪಿಎಲ್: ಸಾಲದ ಬಲೆಯೇ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

‘ಇವತ್ತು ಖರೀದಿ ಮಾಡಿ, ಆಮೇಲೆ ಪಾವತಿಸಿ!’ ಆನ್‌ಲೈನ್ ಮೂಲಕ ಖರೀದಿಸುವಾಗ ಈ ಆಮಿಷ ನಿಮ್ಮ ಕಣ್ಣಿಗೆ ಬಿದ್ದಿದೆಯೇ? ಹಣ ಪಾವತಿಸದೆಯೇ ದುಬಾರಿ ವಸ್ತುಗಳನ್ನು ಮನೆಗೆ ತರುವ ಸುಖದ ಹಿಂದೆ, ನಿಮ್ಮ ಆರ್ಥಿಕ ಭವಿಷ್ಯವನ್ನೇ ಬುಡಮೇಲು ಮಾಡುವ ದೊಡ್ಡ ಸಾಲದ ಸುಳಿಯೊಂದು ಅಡಗಿದೆ ಎಂಬುದು ಗೊತ್ತೇ? ಇ-ವಾಣಿಜ್ಯ ಲೋಕದ ದೈತ್ಯರು ತಮ್ಮ ಮಾರಾಟ ದ್ವಿಗುಣಗೊಳಿಸಲು ಕಂಡುಹಿಡಿದಿರುವ ಅಪಾಯಕಾರಿ ತಂತ್ರ ಈ ‘ಬೈ ನೌ ಪೇ ಲೇಟರ್’ (ಬಿಎನ್‌ಪಿಎಲ್). ಅತಿಯಾದ ಆಸೆಗಳನ್ನು ಹುಟ್ಟುಹಾಕಿ, ಗ್ರಾಹಕರನ್ನು ಸಾಲಗಾರರನ್ನಾಗಿ ಮಾಡುವ ಬಲೆ ಇದು.

ಬಿಎನ್‌ಪಿಎಲ್ ಎಂದರೇನು?: ಹೆಸರೇ ಹೇಳುವಂತೆ, ಇದು ‘ಈಗ ಖರೀದಿಸಿ, ಹಣವನ್ನು ನಂತರ ಪಾವತಿಸಿ’ ಎಂಬ ಸೌಲಭ್ಯ. ನೀವು ಯಾವುದೇ ವಸ್ತು ಖರೀದಿಸುವಾಗ ಆ ಕ್ಷಣದಲ್ಲಿ ನಿಮ್ಮಲ್ಲಿ ಹಣವಿಲ್ಲದಿದ್ದರೂ, ಈ ಸೌಲಭ್ಯ ಬಳಸಿ ವಸ್ತು ಪಡೆಯಬಹುದು. ನಂತರದ ದಿನಗಳಲ್ಲಿ ಕಂತುಗಳ ಮೂಲಕ ಆ ಹಣ ಪಾವತಿಸಬಹುದು. ಇದು ಕ್ರೆಡಿಟ್ ಕಾರ್ಡ್‌ಗೆ ಪರ್ಯಾಯವಾಗಿ ಹೆಚ್ಚು ಜನಪ್ರಿಯವಾಗುತ್ತಿದೆ. ಏಕೆಂದರೆ ಕ್ರೆಡಿಟ್ ಕಾರ್ಡ್ ಪಡೆಯಲು ಬೇಕಾಗುವಷ್ಟು ಕಠಿಣ ನಿಯಮಗಳು ಇದರಲ್ಲಿ ಇಲ್ಲ.

ಹಾಗಾದರೆ ಬಿಎನ್‌ಪಿಎಲ್ ಎಂಬುದು ನಿಮ್ಮ ಮನಸ್ಸಿನ ದಾರಿ ತಪ್ಪಿಸುವ ತಂತ್ರವೇ? ಯಾವುದೇ ವಸ್ತುವನ್ನು ಆನ್‌ಲೈನ್‌ನಲ್ಲಿ ನೋಡಿದಾಗ ನಮ್ಮ ಮನಸ್ಸು ಮುಂದಿನ ದಿನಗಳಲ್ಲಿ ಹಣ ಪಾವತಿಸುವಾಗ ಆಗುವ ಕಷ್ಟದ ಬಗ್ಗೆ ಯೋಚಿಸುವುದಿಲ್ಲ. ಮನೋವಿಜ್ಞಾನದಲ್ಲಿ ಇದನ್ನು ‘ಟೆಂಪೋರಲ್ ಡಿಸ್ಕೌಂಟಿಂಗ್’ ಎಂದು ಕರೆಯುತ್ತಾರೆ. ಇ-ವಾಣಿಜ್ಯ ಕಂಪನಿಗಳು ಇದೇ ಮನಃಸ್ಥಿತಿಯನ್ನು ಬಂಡವಾಳ ಮಾಡಿಕೊಳ್ಳುತ್ತವೆ. ನಿಮ್ಮ ಬಳಿ ಹಣವಿಲ್ಲದಿದ್ದರೂ, ಸುಲಭ ಸಾಲದ ಆಯ್ಕೆಯನ್ನು ಕಣ್ಣಮುಂದೆ ಇಟ್ಟು, ನಿಮ್ಮಿಂದ ಅನಗತ್ಯ ಖರೀದಿ ಮಾಡಿಸುವಲ್ಲಿ ಅವು ಯಶಸ್ವಿಯಾಗುತ್ತವೆ.

ಬಿಎನ್‌ಪಿಎಲ್ ಹೇಗೆ ಕೆಲಸ ಮಾಡುತ್ತದೆ?

1. ನೋಂದಣಿ: ಆನ್‌ಲೈನ್ ಖರೀದಿ ವೇದಿಕೆಗಳಲ್ಲಿ ನಿಮ್ಮ ಕೆವೈಸಿ (ಆಧಾರ್/ಪ್ಯಾನ್) ದಾಖಲೆ ನೀಡಿ ಈ ಸೌಲಭ್ಯವನ್ನು ಸಕ್ರಿಯಗೊಳಿಸಬಹುದು.
2. ಕ್ರೆಡಿಟ್ ಮಿತಿ: ನಿಮ್ಮ ಕ್ರೆಡಿಟ್ ಅಂಕ ಮತ್ತು ಹಣಕಾಸಿನ ಹಿನ್ನೆಲೆಯನ್ನು ಆಧರಿಸಿ ಕಂಪನಿಗಳು ನಿಮಗೆ ನಿರ್ದಿಷ್ಟ ಮೊತ್ತದ ಮಿತಿ ನಿಗದಿಪಡಿಸುತ್ತವೆ.
3. ಖರೀದಿ: ಪಾವತಿ ಸಮಯದಲ್ಲಿ ‘ಬಿಎನ್‌ಪಿಎಲ್’ ಆಯ್ಕೆ ಮಾಡಿದರೆ, ಆ ಮೊತ್ತವನ್ನು ಕಂಪನಿಯು ನಿಮಗಾಗಿ ಪಾವತಿಸುತ್ತದೆ.
4. ಮರುಪಾವತಿ: ಖರೀದಿಸಿದ ವಸ್ತುವಿನ ಹಣವನ್ನು ನಿಗದಿತ ಅವಧಿಯೊಳಗೆ (ಉದಾಹರಣೆಗೆ: 15 ದಿನ, 30 ದಿನಗಳಲ್ಲಿ) ಮರುಪಾವತಿಸಬೇಕು. ನಿಗದಿತ ಮೊತ್ತವನ್ನು ಸರಿಯಾದ ಸಮಯಕ್ಕೆ ಕಟ್ಟದಿದ್ದರೆ ಸಾಲವನ್ನು ಇಎಂಐ ಆಗಿ ಪರಿವರ್ತಿಸಿಕೊಂಡು ಬಡ್ಡಿ ಕಟ್ಟಬೇಕಾಗುತ್ತದೆ.

ಬಿಎನ್‌ಪಿಎಲ್ ಅನುಕೂಲ, ಅನನುಕೂಲ: ಬಿಎನ್‌ಪಿಎಲ್ ವ್ಯವಸ್ಥೆಯು ತನ್ನದೇ ಆದ ಅನುಕೂಲಗಳು ಮತ್ತು ಸವಾಲುಗಳನ್ನು ಒಳಗೊಂಡಿದೆ. ಅನುಕೂಲಗಳ ವಿಷಯಕ್ಕೆ ಬಂದರೆ, ಇದು ಗ್ರಾಹಕರಿಗೆ ಬಡ್ಡಿರಹಿತ ಸಾಲದ ಸೌಲಭ್ಯ ಒದಗಿಸುತ್ತದೆ. ಅಂದರೆ, ನಿಗದಿತ ಸಮಯದೊಳಗೆ ಹಣ ಮರುಪಾವತಿಸಿದರೆ ಬಡ್ಡಿ ಪಾವತಿಸುವ ಅಗತ್ಯವಿರುವುದಿಲ್ಲ. ಅಲ್ಲದೆ, ಇದು ಅತ್ಯಂತ ಸುಲಭವಾಗಿ ಲಭ್ಯವಿರುವ ಸಾಲ, ಬಲವಾದ ಕ್ರೆಡಿಟ್ ಹಿನ್ನೆಲೆ ಇಲ್ಲದವರಿಗೂ ಸುಲಭವಾಗಿ ಸಿಗುತ್ತದೆ. ಕನಿಷ್ಠ ದಾಖಲೆಗಳನ್ನು ಒದಗಿಸುವಿಕೆ, ಅತಿ ವೇಗವಾಗಿ ಅನುಮೋದನೆ ಇದರ ಸಕಾರಾತ್ಮಕ ಅಂಶ. ಮತ್ತೊಂದೆಡೆ, ಬಿಎನ್‌ಪಿಎಲ್ ಬಳಕೆಯಲ್ಲಿ ಕೆಲವು ಅಪಾಯಗಳು ಮತ್ತು ಸವಾಲುಗಳೂ ಇವೆ.

ಮುಖ್ಯವಾಗಿ, ಕೈಯಿಂದ ತಕ್ಷಣಕ್ಕೆ ಹಣ ಹೋಗುತ್ತಿಲ್ಲ ಎಂಬ ಭಾವನೆಯು ಗ್ರಾಹಕರಲ್ಲಿ ಅತಿಯಾದ ಮತ್ತು ಅನಗತ್ಯ ಖರ್ಚು ಮಾಡುವ ಪ್ರವೃತ್ತಿ ಬೆಳೆಸಬಹುದು. ಒಂದು ವೇಳೆ ನಿಗದಿತ ದಿನಾಂಕದೊಳಗೆ ಹಣ ಮರುಪಾವತಿಸಲು ವಿಫಲವಾದರೆ, ಕಂಪನಿಗಳು ಭಾರಿ ಮೊತ್ತದ ದಂಡದ ಬಡ್ಡಿ ವಿಧಿಸುತ್ತವೆ. ಅಷ್ಟೇ ಅಲ್ಲದೆ, ಸಕಾಲಕ್ಕೆ ಹಣ ಪಾವತಿಸದಿದ್ದರೆ ಅದು ನೇರವಾಗಿ ನಿಮ್ಮ ಕ್ರೆಡಿಟ್ ಅಂಕದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ, ಇದರಿಂದಾಗಿ ಭವಿಷ್ಯದಲ್ಲಿ ಇತರ ಸಾಲಗಳನ್ನು ಪಡೆಯುವಾಗ ತೊಂದರೆಯಾಗಬಹುದು.

ಗಮನದಲ್ಲಿಡಬೇಕಾದ ಪ್ರಮುಖ ವಿಷಯಗಳು:

- **ಇದು ಉಚಿತ ಹಣವಲ್ಲ:** ಬಹಳಷ್ಟು ಜನ ಬಿಎನ್‌ಪಿಎಲ್ ಅನ್ನು ಉಚಿತ ಹಣ ಎಂದು ಭಾವಿಸುತ್ತಾರೆ. ನೆನಪಿಡಿ, ಇದು ಒಂದು ರೀತಿಯ ಸಾಲವೇ. ನೀವು ಖಂಡಿತವಾಗಿಯೂ ಇದನ್ನು ಹಿಂದಿರುಗಿಸಬೇಕು.
- **ಆರ್‌ಬಿಐ ನಿಯಮಗಳು:** ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ವ್ಯವಸ್ಥೆಯನ್ನು ಹೆಚ್ಚು ನಿಯಮಬದ್ಧ ಆಗಿಸುತ್ತಿದೆ. ಗ್ರಾಹಕರ ಹಿತಾಸಕ್ತಿ ಕಾಪಾಡಲು ಅನೇಕ ಕಂಪನಿಗಳ ಮೇಲೆ ಕಠಿಣ ಕ್ರಮಗಳನ್ನೂ ಕೈಗೊಳ್ಳಲಾಗುತ್ತಿದೆ. ಆದ್ದರಿಂದ ನಂಬಿಕಸ್ಥ ಮತ್ತು ಅಧಿಕೃತ ಆ್ಯಪ್‌ಗಳನ್ನು ಮಾತ್ರ ಬಳಸಿ.
- **ಬಜೆಟ್ ಪಾಲಿಸಿ:** ನಿಮ್ಮ ಆದಾಯಕ್ಕೆ ಅನುಗುಣವಾಗಿ ಮಾತ್ರ ಖರ್ಚು ಮಾಡಿ. ಕೊಡುಗೆ ಇದೆ ಎಂದು ಸಿಕ್ಕಾಪಟ್ಟೆ ಖರೀದಿಸುವುದು ಆರ್ಥಿಕ ಸಂಕಷ್ಟಕ್ಕೆ ದಾರಿ ಮಾಡಬಹುದು.
- **ಎಚ್ಚರ ತಪ್ಪಿದರೆ ಸಾಲದ ಸುಳಿ:** ನೀವು ₹30 ಸಾವಿರ ರೂಪಾಯಿ ಮೊತ್ತದ ಸ್ಮಾರ್ಟ್‌ಫೋನ್ ಒಂದನ್ನು ಬಿಎನ್‌ಪಿಎಲ್ ಮೂಲಕ 12 ತಿಂಗಳ ಕಂತುಗಳಲ್ಲಿ ಖರೀದಿಸುತ್ತೀರಿ ಎಂದು ಭಾವಿಸೋಣ. ಮೇಲ್ನೋಟಕ್ಕೆ ಇದು ಸಣ್ಣ ಕಂತುಗಳಾಗಿ ಕಾಣಿಸಬಹುದು. ಆದರೆ ಇದರ ಲೆಕ್ಕಾಚಾರ ಹೀಗಿರುತ್ತದೆ.
- **ಮೂಲ ಬೆಲೆ:** ₹30,000
- **ಹೆಚ್ಚುವರಿ ಹೊರೆ:** 12 ತಿಂಗಳ ಅವಧಿಗೆ ಶೇ 24ರ ಬಡ್ಡಿ ದರದಲ್ಲಿ ನೀವು ಬಡ್ಡಿ ರೂಪದಲ್ಲೇ ಸುಮಾರು ₹4,000ಕ್ಕೂ ಹೆಚ್ಚು ಪಾವತಿಸುತ್ತೀರಿ.
- **ಇತರ ಶುಲ್ಕಗಳು:** ಪ್ರಕ್ರಿಯೆ ಶುಲ್ಕ ಮತ್ತು ಅದರ ಮೇಲೆ ವಿಧಿಸುವ ಜಿಎಸ್‌ಟಿ ಸೇರಿ ಇನ್ನೂ ₹1,000ರಿಂದ ₹1,500 ನಿಮ್ಮ ಖಾತೆಯಿಂದ ಕಡಿತವಾಗುತ್ತದೆ.
- **ದಂಡದ ಹೊರೆ:** ನೀವು ಒಂದು ಕಂತು ಪಾವತಿ ಮಾಡಲು ತಡವಾದರೂ, ಆ ತಿಂಗಳೇ ಸುಮಾರು ₹300ರಿಂದ ₹500ರಷ್ಟು ‘ವಿಳಂಬ ಶುಲ್ಕ’ ಮತ್ತು ಅದರ ಮೇಲಿನ ಬಡ್ಡಿ ಸೇರುತ್ತದೆ.
- **ಲೆಕ್ಕಾಚಾರ ನೋಡಿ:** ₹30,000 ಬೆಲೆಯ ಫೋನ್‌ಗೆ ನೀವು ಕೊನೆಯಲ್ಲಿ ಬಡ್ಡಿ, ಪ್ರೊಸೆಸಿಂಗ್ ಶುಲ್ಕ, ಜಿಎಸ್‌ಟಿ ಮತ್ತು ದಂಡಗಳ ರೂಪದಲ್ಲಿ ಸುಮಾರು ₹36,000ರಿಂದ ₹37,000ವರೆಗೆ ಪಾವತಿಸಬೇಕಾಗುತ್ತದೆ. ಅಂದರೆ, ಸಾಲ ಸೌಲಭ್ಯದ ಆಮಿಷಕ್ಕೆ ಬಿದ್ದು, ನೀವು ಒಂದು ಫೋನ್‌ಗೆ ಹೆಚ್ಚುವರಿಯಾಗಿ ಶೇ 20ಕ್ಕಿಂತ ಹೆಚ್ಚು ಹಣವನ್ನು ಕಳೆದುಕೊಳ್ಳುತ್ತಿದ್ದೀರಿ. ಅಲ್ಲಿಗೆ, ನೀವು ವಸ್ತುವನ್ನು ಮಾತ್ರವೇ ಖರೀದಿಸುತ್ತಿಲ್ಲ, ಆ ಸಾಲದ ಹೊರೆಯನ್ನೂ ಖರೀದಿಸುತ್ತಿದ್ದೀರಿ!

₹21 ಸಾವಿರ ಕೋಟಿ ಹಿಂಪಡೆದ ವಿದೇಶಿ ಹೂಡಿಕೆದಾರರು

ಮುಖ್ಯಾಂಶಗಳು
- ಪಶ್ಚಿಮ ಏಷ್ಯಾದಲ್ಲಿನ ಸಮರವೇ ಕಾರಣ
- ಕಚ್ಚಾ ತೈಲದ ಬೆಲೆ ತಗ್ಗದೆ ಹೂಡಿಕೆ ಅಸಾಧ್ಯ: ತಜ್ಞರು

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು ಕಳೆದ ನಾಲ್ಕು ವಹಿವಾಟಿನ ದಿನಗಳಲ್ಲಿ ಭಾರತದ ಷೇರು ಮಾರುಕಟ್ಟೆಗಳಿಂದ ಒಟ್ಟು ₹21 ಸಾವಿರ ಕೋಟಿ ಹೂಡಿಕೆ ಹಿಂಪಡೆದಿದ್ದಾರೆ. ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ನಡುವೆ ಈ ಮೊತ್ತವನ್ನು ಅವರು ಹಿಂಪಡೆದಿದ್ದಾರೆ.

ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಫೆಬ್ರುವರಿಯಲ್ಲಿ ದೇಶದ ಷೇರುಪೇಟೆಗಳ ಮೂಲಕ ₹22,615 ಕೋಟಿ ಹೂಡಿಕೆ ಮಾಡಿದ್ದರು. ಇದು 17 ತಿಂಗಳ ಅವಧಿಯಲ್ಲಿ ತಿಂಗಳೊಂದರಲ್ಲಿ ಆದ ಅತಿಹೆಚ್ಚಿನ ಹೂಡಿಕೆ. ಆದರೆ ಈಗ ಅವರು ಹೂಡಿಕೆ ಹಿಂಪಡೆಯಲು ಹೆಚ್ಚಿನ ಗಮನ ನೀಡಿದ್ದಾರೆ.

ಈ ಪ್ರಮಾಣದಲ್ಲಿ ಹೂಡಿಕೆ ಹಿಂದಕ್ಕೆ ಪಡೆಯುವುದಕ್ಕೆ ಪಶ್ಚಿಮ ಏಷ್ಯಾದಲ್ಲಿನ ಸಮರವೇ ಮುಖ್ಯ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

‘ಪಶ್ಚಿಮ ಏಷ್ಯಾ ಸಂಘರ್ಷದ ವಿಚಾರವಾಗಿನ ಅನಿಶ್ಚಿತತೆ, ಈಚೆಗೆ ಮಾರುಕಟ್ಟೆಯಲ್ಲಿ ಕಂಡುಬಂದ ಇಳಿಕೆ, ಕಚ್ಚಾ ತೈಲದ ಬೆಲೆ ತೀವ್ರವಾಗಿ ಹೆಚ್ಚಳವಾದರೆ ಅದರಿಂದ ಭಾರತದ ಅರ್ಥವ್ಯವಸ್ಥೆಯ ಮೇಲೆ ಆಗುವ



ಪರಿಣಾಮ, ರೂಪಾಯಿ ಮೌಲ್ಯ ಕುಸಿತವು ವಿದೇಶಿ ಹೂಡಿಕೆದಾರರು ಬಂಡವಾಳ ಹಿಂಪಡೆಯುವುದಕ್ಕೆ ಕಾರಣಗಳಾಗಿವೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಕಚ್ಚಾ ತೈಲದ ಬೆಲೆ ಏರಿಕೆಯು ಹಣದುಬ್ಬರ, ಚಾಲ್ತಿ ಖಾತೆ ಕೊರತೆ, ಕರೆನ್ಸಿ ಅಸ್ಥಿರತೆಯ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಲ್ಲಿ ಈ ಅಂಶಗಳು ವಿದೇಶಿ ಹೂಡಿಕೆದಾರರ ಕಳವಳಕ್ಕೆ ಕಾರಣವಾಗುತ್ತವೆ ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಜಾಗತಿಕ ಬಿಕ್ಕಟ್ಟುಗಳ ವಿಚಾರವಾಗಿ ಹೆಚ್ಚಿನ ಸ್ಪಷ್ಟತೆ ಲಭ್ಯವಾಗದ ಹೊರತು, ಕಚ್ಚಾ ತೈಲದ ಬೆಲೆ ಕಡಿಮೆ ಆಗದ ಹೊರತು ವಿದೇಶಿ ಹೂಡಿಕೆದಾರರು ಭಾರತದ ಮಾರುಕಟ್ಟೆಗಳ ಕಡೆ ಮುಖ ಮಾಡುವ ಸಾಧ್ಯತೆ ಇಲ್ಲ ಎಂದು ವಿಜಯಕುಮಾರ್ ಹೇಳಿದ್ದಾರೆ.

‘ಬ್ರೆಂಟ್ ಕಚ್ಚಾ ತೈಲದ ಬೆಲೆಯು 90 ಡಾಲರ್‌ಗಿಂತ ಹೆಚ್ಚಿನ ಮಟ್ಟದಲ್ಲಿರುವುದು ಭಾರತದ ಅರ್ಥ ವ್ಯವಸ್ಥೆಗೆ ಹಾಗೂ ಷೇರುಪೇಟೆಗಳಿಗೆ ನಕಾರಾತ್ಮಕ ಸಂಗತಿ’ ಎಂದಿದ್ದಾರೆ.

ಸಬರಮತಿ ದಡದಲ್ಲಿ ಭಾರತದ ಸಡಗರ

ಸಂಜು, ಅಭಿಷೇಕ್, ಇಶಾನ್ ಅಬ್ಬರ • ಬೂಮ್ರಾ ಮಿಂಚಿನ ದಾಳಿ • ನ್ಯೂಜಿಲೆಂಡ್‌ಗೆ ನಿರಾಶೆ

ಪಿಟಿಐ/ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಭಾನುವಾರ ರಾತ್ರಿ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ 'ನೀಲಿ ಸಮುದ್ರ' ಭೋರ್ಗರೆಯಿತು. ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ತುಂಬಿದ್ದ ಮೈದಾನದಲ್ಲಿ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತವು ಟಿ20 ಕ್ರಿಕೆಟ್ ಮಾದರಿಯ ಸಾಮ್ರಾಟನಾಗಿ ಮೆರೆಯಿತು. ಸತತ ಎರಡನೇ ಬಾರಿ ವಿಶ್ವ ಕಿರೀಟವನ್ನು ತನ್ನದಾಗಿಸಿಕೊಂಡಿತು.

ಸತತ ಮೂರನೇ ಬಾರಿ ಅಲ್ಪ ಅಂತರದಲ್ಲಿ ಶತಕ ತಪ್ಪಿಸಿಕೊಂಡ ಸಂಜು ಸ್ಯಾಮ್ಸನ್, ವೈಫಲ್ಯಗಳ ಸುಳಿಯಿಂದ ಹೊರಬಂದ ಅಭಿಷೇಕ್ ಶರ್ಮಾ ಹಾಗೂ ಮತ್ತೊಮ್ಮೆ ಗರ್ಜಿಸಿದ 'ಪಾಕೆಟ್ ಡೈನಮೊ' ಇಶಾನ್ ಕಿಶನ್ ಅವರ ಬೀಸಾಟ ರಂಗೇರಿತು. 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 255 ರನ್ ಗಳಿಸಿತು. ಆದರೆ ನ್ಯೂಜಿಲೆಂಡ್ ಬ್ಯಾಟರ್‌ಗಳು ದಿಟ್ಟ ಪ್ರತಿರೋಧ ಒಡ್ಡುವಲ್ಲಿ ವಿಫಲರಾದರು. ಜಸ್‌ಪ್ರೀತ್ ಬೂಮ್ರಾ (15ಕ್ಕೆ4) ಮತ್ತು ಸ್ಪಿನ್ನರ್ ಅಕ್ಷರ್ ಪಟೇಲ್ (27ಕ್ಕೆ3) ಅವರ ಮುಂದೆ ಕಿವೀಸ್ 19 ಓವರ್‌ಗಳಲ್ಲಿ 159 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಭಾರತವು 96 ರನ್‌ಗಳಿಂದ ಜಯಿಸಿತು. ತಂಡವು ಟಿ20 ವಿಶ್ವಕಪ್ ಜಯಿಸುತ್ತಿರುವುದು ಇದು ಮೂರನೇ ಸಲ.

ಆರಂಭಿಕ ಬ್ಯಾಟರ್ ಟಿಮ್ ಸೀಫರ್ಟ್ (52;26ಎ) ಮತ್ತು ನಾಯಕ ಮಿಚೆಲ್ ಸ್ಯಾಂಟ್ನರ್ (43;35ಎ) ಹೊರತುಪಡಿಸಿ ಉಳಿದವರು ಪೆವಿಲಿಯನ್ ಪರೇಡ್ ನಡೆಸಿದರು. 'ಪ್ರೇಕ್ಷಕರ ಗ್ಯಾಲರಿಯನ್ನು ಸ್ತಬ್ಧಗೊಳಿಸುತ್ತೇವೆ' ಎಂದಿದ್ದ ಸ್ಯಾಂಟನರ್ ಅವರ ಮಾತು ನಡೆಯಲಿಲ್ಲ. ಸಬರಮತಿ ನದಿ ತಟದ ಕ್ರೀಡಾಂಗಣದಲ್ಲಿ ಅಭಿಮಾನಿಗಳ ಸಡಗರ ಮುಗಿಲು ಮುಟ್ಟಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಕಿವೀಸ್ ನಾಯಕ ಸ್ಯಾಂಟ್ನರ್ ಕೈಕೈ ಹಿಸುಕಿಕೊಂಡರು. ಅವರ ಯಾವ ಯೋಜನೆಗಳೂ ನಿರೀಕ್ಷಿತ ಫಲ ನೀಡಲಿಲ್ಲ. ಮೊದಲೆರಡು ಓವರ್‌ಗಳಲ್ಲಿ ಅಭಿಷೇಕ್ ಮತ್ತು ಸಂಜು ಎಚ್ಚರಿಕೆಯಿಂದ ಆಡಿದರು. ವೈಫಲ್ಯಗಳಿಂದ ಕಂಗೆಟ್ಟಿದ್ದ ಎಡಗೈ ಬ್ಯಾಟರ್ ಅಭಿಷೇಕ್ (52; 21ಎ, 4X6, 6X3) ಟೂರ್ನಿಯಲ್ಲಿ ಎರಡನೇ ಅರ್ಧಶತಕ ದಾಖಲಿಸಿದರು.

ಸಂಜು ಕೂಡ ಇನ್ನೊಂದು ಬದಿಯಿಂದ ಅವಕಾಶ ಸಿಕ್ಕಾಗ ಸಿಕ್ಸರ್, ಬೌಂಡರಿ ಹೊಡೆಯುತ್ತ ಅಭಿಷೇಕ್ ಅವರಿಗೆ ವಿಶ್ವಾಸ ತುಂಬುತ್ತ ಜೊತೆಯಾಟ ಕಟ್ಟಿದರು. ಇದರಿಂದಾಗಿ ಪವರ್ ಪ್ಲೇ ಅವಧಿಯಲ್ಲಿ ವಿಕೆಟ್ ನಷ್ಟವಿಲ್ಲದೇ 92 ರನ್‌ಗಳು ಸೇರಿ ನೂತನ ದಾಖಲೆ ರಚನೆಯಾಯಿತು. ಕಿವೀಸ್ ಬೌಲರ್‌ಗಳು ಇವರಿಬ್ಬರ ಅಬ್ಬರಕ್ಕೆ ಲಯ ತಪ್ಪಿದರು. ಹೀಗಾಗಿ ಸಾಲು ಸಾಲು ವೈಡ್‌ಬಾಲ್‌ಗಳನ್ನು ಹಾಕಿದರು.

ಆದರೆ, ಎಂಟನೇ ಓವರ್‌ನಲ್ಲಿ ರಚಿನ್ ರವೀಂದ್ರ ಅವರ ವೈಡ್ ಎಸೆತವನ್ನು ಆಡಲು ಹೋಗಿ ಅಭಿಷೇಕ್ ವಿಕೆಟ್‌ಕೀಪರ್ ಸೀಫರ್ಟ್‌ಗೆ ಕ್ಯಾಚ್ ಆದರು. ಆದರೆ ನ್ಯೂಜಿಲೆಂಡ್ ತಂಡಕ್ಕೆ ಮೊದಲ ಯಶಸ್ಸು ಪಡೆದ ಸಂತಸ ಹೆಚ್ಚು ಹೊತ್ತು ಉಳಿಯಲು ಇಶಾನ್ ಬಿಡಲಿಲ್ಲ.

ಸಂಜು ಮತ್ತು ಇಶಾನ್ ಎರಡನೇ ವಿಕೆಟ್ ಜೊತೆಯಾಟದಲ್ಲಿ ಕೇವಲ 48 ಎಸೆತಗಳಲ್ಲಿ 105 ರನ್ ಗಳಿಸಿದರು. ಅದರಲ್ಲಿ ಇಶಾನ್ ಪಾಲು 54 ರನ್‌ಗಳು.

ಇವರಿಬ್ಬರ ಮಿಂಚಿನ ಬ್ಯಾಟಿಂಗ್‌ನಿಂದಾಗಿ ಕೇವಲ 15 ಓವರ್‌ಗಳಲ್ಲಿ ತಂಡದ ಮೊತ್ತ 'ದ್ವಿಶತಕ'ದ ಗಡಿ ದಾಟಿತು. ಸತತ ಮೂರನೇ ಸಲ ಶತಕದ ಅಂಚಿನಲ್ಲಿ ಸಂಜು ಎಡವಿದರು. 46 ಎಸೆತಗಳಲ್ಲಿ 89 ರನ್ ಗಳಿಸಿದ ಅವರು ಫುಲ್ ಟಾಸ್ ಎಸೆತವನ್ನು ಸಿಕ್ಸರ್‌ಗೆತ್ತುವ ಪ್ರಯತ್ನದಲ್ಲಿ ಬದಲೀ ಫೀಲ್ಡರ್ ಕೊಲಿ ಮೆಕ್‌ಕಾಂಚಿಗೆ ಕ್ಯಾಚ್ ಕೊಟ್ಟರು. ಜಿಮ್ಮಿ ನಿಶಾಮ್ ಮೊದಲ ವಿಕೆಟ್ ಪಡೆದು ಸಂಭ್ರಮಿಸಿದರು. ಸಂಜು ಎಂಟು ಸಿಕ್ಸರ್ ಮತ್ತು ಐದು ಬೌಂಡರಿ ಬಾರಿಸಿದರು.

ಇದೇ ಓವರ್‌ನಲ್ಲಿ ನಿಶಾಮ್ ಅವರು ಇಶಾನ್ ಕಿಶನ್ (54; 25ಎ) ಮತ್ತು ಸೂರ್ಯಕುಮಾರ್ ಯಾದವ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಈ ಹಂತದಲ್ಲಿ ರನ್‌ಗಳನ್ನು ನಿಯಂತ್ರಿಸಲು ಬೌಲರ್‌ಗಳು ಪ್ರಯತ್ನ ಮಾಡಿದರು. ತಕ್ಕಮಟ್ಟಿಗೆ ಯಶಸ್ವಿಯೂ ಆದರು. ಹಾರ್ದಿಕ್ ಪಾಂಡ್ಯ (18 ರನ್) ಮತ್ತು ತಿಲಕ್ ವರ್ಮಾ (ಅಜೇಯ 8) ಅವರು ಹೆಚ್ಚು ರನ್ ಹೊಡೆಯದಂತೆ ನೋಡಿಕೊಂಡರು. ಆದರೆ ಶಿವಂ ದುಬೆ ಎಂದಿನಂತೆ ಭುಜಬಲ ಪರಾಕ್ರಮ ಮೆರೆದರು. ಕೇವಲ ಎಂಟು ಎಸೆತಗಳಲ್ಲಿ 26 ರನ್ ಸೂರೆ ಮಾಡಿದರು. 3 ಬೌಂಡರಿ ಮತ್ತು 2 ಸಿಕ್ಸರ್ ಹೊಡೆದರು. ತಂಡದ ಮೊತ್ತ ಹೆಚ್ಚಿಸಿದರು.

ಸೆಮಿಫೈನಲ್‌ನಲ್ಲಿ 33 ಎಸೆತಗಳಲ್ಲಿ 100 ರನ್ ಹೊಡೆದಿದ್ದ ಕಿವೀಸ್ ಬ್ಯಾಟರ್ ಫಿನ್ ಅಲೆನ್ ಅವರಿಗೆ ಒಂದು 'ಜೀವದಾನ' ಲಭಿಸಿತು. ಆದರೆ; ಅದನ್ನು ಬಳಸಿಕೊಂಡು ದೊಡ್ಡ ಇನಿಂಗ್ಸ್ ಆಡುವ ಅವರ ಇರಾದೆಗೆ ಅಕ್ಷರ್ ಪಟೇಲ್ ಅಡ್ಡಿಯಾದರು. ಬೂಮ್ರಾ ತಮ್ಮ ಮೊದಲ ಎಸೆತದಲ್ಲಿಯೇ ರಚಿನ್ ರವೀಂದ್ರ (1 ರನ್) ಅವರಿಗೆ ಪೆವಿಲಿಯನ್ ದಾರಿ ತೋರಿಸಿದರು. ಬೂಮ್ರಾ ಎಸೆತದಲ್ಲಿ ಇಶಾನ್ ಕಿಶನ್ ಪಡೆದ 'ಸಾಹಸಭರಿತ' ಕ್ಯಾಚ್‌ಗೆ ರಚಿನ್ ನಿರ್ಗಮಿಸಬೇಕಾಯಿತು. ಇಲ್ಲಿಂದ ಮುಂದೆ ಅಕ್ಷರ್ ಪಟೇಲ್, ಬೂಮ್ರಾ ಮತ್ತು ಹಾರ್ದಿಕ್ ಪಾಂಡ್ಯ ಮಿಂಚಿದರು. ಅರ್ಧಶತಕ ಗಳಿಸಿದ್ದ ಸೀಫರ್ಟ್ ಅವರ ವಿಕೆಟ್ ಗಳಿಸುವಲ್ಲಿ ಸ್ಪಿನ್ನರ್ ವರುಣ್ ಚಕ್ರವರ್ತಿ ಯಶಸ್ವಿಯಾದರು.

> ಐಸಿಸಿ ಪುರುಷರ ಟಿ20 ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ ಅಭಿನಂದನೆಗಳು. ಈ ಗಮನಾರ್ಹ ಗೆಲುವು ಅಸಾಧಾರಣ ಕೌಶಲ, ದೃಢನಿಶ್ಚಯ ಮತ್ತು ತಂಡದ ಶ್ರಮವನ್ನು ಪ್ರತಿಬಿಂಬಿಸುತ್ತದೆ
> **ನರೇಂದ್ರ ಮೋದಿ,** ಪ್ರಧಾನಿ

> ಟಿ20 ವಿಶ್ವಕಪ್ ಗೆಲ್ಲುವ ಮೂಲಕ ಇತಿಹಾಸದ ಹಲವಾರು ಶಿಖರಗಳನ್ನು ಏರಿದ ಭಾರತ ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು. ಇದು ನಮ್ಮ ಕ್ರಿಕೆಟ್ ಪ್ರಿಯರಿಗೆ ಅಪಾರ ಸಂತೋಷದ ಕ್ಷಣ
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

> ಸತತ ಎರಡು ಬಾರಿ ಪ್ರಶಸ್ತಿ ಜಯಿಸುವ ಮೂಲಕ ಭಾರತ ತಂಡವು ಟಿ20 ಸ್ವರೂಪದಲ್ಲಿ ವಿಶೇಷ ಸಾಧನೆ ಮೆರೆದಿದೆ. ನಮ್ಮ ತಂಡವು ಈ ಟ್ರೋಫಿಗೆ ಅರ್ಹವಾಗಿದೆ
> **ಸಚಿನ್ ತೆಂಡೂಲ್ಕರ್,** ಕ್ರಿಕೆಟ್ ದಿಗ್ಗಜ

> ಕ್ರಿಕೆಟ್ ಜಗತ್ತಿನಲ್ಲಿ ಭಾರತದ ಕೀರ್ತಿ ಪತಾಕೆ ಮತ್ತೆ ಮುಗಿಲೆತ್ತರದಲ್ಲಿ ರಾರಾಜಿಸುತ್ತಿದೆ. ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ಇದೊಂದು ಅವಿಸ್ಮರಣೀಯ ದಿನ.
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಜೈಪುರದ ವಿನ್ಯಾಸಕನಿಂದ ಟ್ರೋಫಿ ತಯಾರಿ

ಅಹಮದಾಬಾದ್ (ಪಿಟಿಐ): ಟಿ20 ಕ್ರಿಕೆಟ್ ವಿಶ್ವಕಪ್ ಟ್ರೋಫಿಯನ್ನು ಜೈಪುರ ಮೂಲದ ವಿನ್ಯಾಸಕ ಅಮಿತ್ ಪಬುವಾಲ್ ಅವರು ತಯಾರಿಸಿದ್ದಾರೆ.

ಟಿ20 ವಿಶ್ವಕಪ್‌ನ ಚೊಚ್ಚಲ (2007) ಟ್ರೋಫಿಯು ಆಸ್ಟ್ರೇಲಿಯಾ ಮೂಲದ ಮಿನಲ್ ಬ್ರೈಸ್ ಅವರ ಪರಿಕಲ್ಪನೆಯಲ್ಲಿ ಸಿದ್ಧವಾಗಿತ್ತು. ನಂತರದ ಆವೃತ್ತಿಗಳಲ್ಲಿ ಟ್ರೋಫಿಯನ್ನು ತಾವು ತಯಾರಿಸಿದ್ದಾಗಿ ಅಮಿತ್ ಹೇಳಿದ್ದಾರೆ.

ಟ್ರೋಫಿ ಸುಮಾರು 21 ಇಂಚು ಎತ್ತರ, 6 ಕೆ.ಜಿ ತೂಕವಿರಲಿದೆ. ಟ್ರೋಫಿಯನ್ನು ಬೆಳ್ಳಿಯಿಂದ ತಯಾರಿಸಿದ್ದು. ಪ್ಲಾಟಿನಂ ಲೇಪನ ಮಾಡಲಾಗುತ್ತದೆ.

ಗೆಲುವಿನ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು ಚಿತ್ರಗಳು: ಪಿಟಿಐ/ಎಎಫ್‌ಪಿ

2024ರ ನಂತರ ಭಾರತ ಗೆದ್ದ ಐಸಿಸಿ ಪ್ರಶಸ್ತಿಗಳು

ವರ್ಷ	ಪ್ರಶಸ್ತಿ	ನಾಯಕರು
2024	ಪುರುಷರ ಟಿ20 ವಿಶ್ವಕಪ್	ರೋಹಿತ್ ಶರ್ಮಾ
2025	ಚಾಂಪಿಯನ್ಸ್ ಟ್ರೋಫಿ	ರೋಹಿತ್ ಶರ್ಮಾ
2025	19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್	ನಿಕಿ ಪ್ರಸಾದ್
2025	ಮಹಿಳೆಯರ ಏಕದಿನ ವಿಶ್ವಕಪ್	ಹರ್ಮನ್‌ಪ್ರೀತ್ ಕೌರ್
2026	19 ವರ್ಷದೊಳಗಿನ ಪುರುಷರ ಟಿ20 ವಿಶ್ವಕಪ್	ಆಯುಷ್ ಮ್ಹಾತ್ರೆ
2026	ಪುರುಷರ ಟಿ20 ವಿಶ್ವಕಪ್	ಸೂರ್ಯಕುಮಾರ್ ಯಾದವ್

2ಕ್ಕೆ 255
ಭಾರತ ತಂಡವು ನ್ಯೂಜಿಲೆಂಡ್ ವಿರುದ್ಧ ದಾಖಲಿಸಿದ ಮೊತ್ತ. ಇದು ಟಿ20 ವಿಶ್ವಕಪ್‌ನಲ್ಲಿ ಮೂರನೇ ಅತಿ ಹೆಚ್ಚು ರನ್ ದಾಖಲೆಯಾಗಿದೆ

7
ಭಾರತ ತಂಡವು ಟಿ20 ಕ್ರಿಕೆಟ್ ಇತಿಹಾಸದಲ್ಲಿ ದಾಖಲೆಯ ಏಳು ಬಾರಿ 250ಕ್ಕಿಂತ ಅಧಿಕ ರನ್ ಪೇರಿಸಿದೆ

92
ಭಾರತ ತಂಡವು ಪವರ್ ಪ್ಲೇನಲ್ಲಿ ವಿಕೆಟ್ ನಷ್ಟವಿಲ್ಲದೆ ಗಳಿಸಿದ ರನ್. ಇದು ಟಿ20 ವಿಶ್ವಕಪ್‌ನಲ್ಲಿ ಹೊಸ ದಾಖಲೆಯಾಗಿದೆ

3
ಸಂಜು ಸ್ಯಾಮ್ಸನ್ ಅವರು ಟಿ20 ವಿಶ್ವಕಪ್‌ನಲ್ಲಿ ಸತತ ಮೂರನೇ ಬಾರಿ 50ಕ್ಕೂ ಅಧಿಕ ರನ್ ದಾಖಲಿಸಿದ ವಿಶ್ವದ ಏಳನೇ ಮತ್ತು ಭಾರತದ ಮೂರನೇ ಆಟಗಾರ ಎನಿಸಿದರು.

89
ಭಾರತದ ಸಂಜು ಸ್ಯಾಮ್ಸನ್ ಗಳಿಸಿದ ರನ್. ಇದು ಟಿ20 ವಿಶ್ವಕಪ್‌ನ ಯಾವುದೇ ಫೈನಲ್‌ನಲ್ಲಿ ಆಟಗಾರನೊಬ್ಬನ ಗರಿಷ್ಠ ರನ್ ದಾಖಲೆಯಾಗಿದೆ

ಅಭಿಷೇಕ್ ಶರ್ಮಾ

ಸಂಜು ಸ್ಯಾಮ್ಸನ್
ರನ್ 89
ಎಸೆತ 46
ಬೌಂಡರಿ 5
ಸಿಕ್ಸರ್ 8

ಬನಾರಸ್ ಸೀರೆ ಉಡುಗೊರೆ

ವಾರಾಣಸಿ (ಪಿಟಿಐ): ಕ್ರಿಕೆಟ್ ಆಟವನ್ನು ವಿಷಯವಸ್ತುವನ್ನಾಗಿ ಇಟ್ಟುಕೊಂಡು ಇಲ್ಲಿನ ನೇಕಾರರು 15 ಬನಾರಸ್ ಸೀರೆಗಳನ್ನು ಸಿದ್ಧಪಡಿಸಿದ್ದಾರೆ. ಈ ಸೀರೆಗಳನ್ನು ಟಿ20 ವಿಶ್ವಕಪ್ ಫೈನಲ್ ಪಂದ್ಯದ ನಂತರ ಭಾರತ ತಂಡದ ಆಟಗಾರರಿಗೆ ಉಡುಗೊರೆಯಾಗಿ ಕಳುಹಿಸಿಕೊಡಲಾಗುತ್ತಿದೆ.

ಭಾರತ ತಂಡ ಈವರೆಗೆ ಜಯಿಸಿರುವ ವಿಶ್ವಕಪ್ ಟ್ರೋಫಿಗಳು, ವಿಕೆಟ್, ಬ್ಯಾಟ್ ಹಾಗೂ ಚೆಂಡುಗಳ ಚಿತ್ರಗಳನ್ನು ಒಳಗೊಂಡ ಈ ಸೀರೆಗಳನ್ನು ವಿಶಿಷ್ಟವಾಗಿ ನೇಯಲಾಗಿದೆ. ಪ್ರತಿ ಸೀರೆ ತಯಾರಿಸಲು ₹25 ಸಾವಿರಕ್ಕೂ ಹೆಚ್ಚು ಹಣ ವ್ಯಯಿಸಲಾಗಿದೆ. ಸೀರೆ ಸಿದ್ಧಪಡಿಸಲು ನುರಿತ ಕಸುಬುದಾರರು ಒಂದೂವರೆ ತಿಂಗಳು ತೆಗೆದುಕೊಂಡಿದ್ದಾರೆ' ಎಂದು ಲಘು ಉದ್ಯೋಗ ಭಾರತಿ (ಎಲ್‌ಯುಬಿ) ಕಾಶಿ ಪ್ರಾಂತ್ಯದ ಕಾರ್ಯದರ್ಶಿ ಸರ್ವೇಶ್ ಶ್ರೀವಾಸ್ತವ ಹೇಳಿದರು.

ಸ್ಕೋರ್ ಕಾರ್ಡ್

ಭಾರತ: 20 ಓವರುಗಳಲ್ಲಿ 5 ವಿಕೆಟ್‌ಗೆ 255
ಸ್ಯಾಮ್ಸನ್ ಸಿ ಸಬ್ (ಮೆಕ್‌ಕಾಂಚಿ) ಬಿ ನೀಶಮ್ 89 (46ಎ, 4x5, 6x8)
ಅಭಿಷೇಕ್ ಸಿ ಸೀಫರ್ಟ್ ಬಿ ರವೀಂದ್ರ 52 (21ಎ, 4x6, 6x3)
ಇಶಾನ್ ಸಿ ಚಾಪ್‌ಮನ್ ಬಿ ನೀಶಮ್ 54 (25ಎ, 4x4, 6x4)
ಹಾರ್ದಿಕ್ ಸಿ ಸ್ಯಾಂಟ್ನರ್ ಬಿ ಹೆನ್ರಿ 18 (13ಎ, 4x1, 6x1)
ಸೂರ್ಯ ಸಿ ರವೀಂದ್ರ ಬಿ ನೀಶಮ್ 0 (1ಎ)
ತಿಲಕ್ ಔಟಾಗದೇ 8 (6ಎ)
ದುಬೆ ಔಟಾಗದೇ 26 (8ಎ, 4x3, 6x2)
ಇತರೆ: 8 (ವೈಡ್ 8)
ವಿಕೆಟ್ ಪತನ: 1–98 (ಅಭಿಷೇಕ್ ಶರ್ಮಾ, 7.1), 2–203 (ಸಂಜು ಸ್ಯಾಮ್ಸನ್, 15.1), 3–204 (15.5), 4–204 (ಸೂರ್ಯಕುಮಾರ್ ಯಾದವ್, 15.6), 5–226 (ಹಾರ್ದಿಕ್ ಪಾಂಡ್ಯ, 18.2).
ಬೌಲಿಂಗ್: ಮ್ಯಾಟ್ ಹೆನ್ರಿ 4–0–49–1; ಗ್ಲೆನ್ ಫಿಲಿಪ್ಸ್ 1–0–5–0; ಜೇಕಬ್ ಡಫಿ 3–0–42–0; ಲಾಕಿ ಫರ್ಗ್ಯೂಸನ್ 2–0–48–0; ಮಿಚೆಲ್ ಸ್ಯಾಂಟ್ನರ್ 4–0–33–0; ರಚಿನ್ ರವೀಂದ್ರ 2–0–32–1; ಜೇಮ್ಸ್ ನೀಶಮ್ 4–0–46–3.

ನ್ಯೂಜಿಲೆಂಡ್: 19 ಓವರುಗಳಲ್ಲಿ 159
ಸೀಫರ್ಟ್ ಸಿ ಇಶಾನ್ ಬಿ ವರುಣ್ 52 (26ಎ, 4x2, 6x5)
ಅಲೆನ್ ಸಿ ತಿಲಕ್ ಬಿ ಅಕ್ಷರ್ 9 (7ಎ, 4x1)
ರವೀಂದ್ರ ಸಿ ಇಶಾನ್ ಬಿ ಬೂಮ್ರಾ 1 (2ಎ)
ಫಿಲಿಪ್ಸ್ ಬಿ ಅಕ್ಷರ್ 5 (5ಎ, 4x1)
ಚಾಪ್‌ಮನ್ ಬಿ ಪಾಂಡ್ಯ 3 (8ಎ)
ಮಿಚೆಲ್ ಸಿ ಇಶಾನ್ ಬಿ ಅಕ್ಷರ್ 17 (11ಎ, 6x2)
ಸ್ಯಾಂಟ್ನರ್ ಬಿ ಬೂಮ್ರಾ 43 (35ಎ, 4x3, 6x2)
ನೀಶಮ್ ಬಿ ಬೂಮ್ರಾ 8 (7ಎ, 4x1)
ಹೆನ್ರಿ ಬಿ ಬೂಮ್ರಾ 0 (1ಎ)
ಫರ್ಗ್ಯೂಸನ್ ಔಟಾಗದೇ 6 (7ಎ)
ಡಫಿ ಸಿ ತಿಲಕ್ ಬಿ ಅಭಿಷೇಕ್ 3 (5ಎ)
ಇತರೆ: 12 (ಬೈ 4, ಲೆಗ್‌ಬೈ 1, ವೈಡ್ 7)
ವಿಕೆಟ್ ಪತನ: 1–31 (ಫಿನ್ ಅಲೆನ್, 2.4), 2–32 (ರಚಿನ್ ರವೀಂದ್ರ, 3.1), 3–47 (ಗ್ಲೆನ್ ಫಿಲಿಪ್ಸ್, 4.5), 4–70 (ಮಾರ್ಕ್ ಚಾಪ್‌ಮನ್, 7.4), 5–72 (ಟಿಮ್ ಸೀಫರ್ಟ್, 8.1), 6–124 (ಡೇರಿಲ್ ಮಿಚೆಲ್, 12.5), 7–141 (ನೀಶಮ್, 15.3), 8–141 (ಹೆನ್ರಿ, 15.4), 9–152 (ಸ್ಯಾಂಟ್ನರ್, 17.3), 10–159 (ಡಫಿ, 18.6)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–32–0; ಹಾರ್ದಿಕ್ ಪಾಂಡ್ 4–0–36–1; ಅಕ್ಷರ್ ಪಟೇಲ್ 3–0–27–3; ಜಸ್‌ಪ್ರೀತ್ ಬೂಮ್ರಾ 4–0–15–4; ವರುಣ್ ಚಕ್ರವರ್ತಿ 3–0–39–1; ಅಭಿಷೇಕ್ ಶರ್ಮಾ 1–0–5–1
ಪಂದ್ಯದ ಆಟಗಾರ: ಜಸ್‌ಪ್ರೀತ್ ಬೂಮ್ರಾ.
ಟೂರ್ನಿಯ ಆಟಗಾರ: ಸಂಜು ಸ್ಯಾಮ್ಸನ್.

ಫಲಿತಾಂಶ: ಭಾರತಕ್ಕೆ 96 ರನ್‌ಗಳ ಜಯ, ಚಾಂಪಿಯನ್

ಟೂರ್ನಿಯಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿವರು

ಬೌಲರ್	ದೇಶ	ಪಂದ್ಯ	ವಿಕೆಟ್	ಶ್ರೇಷ್ಠ	ಎಕಾನಮಿ
ಜಸ್‌ಪ್ರೀತ್ ಬೂಮ್ರಾ	ಭಾರತ	8	14	15ಕ್ಕೆ 4	6.21
ವರುಣ್ ಚಕ್ರವರ್ತಿ	ಭಾರತ	9	14	7ಕ್ಕೆ 3	9.25
ಶ್ಯಾಡ್ಲಿ ವ್ಯಾನ್	ಅಮೆರಿಕ	4	13	25ಕ್ಕೆ 4	6.80
ಬ್ಲೆಸಿಂಗ್ ಮುಜರಬಾನಿ	ಜಿಂಬಾಬ್ವೆ	6	13	17ಕ್ಕೆ4	7.88
ಅಬ್ದುಲ್ ರಶೀದ್	ಇಂಗ್ಲೆಂಡ್	8	13	36ಕ್ಕೆ3	8.15

ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದವರು

ಬ್ಯಾಟರ್	ದೇಶ	ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ
ಸಾಹಿಬ್‌ಝಾದ	ಪಾಕಿಸ್ತಾನ	7	383	100*	2	2
ಟಿಮ್ ಸೀಫರ್ಟ್	ನ್ಯೂಜಿಲೆಂಡ್	9	326	89*	0	4
ಸಂಜು ಸ್ಯಾಮ್ಸನ್	ಭಾರತ	5	321	97*	0	3
ಇಶಾನ್ ಕಿಶನ್	ಭಾರತ	9	317	77	0	3
ಫಿನ್ ಅಲೆನ್	ನ್ಯೂಜಿಲೆಂಡ್	9	298	100*	1	1

ಟಿ20 ವಿಶ್ವಕಪ್: ಈವರೆಗೆ ಪ್ರಶಸ್ತಿ ಗೆದ್ದ ತಂಡಗಳು

ವರ್ಷ	ಚಾಂಪಿಯನ್	ರನ್ನರ್ಸ್ ಅಪ್	ಆತಿಥ್ಯ	ಒಟ್ಟು ತಂಡ
2007	ಭಾರತ	ಪಾಕಿಸ್ತಾನ	ದಕ್ಷಿಣ ಆಫ್ರಿಕಾ	12
2009	ಪಾಕಿಸ್ತಾನ	ಶ್ರೀಲಂಕಾ	ಇಂಗ್ಲೆಂಡ್	12
2010	ಇಂಗ್ಲೆಂಡ್	ಆಸ್ಟ್ರೇಲಿಯಾ	ವೆಸ್ಟ್ ಇಂಡೀಸ್	12
2012	ವೆಸ್ಟ್ ಇಂಡೀಸ್	ಶ್ರೀಲಂಕಾ	ಶ್ರೀಲಂಕಾ	12
2014	ಶ್ರೀಲಂಕಾ	ಭಾರತ	ಬಾಂಗ್ಲಾದೇಶ	16
2016	ವೆಸ್ಟ್ ಇಂಡೀಸ್	ಇಂಗ್ಲೆಂಡ್	ಭಾರತ	16
2021	ಆಸ್ಟ್ರೇಲಿಯಾ	ನ್ಯೂಜಿಲೆಂಡ್	ಯುಎಇ/ಒಮಾನ್	16
2022	ಇಂಗ್ಲೆಂಡ್	ಪಾಕಿಸ್ತಾನ	ಆಸ್ಟ್ರೇಲಿಯಾ	16
2024	ಭಾರತ	ದಕ್ಷಿಣ ಆಫ್ರಿಕಾ	ಅಮೆರಿಕ/ವೆಸ್ಟ್‌ಇಂಡೀಸ್	20
2026	ಭಾರತ	ನ್ಯೂಜಿಲೆಂಡ್	ಭಾರತ/ಶ್ರೀಲಂಕಾ	20

ಆಲ್ ಇಂಗ್ಲೆಂಡ್: ತೈವಾನ್‌ನ ಲಿನ್ ಚಾಂಪಿಯನ್

ಲಕ್ಷ್ಯ ಸೇನ್ ರನ್ನರ್ಸ್ ಅಪ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಲಕ್ಷ್ಯ ಸೇನ್ ಅವರ ಅವರ ಅಮೋಘ ಯಶಸ್ಸಿನ ಓಟ ಫೈನಲ್‌ನಲ್ಲಿ ನಿರಾಸೆಯೊಂದಿಗೆ ಕೊನೆಗೊಂಡಿತು. ಭಾನುವಾರ ನಡೆದ ಅಂತಿಮ ಪಂದ್ಯದಲ್ಲಿ ಸೇನ್ ಅವರನ್ನು ನೇರ ಆಟಗಳಿಂದ ಸೋಲಿಸಿದ ತೈವಾನ್‌ನ ಲಿನ್ ಚುನ್‌ಯಿ ಕಿರೀಟ ಗೆದ್ದರು.

2022ರ ನಂತರ ಎರಡನೇ ಬಾರಿ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಫೈನಲ್ ಆಡಿದ ಅಲ್ಮೋರಾದ 24 ವರ್ಷದ ಸೇನ್ 15-21, 20-22ರಿಂದ ಸೋತರು. ಇದರೊಂದಿಗೆ 25 ವರ್ಷಗಳ ಬಳಿಕ ಪ್ರಶಸ್ತಿ ಗೆಲ್ಲುವ ಭಾರತದ ಕನಸು ಭಗ್ನಗೊಂಡಿತು.

ಬ್ಯಾಡ್ಮಿಂಟನ್ ದಂತಕಥೆ ಪ್ರಕಾಶ್ ಪಡುಕೋಣೆ (1980) ಮತ್ತು ಪುಲ್ಲೇಲ ಗೋಪಿಚಂದ್ (2001) ಹೊರತುಪಡಿಸಿ ಭಾರತದ ಷಟ್ಲರ್‌ಗಳಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಒಲಿದಿಲ್ಲ.

'ನನ್ನ ಪ್ರಕಾರ ಫೈನಲ್ ಪಂದ್ಯ ಉತ್ತಮವಾಗಿತ್ತು. ಮೊದಲ ಗೇಮ್‌ನಲ್ಲಿ ತೈವಾನ್ ಆಟಗಾರ ಚೆನ್ನಾಗಿ ಆಡಿದರು. ಆದರೆ, ಎರಡನೇ ಗೇಮ್ ಅನ್ನು ನಾನು ಇನ್ನೂ ಚೆನ್ನಾಗಿ ಮುಗಿಸಬಹುದಿತ್ತು. ಒಟ್ಟಾರೆ ವಾರವಿಡೀ ನಾನು ಆಡಿದ ರೀತಿ ಸಮಾಧಾನ ಉಂಟುಮಾಡಿದೆ' ಎಂದು ಲಕ್ಷ್ಯ ಅವರು ಪಂದ್ಯದ ಬಳಿಕ ಲಕ್ಷ್ಯ ಪ್ರತಿಕ್ರಿಯಿಸಿದರು.

26 ವರ್ಷದ ಲಿನ್ ಚುನ್ ಅವರು ಈ ಚಾಂಪಿಯನ್‌ಷಿಪ್‌ನಲ್ಲಿ ಸಿಂಗಲ್ಸ್ ಪ್ರಶಸ್ತಿ ಗೆದ್ದ ತೈವಾನ್‌ನ ಮೊದಲ ಆಟಗಾರ ಎಂಬ ಹಿರಿಮೆಗೆ ಪಾತ್ರವಾದರು. ಅತಿವೇಗದ ರ‍್ಯಾಲಿಗಳು ಮತ್ತು ಆಕ್ರಮಣಕಾರಿ ಆಟಕ್ಕೆ ಸಾಕ್ಷಿಯಾಗಿದ್ದ ಈ ಪಂದ್ಯವನ್ನು ಅವರು 57 ನಿಮಿಷದಲ್ಲಿ ಗೆದ್ದುಕೊಂಡರು.

ವಿಶ್ವ ಕ್ರಮಾಂಕದಲ್ಲಿ 12ನೇ ಸ್ಥಾನದಲ್ಲಿರುವ ಸೇನ್ ಫೈನಲ್ ಪ್ರವೇಶಿಸುವ ಹಾದಿಯಲ್ಲಿ ಅಗ್ರ ಕ್ರಮಾಂಕದ ಶಿ ಯು ಕಿ, ಆರನೇ ಕ್ರಮಾಂಕದ ಲೀ ಶಿಫೆಂಗ್ (ಇಬ್ಬರೂ ಚೀನಾ) ಅವರಿಗೆ ಆಘಾತ ನೀಡಿದ್ದರು.

ರನ್ನರ್ಸ್ ಅಪ್ ಲಕ್ಷ್ಯ ಸೇನ್, ಚಾಂಪಿಯನ್ ಲಿನ್ ಚುನ್ ಯಿ ಎಎಫ್‌ಪಿ ಚಿತ್ರ

ವಿಶ್ವಕಪ್ ಹಾಕಿ ಕ್ವಾಲಿಫೈಯರ್ಸ್: ಭಾರತ ಶುಭಾರಂಭ

ಹೈದರಾಬಾದ್ (ಪಿಟಿಐ): ಭಾರತದ ಮಹಿಳೆಯರ ತಂಡವು ಭಾನುವಾರ ಎಫ್‌ಐಎಚ್ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ 4–0ಯಿಂದ ಉರುಗ್ವೆ ತಂಡವನ್ನು ಮಣಿಸಿ, ಅಭಿಯಾನವನ್ನು ಆರಂಭಿಸಿದರು.

ಭಾರತದ ಪರ ಸುನೆಲಿಟಾ ಟೊಪ್ಪೊ (21ನೇ ನಿಮಿಷ), ಇಶಿಕಾ (40ನೇ), ಲಾಲ್ ರೆಮ್ಸಿಯಾಮಿ (49ನೇ) ಮತ್ತು ರುತುಜಾ ದಾದಾಸೊ ಪಿಸಾಲ್ (58ನೇ) ಗೋಲು ಗಳಿಸಿದರು.

ಭಾರತ ತಂಡವು ತನ್ನ ಮುಂದಿನ ಪಂದ್ಯದಲ್ಲಿ ಸೋಮವಾರ ಸ್ಕಾಟ್ಲೆಂಡ್ ತಂಡವನ್ನು ಎದುರಿಸಲಿದೆ. 11ರಂದು ವೇಲ್ಸ್ ತಂಡದ ವಿರುದ್ಧ ಆಡಲಿದೆ.

ರನ್ನರ್ಸ್‌ಅಪ್ ಅಂಕಿತಾ ರೈನಾ (ಎಡ) ಹಾಗೂ ಪ್ರಶಸ್ತಿ ಗೆದ್ದ ವೈಷ್ಣವಿ ಅಡ್ಕರ್ ಸಂಭ್ರಮಿಸಿದರು ಚಿತ್ರ :ತಾಜುದ್ದೀನ್ ಆಜಾದ್

ವೈಷ್ಣವಿಗೆ ಸಿಂಗಲ್ಸ್ ಕಿರೀಟ

• ಬಸವರಾಜ ದಳವಾಯಿ

ಕಲಬುರಗಿ: ಸೂರ್ಯನ ಪ್ರಖರ ಕಿರಣಗಳು ನೆತ್ತಿ ಸುಡುವ ಮುನ್ನವೇ ಕಲಬುರಗಿ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದ ಕಿರೀಟ ಪುಣೆಯ ವೈಷ್ಣವಿ ಅಡ್ಕರ್ ಅವರ ಶಿರವೇರಿತು.

ಇಲ್ಲಿಯ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಡಬ್ಲ್ಯು–35 ದರ್ಜೆಯ ಐಟಿಎಫ್ ಟೂರ್ನಿಯಲ್ಲಿ ಎಂಟನೇ ಶ್ರೇಯಾಂಕದ ಅಂಕಿತಾ ರೈನಾ (8ನೇ ಶ್ರೇಯಾಂಕ) ಅವರ ಪ್ರಬಲ ಸವಾಲನ್ನು ವೈಷ್ಣವಿ ಹಿಮ್ಮೆಟ್ಟಿಸಿದರು. ಫೈನಲ್ ಹಣಾಹಣಿಯಲ್ಲಿ ಮೂರನೇ ಶ್ರೇಯಾಂಕದ ಆಟಗಾರ್ತಿ 7–6 (7-3), 6–4ರಿಂದ ಗೆದ್ದು ಐಟಿಎಫ್ ಸಿಂಗಲ್ಸ್ ವಿಭಾಗದಲ್ಲಿ ಎರಡನೇ ಪ್ರಶಸ್ತಿಗೆ ಮುತ್ತಿಟ್ಟರು.

ಇದಕ್ಕೂ ಮೊದಲು 2024ರಲ್ಲಿ ಅಹಮದಾಬಾದ್‌ನಲ್ಲಿ ನಡೆದ ಐಟಿಎಫ್ ಡಬ್ಲ್ಯು–15 ಟೂರ್ನಿಯಲ್ಲಿ ವೈಷ್ಣವಿ ಅವರಿಗೆ ಪ್ರಶಸ್ತಿ ಒಲಿದಿತ್ತು. ಎರಡು ವಾರಗಳ ಹಿಂದೆ ಬೆಂಗಳೂರಿನಲ್ಲಿ ಡಬ್ಲ್ಯು–100 ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದರು.

ಈ ಟೂರ್ನಿಯ ಡಬಲ್ಸ್‌ನಲ್ಲಿ ಜೊತೆಯಾಗಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದ ಭಾರತದ ಆಟಗಾರ್ತಿಯರ ಮಧ್ಯದ ಸೆಣಸಾಟ ಕುತೂಹಲ ಕೆರಳಿಸಿತ್ತು. ಆದರೆ 21 ವರ್ಷ ವಯಸ್ಸಿನ ವೈಷ್ಣವಿ, ಪ್ರತಿರೋಧ ಎದುರಿಸಿದರು. ಮೊದಲ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ ಗೆದ್ದರು. ಎರಡನೇ ಸೆಟ್‌ನ ಒಂದು ಹಂತದಲ್ಲಿ ಸ್ಕೋರ್ 4–4 ಆಗಿದ್ದರೂ, ನಂತರ ಸತತ ಎರಡು ಗೇಮ್‌ಗಳನ್ನು ಗೆದ್ದು ಟ್ರೋಫಿ ತಮ್ಮದಾಗಿಸಿಕೊಂಡರು.

ಪ್ರಶಸ್ತಿ ಗೆಲುವಿನೊಂದಿಗೆ ವೈಷ್ಣವಿ ₹4.47 ಲಕ್ಷ ಬಹುಮಾನ ಹಾಗೂ 35 ಡಬ್ಲ್ಯುಟಿಎ ರ‍್ಯಾಂಕಿಂಗ್ ಗಳಿಸಿದರು. ರನ್ನರ್‌ಅಪ್ ಅಂಕಿತಾ ₹2.42 ಲಕ್ಷ ಬಹುಮಾನ ಮತ್ತು 23 ರ‍್ಯಾಂಕಿಂಗ್ ಪಾಯಿಂಟ್ಸ್ ಪಡೆದರು.

ಮಹಿಳಾ ಟೆಸ್ಟ್: ಆಸ್ಟ್ರೇಲಿಯಾ ಜಯಭೇರಿ

ಪರ್ತ್ (ಪಿಟಿಐ): ಆಸ್ಟ್ರೇಲಿಯಾ ಮಹಿಳೆಯರ ತಂಡವು ಭಾರತದ ಎದುರು ನಡೆದ ಏಕೈಕ ಪಿಂಕ್ ಬಾಲ್ ಟೆಸ್ಟ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಪಂದ್ಯದಲ್ಲಿ ಮೂರು ದಿನಗಳಿಂದ ಬಿಗಿಹಿಡಿತ ಸಾಧಿಸಿದ್ದ ಆತಿಥೇಯ ತಂಡವು ಭಾನುವಾರ ಕೇವಲ 25 ರನ್‌ಗಳ ಗುರಿಯನ್ನು ಬೆನ್ನಟ್ಟಿ 10 ವಿಕೆಟ್‌ಗಳಿಂದ ಗೆದ್ದಿತು. ನಾಯಕಿ ಅಲೀಸಾ ಹೀಲಿ ಅವರಿಗೆ ವಿದಾಯದ ಟೆಸ್ಟ್ ಪಂದ್ಯವಾಗಿತ್ತು.

ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡವು 125 ರನ್‌ಗಳ ಮುನ್ನಡೆ ಸಾಧಿಸಿತ್ತು. ಭಾರತವು ಎರಡನೇ ಇನಿಂಗ್ಸ್‌ನಲ್ಲಿ 48.2 ಓವರ್‌ಗಳಲ್ಲಿ 149 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಪ್ರತೀಕಾ ರಾವಲ್ (63 ರನ್) ಅವರು ಅರ್ಧಶತಕ ಹೊಡೆದರು. ಅವರನ್ನು ಬಿಟ್ಟರೆ ಸ್ನೇಹಾ ರಾಣಾ 30 ರನ್ ಹೊಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 62.4 ಓವರ್‌ಗಳಲ್ಲಿ 198. ಆಸ್ಟ್ರೇಲಿಯಾ: 90.4 ಓವರ್‌ಗಳಲ್ಲಿ 323. ಎರಡನೇ ಇನಿಂಗ್ಸ್: ಭಾರತ: 48.2 ಓವರ್‌ಗಳಲ್ಲಿ 149 (ಪ್ರತೀಕಾ ರಾವಲ್ 63, ಜೆಮಿಮಾ ರಾಡ್ರಿಗಸ್ 14, ಸ್ನೇಹಾ ರಾಣಾ 30, ಲೂಸಿ ಹ್ಯಾಮಿಲ್ಟನ್ 32ಕ್ಕೆ3, ಅನಾಬೆಲ್ ಸದರ್ಲೆಂಡ್ 15ಕ್ಕೆ2, ಅಲನಾ ಕಿಂಗ್ 23ಕ್ಕೆ2, ಆ್ಯಷ್ಲೆ ಗಾರ್ಡನರ್ 8ಕ್ಕೆ2) ಆಸ್ಟ್ರೇಲಿಯಾ: 4.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 28 (ಜಾರ್ಜಿಯಾ ವೊಲ್ ಔಟಾಗದೇ 16, ಫೋಬಿ ಲಿಚ್‌ಫೀಲ್ಡ್ ಔಟಾಗದೇ 11).
ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 10 ವಿಕೆಟ್ ಜಯ.
ಪಂದ್ಯದ ಮತ್ತು ಸರಣಿಯ ಆಟಗಾರ್ತಿ: ಅನ್ನಾಬೆಲ್ ಸದರ್‌ಲ್ಯಾಂಡ್.

ಮಾತೃ ಕಪ್: ನೈಋತ್ಯ ರೈಲ್ವೆ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಋತ್ಯ ರೈಲ್ವೆ ತಂಡವು ಎಸ್.ಎಂ.ಎನ್ ಸ್ಮಾರಕ ಟ್ರೋಫಿಗಾಗಿ ನಡೆದ ಮಾತೃ ಕಪ್ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಭಾನುವಾರ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಕಂಠೀರವ ಒಳಾಂಗಣ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ನೈಋತ್ಯ ರೈಲ್ವೆ ತಂಡವು ತಂಡವು 63–37ರಿಂದ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಸುಲಭವಾಗಿ ಮಣಿಸಿತು. ರೈಲ್ವೆ ತಂಡದ ಬಾಂಧವ್ಯಾ ಎಚ್.ಎಂ. (16 ಅಂಕ) ಹಾಗೂ ಸತ್ಯಾ ಕೆ. (13 ಅಂಕ) ಅಮೋಘ ಆಟದೊಂದಿಗೆ ಗೆಲುವಿನ ರೂವಾರಿಯಾದರು. ಬೀಗಲ್ಸ್ ತಂಡದ ಸಂಜನಾ (17) ಹೋರಾಟ ತೋರಿದರು.

ಚಾಂಪಿಯನ್ ನೈಋತ್ಯ ರೈಲ್ವೆ ತಂಡವು ₹1 ಲಕ್ಷ ನಗದು ಬಹುಮಾನ ಪಡೆದರೆ, ರನ್ನರ್ಸ್ ಅಪ್ ಬೀಗಲ್ಸ್ ತಂಡಕ್ಕೆ ₹70 ಸಾವಿರ ದೊರೆಯಿತು.

ತೃತೀಯ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಡಿವೈಇಎಸ್ ಮೈಸೂರು ತಂಡವು 60-40ರಿಂದ ಮೌಂಟ್ಸ್ ಕ್ಲಬ್ ತಂಡವನ್ನು ಸೋಲಿಸಿತು.

ಡಿವೈಇಎಸ್ ತಂಡದ ಮಂದಾರ ಅವರು ಟೂರ್ನಿಯ ಭರವಸೆಯ ಆಟಗಾರ್ತಿ ಗೌರವಕ್ಕೆ ಹಾಗೂ ಬೀಗಲ್ಸ್ ತಂಡದ ಸ್ವಾತಿ ಟೂರ್ನಿಯ ಆಟಗಾರ್ತಿ ಪ್ರಶಸ್ತಿಗೆ ಭಾಜನರಾದರು.

ಟ್ರೋಫಿಯೊಂದಿಗೆ ನೈಋತ್ಯ ರೈಲ್ವೆ ತಂಡ. (ಎಡದಿಂದ) ಸತ್ಯಾ ಕೆ., ಅನುಷಾ ಐ.ಪಿ., ಸೂರ್ಯ ದರ್ಶಿನಿ, ಝುರೀನ್ ಸೋಮಯ್ಯ (ಕೋಚ್), ಬಾಂಧವ್ಯ ಎಚ್.ಎಂ., ಶೋಭನಾ ಹಾಗೂ ಶ್ರುತಿ ಅರವಿಂದ್ ಚಿತ್ರ: ಪುಷ್ಕರ್ ವಿ.

MARUTI SUZUKI
NEXA
EXPERIENCE A NEW DAWN OF ELECTRIC MOBILITY.
Redefine your boundaries with Maruti Suzuki's First Electric SUV, the e VITARA.
Turn long drives into epic journeys, backed by India's Largest Fast Charging Network.
Designed to offer everything you expect from an SUV, and everything you didn't expect from an EV.
e VITARA
India goes electric
Introductory BaaS price
₹10.99 LAKH* + Battery EMI @ ₹3.99/km
e VITARA
INDIA'S LARGEST* FAST-CHARGING NETWORK
543km RANGE
543 km RANGE*
BHARAT NCAP
5 STAR SAFETY RATING BNCAP*
NEXA edge
60% ASSURED BUYBACK AFTER 3 YEARS
COMPLIMENTARY HOME CHARGER & INSTALLATION WORTH ₹50 000
8 YEARS WARRANTY
• BATTERY: 8 YEARS
• VEHICLE: 3+5(PAID) YEARS
COMPLIMENTARY CHARGING FOR 1 YEAR
SCAN TO CONNECT TO A SHOWROOM NEAR YOU
E-BOOK TODAY @ WWW.NEXAEXPERIENCE.COM
*₹ 10.99 lakh for e VITARA Delta. Battery EMI: ₹ 3.99/km (subject to financier terms). Taxes and statutory charges are extra. Visit dealership for full T&Cs. | *As certified by Kantar IMRB for an OEM platform for end-to-end usage as on November 28, 2025. | *543 km range: Certified range; actual results may vary by driving conditions and usage. | *ADAS features are for driver assistance only. Driver is responsible for safe and attentive driving. | *Always wear your seatbelt. | *Mentioned ownership plan is for e VITARA Delta variant. Calculation is done assuming vehicle is running 60 km per day, excluding charging cost. Valid on retail sales for the e VITARA till 31st March '26, capped at 1 000 units of electricity (kWh) per customer or 1 Year from the purchase of the vehicle, whichever is earlier. Assured buyback plan is available on payment basis with the option of 3 years/45 000 km or 4 years/60 000 km ownership plans (whichever is earlier). The program is offered through an Insurance company. e VITARA comes with standard warranty of 3 years/1 00 000 km with an option of extending the same on payment basis to 5 years/1 40 000 km and service activated coverage for 6th to 8th year for EV related components.